ಸಂಪುಟ: 04 ಸಂಚಿಕೆ: 318 ಪುಟಗಳು: 08 ಗುರುವಾರ 30 ಜನವರಿ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಬುದ್ಧಿಯಲ್ಲಿ ಸ್ಥಿರತೆ ಇದ್ದರೆ ಸುಖ ಬಂದಾಗ ಹಿಗ್ಗಲ್ಲ, ದುಃಖಕ್ಕೆ ಕುಗ್ಗೋದಿಲ್ಲ, ಏಕೆಂದರೆ ಇವೆರಡೂ ಕ್ಷಣಿಕವೆಂದು ಅವರಿಗೆ ತಿಳಿದಿದೆ.

## ಮೈಕ್ರೋ ಫೈನಾನ್ಸ್ ಕಿರುಕುಳ ತಡೆಗೆ ನಾಳೆಯೇ ಸುಗ್ರೀವಾಜ್ಞೆ

• ಉದಯವಾಹಿನಿ, ಬೆಂಗಳೂರು

ಮೈಕ್ರೋ ಫೈನಾನ್ಸ್ ಕಿರುಕುಳ ತಡೆಗೆ ಹೊಸ ಕಾನೂನು ನಾಳೆಯ ಕ್ಯಾಬಿನೆಟ್‌ನಲ್ಲಿ ತರಲಿದ್ದು, ಸುಗ್ರೀವಾಜ್ಞೆ ಮೂಲಕ ಕಾನೂನು ಜಾರಿಗೆ ತರುತ್ತೇವೆ ಎಂದು ಗೃಹ ಸಚಿವ ಪರಮೇಶ್ವರ್ ತಿಳಿಸಿದ್ದಾರೆ. ಸಿಎಂ ಸಭೆ ಮಾಡಿದ ಮೇಲೂ ಮೈಕ್ರೋ ಫೈನಾನ್ಸ್ ಕಂಪನಿಗಳು ಕಿರುಕುಳ ನೀಡುತ್ತಿರುವ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಕಿರುಕುಳ ಆದರೆ ಪೊಲೀಸರಿಗೆ ದೂರು ಕೊಡಬೇಕು. ಆಗ ಪೊಲೀಸರು ತಕ್ಷಣ ಕ್ರಮ ತೆಗೆದುಕೊಳ್ಳುತ್ತಾರೆ. ಮೊನ್ನೆ ಸಿಎಂ ಸಭೆಯಲ್ಲಿ ಪೊಲೀಸರು ಇಂತಹ ಕೇಸ್ ಬಗ್ಗೆ ಸುಮೋಟೋ ತೆಗೆದುಕೊಳ್ಳಬೇಕು ಎಂದು ತಿಳಿಸಿದ್ದೇವೆ. ಇವತ್ತು ಮೈಕ್ರೋ ಫೈನಾನ್ಸ್ ಕಾನೂನು ಮಾಡುವ ಬಗ್ಗೆ ಸಭೆ ಕರೆದಿದ್ದೇವೆ. ಇವತ್ತು ಬಿಲ್ ಬಗ್ಗೆ ನಾನು, ಕಾನೂನು ಸಚಿವರು, ಕಂದಾಯ ಸಚಿವರು ಸಭೆ ಮಾಡಿ ಬಿಲ್ ಅಂತಿಮ ಮಾಡುತ್ತೇವೆ. ನಾಳೆಯ ಕ್ಯಾಬಿನೆಟ್ ನಲ್ಲಿ ಸುಗ್ರೀವಾಜ್ಞೆ ಹೊರಡಿಸಲು ಕ್ರಮ ತೆಗೆದುಕೊಂಡು ರಾಜ್ಯಪಾಲರಿಗೆ ಕಳಿಸ್ತೀವಿ ಅಂತ ತಿಳಿಸಿದರು. ಈಗಾಗಲೇ ಎಸ್‌ಪಿ–ಡಿಸಿಗಳ ಸಭೆ ಮಾಡಿ ಅಗತ್ಯ ಕ್ರಮಕ್ಕೆ ಸೂಚನೆ ನೀಡಿದ್ದೇವೆ. ಸಹಾಯವಾಣಿ ಕೂಡಾ ಪ್ರಾರಂಭ ಮಾಡಿದ್ದೇವೆ. ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಡುವುದು ಮತ್ತು ಇದಕ್ಕಾಗಿ ಒಂದು ಪ್ರತ್ಯೇಕ ವಿಂಗ್ ಪ್ರಾರಂಭ ಮಾಡೋದು ಬಿಲ್ ನಲ್ಲಿ ಅಂಶಗಳನ್ನ ಸೇರಿಸಿದ್ದೇವೆ ಎಂದರು. ಕೆಲವು ಮೈಕ್ರೋ ಫೈನಾನ್ಸ್ ಅವರು ಹಣ ವಸೂಲಿಗೆ ಔಟ್ ಸೋರ್ಸ್ ಕೊಟ್ಟಿರುತ್ತಾರೆ. ಅವರು ಬಂದು ಗುಂಡಾ ವರ್ತನೆ ಮಾಡೋ ಕೆಲಸ ಮಾಡ್ತಿದ್ದಾರೆ. ಆದರೆ ಅದನ್ನ ಮಾಡಿದ್ರೆ ಕ್ರಮ ತೆಗೆದುಕೊಳ್ಳುತ್ತೀವಿ. ಕಂಪನಿ ಅವರಿಗೂ ಈಗಾಗಲೇ ಸೂಚನೆ ಕೊಟ್ಟಿದ್ದೇವೆ. ಇವತ್ತು ಸುಗ್ರೀವಾಜ್ಞೆ ಹೊರಡಿಸೋ ಕಾನೂನು ಬಗ್ಗೆ ಸಭೆ ಮಾಡಿ ಇವತ್ತೇ ಕಾನೂನು ಅಂತಿಮ ಮಾಡುತ್ತೇವೆ ಎಂದು ತಿಳಿಸಿದರು.



## ಇ.ಡಿ. ತನಿಖೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ: ವಿಜಯೇಂದ್ರ

• ಉದಯವಾಹಿನಿ, ಬೆಂಗಳೂರು

ಮುಡಾ ವಿಚಾರದಲ್ಲಿ ಜಾರಿ ನಿರ್ದೇಶನಾಲಯವು ಸಿದ್ದರಾಮಯ್ಯನವರ ಧರ್ಮಪತ್ನಿ ಹಾಗೂ ಸಚಿವ ಬೈರತಿ ಸುರೇಶ್ ಅವರಿಗೆ ನೋಟಿಸ್ ನೀಡಿದ್ದು, ತನಿಖೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ, ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು. ಮುಡಾ ಹಗರಣದ ವಿರುದ್ಧ ಬಿಜೆಪಿ– ಜೆಡಿಎಸ್ ಒಟ್ಟಾಗಿ ಪಾದಯಾತ್ರೆ ನಡೆಸಿದ್ದೆವು. ನಮ್ಮ ಹೋರಾಟ ಪರಿಣಾಮವಾಗಿ ಸಿದ್ದರಾಮಯ್ಯನವರ ಧರ್ಮಪತ್ನಿ 14 ನಿವೇಶನ ಹಿಂತಿರುಗಿಸುವುದಾಗಿ ರಾತ್ರೋರಾತ್ರಿ ಮುಡಾಗೆ ಪತ್ರ ಬರೆದಿದ್ದರು. ಆ ಪತ್ರದ ಮೂಲಕ ಹಗರಣದಿಂದ ಹೊರಕ್ಕೆ ಬಂದ ಭ್ರಮೆಯಲ್ಲಿಸಿಎಂ ಇದ್ದರು. ಆದರೆ ಇ.ಡಿ. ನೋಟಿಸ್‌ನಿಂದ ಅವರಿಗೆ ಆಘಾತವಾಗಿರುವುದರಲ್ಲಿ ಅನುಮಾನವಿಲ್ಲ ಎಂದು ತಿಳಿಸಿದರು. ಇ.ಡಿ.ಗೆ ಅವರದೇ ಆದ ನಿಯಮಗಳಿದ್ದು, ಅದರಂತೆ ತನಿಖೆ ಮುಂದುವರಿಸುತ್ತಾರೆ. ಇ.ಡಿ. ನೋಟಿಸ್ ರಾಜಕೀಯಪ್ರೇರಿತ ಎಂಬುದಕ್ಕಿಂತ ಹೆಚ್ಚಾಗಿ ಕಾಂಗ್ರೆಸ್ ಆಡಳಿತಾವಧಿಯಲ್ಲಿಬಡವರಿಗೆ ಸಿಗಬೇಕಿದ್ದ ಸಾವಿರಾರು ಕೋಟಿ ಮೌಲ್ಯದ ನಿವೇಶನಗಳು ಅನರ್ಹರಿಗೆ ಅಕ್ರಮವಾಗಿ ಹಂಚಿಕೆಯಾಗಿತ್ತು. ಈ ದೊಡ್ಡ ಹಗರಣದ ಪರಿಣಾಮವನ್ನು ಮುಂದಿನ ದಿನಗಳಲ್ಲಿ ಎದುರಿಸಬೇಕಾಗುತ್ತದೆ, ಎಂದು ಹೇಳಿದರು. ಡಿಸಿಎಂ ಮುಖದಲ್ಲಿ ಮಂದಹಾಸ ಇ.ಡಿ. ನೋಟಿಸ್ ಬೆಳವಣಿಗೆ ವಿಚಾರವಾಗಿ ಇ.ಡಿ.ಯದ್ದು ರಾಜಕೀಯಪ್ರೇರಿತ ನಡೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಅವರ ಮುಖದಲ್ಲಿ ಮಂದಹಾಸ ಕಾಣುತ್ತಿದೆ. ಅಬ್ಬಾ... ಸಿದ್ದರಾಮಯ್ಯನವರ ಕುಟುಂಬಕ್ಕೆ ಇ.ಡಿ. ನೋಟಿಸ್ ಕೊಟ್ಟಿದೆ ಎಂಬ ಸಂತೋಷ ಅವರ ಮುಖದಲ್ಲಿತ್ತು, ಎಂದು ಟಾಂಗ್ ನೀಡಿದರು.

## ಮಹಾ ಕುಂಭಮೇಳಕ್ಕೆ ತೆರಳಿದ್ದ ಬೆಳಗಾವಿಯ 8 ಜನರು ನಾಪತ್ತೆ

• ಉದಯವಾಹಿನಿ, ಧಾರವಾಡ

ಉತ್ತರ ಪ್ರದೇಶದ ಪ್ರಯಾಗ ರಾಜ್ ನಲ್ಲಿ ನಡೆಯುತ್ತಿರುವ ಕುಂಭ ಮೇಳದಲ್ಲಿ ಕಾಲ್ತುಳಿತ ದುರಂತ ಪ್ರಕರಣಕ್ಕೆ ಸಂಬಂಧಪಟ್ಟಂತೆ, ಇದುವರೆಗೂ ಬೆಳಗಾವಿ ಜಿಲ್ಲೆಯ ನಾಲ್ವರು ಸಾವನ್ನಪ್ಪಿದ್ದಾರೆ. ಅಲ್ಲದೆ ಇನ್ನೂ ಎಂಟು ಜನರು ಸಂಪರ್ಕಕ್ಕೆ ಸಿಕ್ಕಿಲ್ಲ ಎಂದು ಸಂಸದ ಜಗದೀಶ್ ಶೆಟ್ಟರ್ ಹೇಳಿಕೆ ನೀಡಿದರು. ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಿನ್ನೆ ರಾತ್ರಿಯಿಂದ ಬೆಳಗಾವಿಯ ಇನ್ನೂ 8 ಜನರು ಸಂಪರ್ಕಕ್ಕೆ ಸಿಗುತ್ತಿಲ್ಲ. ನಾಪತ್ತೆಯಾದವರನ್ನು ಸಂಪರ್ಕಿಸಲು ನಾವು ಸತತವಾಗಿ ಪ್ರಯತ್ನ ಮಾಡುತ್ತಿದ್ದೇವೆ. 8 ಜನರ ಬಗ್ಗೆ ಇನ್ನೂ ಯಾವುದೇ ಮಾಹಿತಿ ಸಿಕ್ಕಿಲ್ಲ.8 ಜನ ನಿನ್ನೆ ರಾತ್ರಿಯಿಂದ ಸಂಪರ್ಕಕ್ಕೆ ಸಿಕ್ಕಿಲ್ಲ ಅವರನ್ನು ಸಂಪರ್ಕಿಸುವ ಕೆಲಸ ಮಾಡುತ್ತಿದ್ದೇವೆ ಈವರೆಗೂ ಅವರ ಬಗ್ಗೆ ಯಾವ ಮಾಹಿತಿಯೂ ಇಲ್ಲ ಎಂದು ಜಗದೀಶ್ ಶೆಟ್ಟರ್ ಆತಂಕ ವ್ಯಕ್ತಪಡಿಸಿದ್ದಾರೆ.






# ಅಯ್ಯೋ ಭಗವಂತ ಇದೆಂಥಾ ದುರಂತ

**ಮಹಾಕುಂಭ ಮೇಳದಲ್ಲಿ ಭೀಕರ ಕಾಲ್ತುಳಿತ**
**30 ಮಂದಿ ಸಾವು, 60ಕ್ಕೂ ಹೆಚ್ಚು ಜನರಿಗೆ ಗಾಯ**
**ವಿಐಪಿ ಧೋರಣೆಯೇ ಕುಂಭಮೇಳ ಕಾಲ್ತುಳಿತಕ್ಕೆ ಕಾರಣ**
**ಮಹಾಕುಂಭದಲ್ಲಿ ಕಾಲ್ತುಳಿತದ ಹಿನ್ನೆಲೆಯಲ್ಲಿ**
**2ನೇ ಅಮೃತ ಸ್ನಾನಕ್ಕೆ ತಾತ್ಕಾಲಿಕ ತಡೆ**



• ಉದಯವಾಹಿನಿ, ಪ್ರಯಾಗ್‌ರಾಜ್

ಪವಿತ್ರ ಮಹಾಕುಂಭ ಮೇಳ ನಡೆಯುತ್ತಿರುವ ಇಲ್ಲಿನ ತ್ರಿವೇಣಿ ಸಂಗಮದ ಸಮೀಪ ತಡರಾತ್ರಿ ಸಂಭವಿಸಿದ ಭೀಕರ ಕಾಲ್ತುಳಿತದಲ್ಲಿ 30 ಮಂದಿ ಭಕ್ತರು ಸಾವನ್ನಪ್ಪಿದ್ದಾರೆ ಹಾಗೂ 60ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಡಿಐಜಿ ವೈಭವ್ ಕೃಷ್ಣ ಅವರು ಅಧಿಕೃತ ಮಾಹಿತಿ ನೀಡಿದ್ದಾರೆ.

90 ಜನರನ್ನು ಆಸ್ಪತ್ರೆಗೆ ಕರೆತರಲಾಗಿದೆ. 60 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. 25 ಮೃತರನ್ನು ಗುರುತಿಸಲಾಗಿದೆ. ಭಾರೀ ಜನಸಂದಣಿಯಿಂದಾಗಿ ಈ ಅವಘಡ ಸಂಭವಿಸಿದೆ ಎಂದು ಅವರು ಮಾಹಿತಿ ನೀಡಿದ್ದಾರೆ. ಇನ್ನೂ ಕೆಲವರು ನಾಪತ್ತೆಯಾಗಿದೆ ಎಂದು ಇತ್ತೀಚಿನ ವರದಿಗಳು ತಿಳಿಸಿವೆ. ಕಾಲ್ತುಳಿತದ ವೇಳೆ ನೂಕುನುಗ್ಗಲು ಉಂಟಾದಾಗ ಸ್ನಾನಕ್ಕೆ ಸೇರಿದ್ದ ಭಕ್ತರು ಚೆಲ್ಲಾಪಿಲ್ಲಿಯಾಗಿ ಓಡಿದ್ದಾರೆ. ಸ್ಥಳದಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ಶೂ, ಚಪ್ಪಲಿ, ಬಟ್ಟೆಗಳು ಘಟನೆಯ ಗಂಭೀರತೆಯನ್ನು ಸೂಚಿಸುತ್ತಿವೆ. ಈ ಹಿನ್ನೆಲೆ ಇದೀಗ ಅಮೃತ ಸ್ನಾನವನ್ನು ತಾತ್ಕಾಲಿಕವಾಗಿ ರದ್ದು ಮಾಡಿದ್ದಾರೆ. ಕಾಲ್ತುಳಿತದ ವೇಳೆ ಕರ್ನಾಟಕದ ಬೆಳಗಾವಿಯಿಂದ ತೆರಳಿದ್ದವರಲ್ಲಿ ನಾಲ್ವರು ಸಾವನ್ನಪ್ಪಿದ್ದಾರೆ ಎಂದು ಬೆಳಗಾವಿ ಜಿಲ್ಲಾಧಿಕಾರಿ ಮಾಹಿತಿ ನೀಡಿದ್ದಾರೆ. ಇದರಲ್ಲಿ ಇನ್ನೂ ಕೆಲವರು ನಾಪತ್ತೆಯಾಗಿರುವ ಮಾಹಿತಿ ಲಭ್ಯವಾಗಿದೆ. ಬೆಳಗಾವಿಯ ಮಹಿಳೆ ಸರೋಜಿನಿ ಅವರು, ನಾವು ಎರಡು ಬಸ್‌ಗಳಲ್ಲಿ 60 ಜನ ಮಹಾಕುಂಭ ಮೇಳಕ್ಕೆ ಬಂದಿದ್ದೇವೆ. ಇದ್ದಕ್ಕಿದ್ದಂತೆ ಕಾಲ್ತುಳಿತ ಉಂಟಾಯಿತು. ನಮ್ಮ ಜೊತೆ ಬಂದರಲ್ಲಿ ನಾಲ್ಕೈದು ಜನ ಕಾಣುತ್ತಿಲ್ಲ. ನಮ್ಮದು ಒಂಭತ್ತು ಜನರ ಗುಂಪು ಇತ್ತು. ಇದರಲ್ಲಿ ಮೂರ್ನಾಲ್ಕು ಜನರು ಇಲ್ಲೇ ಇದ್ದಾರೆ. ಉಳಿದವರು ಕಾಣುತ್ತಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು. ಪ್ರಯಾಗ್‌ರಾಜ್‌ನಲ್ಲಿ ಈಗಾಗಲೇ ಮಕರ ಸಂಕ್ರಾಂತಿ, ಪೌರ್ಣಿಮೆ ಸೇರಿದಂತೆ ಮಹತ್ವದ ದಿನಗಳಂದು ಕೋಟ್ಯಂತರ ಭಕ್ತರು ಪವಿತ್ರ ಸ್ನಾನ ಮಾಡಿದ್ದಾರೆ. ಇಂದು ಮೌನಿ ಅಮಾವಾಸ್ಯೆಯಾಗಿದ್ದು ಮತ್ತೊಂದು ಪವಿತ್ರ ಸ್ನಾನಕ್ಕೆ ಪ್ರಮುಖವಾದ ದಿನ. ಈ ದಿನ 10 ಕೋಟಿ ಭಕ್ತರು ತ್ರಿವೇಣಿ ಸಂಗಮದಲ್ಲಿ ಸ್ನಾನ ನಡೆಸುವ ಸಾಧ್ಯತೆ ಇದೆ ಎಂದು ಉತ್ತರ ಪ್ರದೇಶ ಸರ್ಕಾರ ಅಂದಾಜಿಸಿತ್ತು. ಈ ನಿಟ್ಟಿನಲ್ಲಿ ಹೆಚ್ಚಿನ ಭದ್ರತಾ ಕ್ರಮಗಳನ್ನೂ ತೆಗೆದುಕೊಳ್ಳಲಾಗಿತ್ತು. ಮುನ್ನೆಚ್ಚರಿಕೆಯಾಗಿ ಗಡಿಭಾಗದಲ್ಲಿ ವಾಹನಗಳಿಗೆ ತಡೆ: ತಡರಾತ್ರಿ ನಡೆದ ಕಾಲ್ತುಳಿತದ ಹಿನ್ನೆಲೆಯಲ್ಲಿ ಪ್ರಯಾಗರಾಜ್ ಪಕ್ಕದ 8 ಜಿಲ್ಲೆಗಳ ಗಡಿಗಳಲ್ಲಿ ವಾಹನಗಳನ್ನು ನಿಲ್ಲಿಸಲಾಗಿದೆ. ಕುಂಭಮೇಳದ ಆಡಳಿತದಿಂದ ಅನುಮತಿ ಸಿಗುವವರೆಗೆ ವಾಹನಗಳು ಮುಂದೆ ಸಾಗುವಂತಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಗಡಿಯಲ್ಲಿ ವಾಹನಗಳನ್ನು ರಸ್ತೆಯ ಮೇಲೆಯೇ ನಿಲ್ಲಿಸಲಾಗುತ್ತದೆ ಅಥವಾ ಪಾರ್ಕಿಂಗ್ ಸ್ಥಳದಲ್ಲಿ ವಾಹನಗಳ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ. ಮಹಾಕುಂಭದಲ್ಲಿ ಜನಸಂದಣಿ ಕಡಿಮೆಯಾಗುತ್ತಿದ್ದಂತೆ ಅಥವಾ ಎಲ್ಲಾವೂ ಸರಾಗವಾದ ಬಳಿಕ ಈ ವಾಹನಗಳಿಗೆ ತೆರಳಲು ಅನುಮತಿ ನೀಡಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ. ಎಲ್ಲಾ ಗಡಿಗಳಲ್ಲಿ ಸುಮಾರು 2 ಲಕ್ಷಕ್ಕೂ ಹೆಚ್ಚು ವಾಹನಗಳನ್ನು ತಡೆಯಲಾಗಿದೆ. ಮಹಿಳೆಯರಿಗೆ ಉಸಿರುಗಟ್ಟಿದೆ ಮತ್ತು ಕೆಳಗೆ ಬೀಳಲು ಪ್ರಾರಂಭಿಸಿದರು. ಇದರಿಂದಾಗಿ ಕಾಲ್ತುಳಿತ ಮತ್ತಷ್ಟು ಹೆಚ್ಚಾಯಿತು ಮತ್ತು ಜನರು ಕೂಗಾಡಲು ಮತ್ತು ಕಿರುಚಲು ಪ್ರಾರಂಭಿಸಿದರು. ಆ ದೃಶ್ಯ ತುಂಬಾ ಭಯಾನಕವಾಗಿತ್ತು ಎಂದು ಪ್ರತ್ಯಕ್ಷ ದರ್ಶಿಗಳು ತಿಳಿಸಿದ್ದಾರೆ. ಮೂಲಗಳ ಪ್ರಕಾರ, ನೂಕುನುಗ್ಗಲು ಸಂಭವಿಸಿದಾಗ ಮತ್ತು ಬ್ಯಾರಿಕೇಡ್ ಮುರಿದು ಜನರು ಪರಸ್ಪರರ ಮೇಲೆ ಬಿದ್ದಾಗ ಕೆಲವು ಮಹಿಳೆಯರಿಗೆ ಭಾರೀ ಗುಂಪಿನಲ್ಲಿ ಉಸಿರುಗಟ್ಟಿದ ಅನುಭವವಾಗಿದೆ. ಕಾಲ್ತುಳಿತದ ನಂತರ, ಮಹಾಕುಂಭದ ವ್ಯವಸ್ಥೆಯಲ್ಲಿ ಆಡಳಿತವು ಬದಲಾವಣೆಗಳನ್ನು ಮಾಡಿದೆ. ಸಂಗಮ ನಗರಕ್ಕೆ ಭಕ್ತರ ಪ್ರವೇಶವನ್ನು ಸ್ಥಗಿತಗೊಳಿಸಲಾಗಿದೆ. ಜನರ ಗುಂಪನ್ನು ನಗರದ ಹೊರಗೆ ನಿಲ್ಲಿಸಲಾಗಿದೆ. ರಕ್ಷಣಾ ಕಾರ್ಯಾಚರಣೆಗಳು ನಡೆಯುತ್ತಿವೆ ಮತ್ತು ಹೆಚ್ಚಿನ ಜನಸಂದಣಿಯಿಂದ ಉಂಟಾದ ಗೊಂದಲದಲ್ಲಿ ಗಾಯಗೊಂಡವರನ್ನು ಸೆಂಟ್ರಲ್ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಘಟನೆ ನಡೆದ ಸ್ಥಳದಲ್ಲಿ ಭಕ್ತರ ಚಪ್ಪಲಿ, ಸಾಮಾನುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ.


ಪ್ರಯಾಗ್‌ರಾಜ್ ಮಹಾಕುಂಭಮೇಳದದಲ್ಲಿ ಪಾಲ್ಗೊಂಡಿದ್ದ ಬೆಳಗಾವಿ ನಾಲ್ವರು ಕಾಲ್ತುಳಿತದಲ್ಲಿ ಮೃತಪಟ್ಟಿದ್ದು ದೃಢವಾಗಿದೆ. ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅಧಿಕೃತ ಮಾಹಿತಿ ನೀಡಿದ್ದಾರೆ. ಬೆಳಗಾವಿಯ ಜ್ಯೋತಿ ಹತ್ತರವಾಟ (50) ಮತ್ತು ಮೇಘಾ ಹತ್ತರವಾಟ ಮೃತರಾಗಿ



**ತಾಯಿ-ಮಗಳು ಸೇರಿ ಬೆಳಗಾವಿಯ ನಾಲ್ವರು ಸಾವು**

ದ್ದಾರೆ. ಇದಾದ ಬಳಿಕ ಬೆಳಗಾವಿಯ ಶೆಟ್ಟಿಗಲ್ಲಿಯ ಅರುಣ ಕೋಪರ್ಡೆ ಮೃತಪಟ್ಟಿರುವ ಮಾಹಿತಿ ಲಭ್ಯವಾಗಿದೆ. ಅರುಣ ಅವರು ಪತ್ನಿ ಜೊತೆಗೆ ಪ್ರಯಾಗ್ ರಾಜ್‌ಗೆ ತೆರಳಿದ್ದರು. ಬುಧವಾರ ಕಾಲ್ತುಳಿತದಲ್ಲಿ ಗಂಭೀರ ಗಾಯಗೊಂಡಿದ್ದ ಅರುಣ್ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಿಸದೇ ಮೃತಪಟ್ಟಿದ್ದು, ಅರುಣ್ ಮನೆಗೆ ಬೆಳಗಾವಿ ತಹಶೀಲ್ದಾರ್ ಸಿಬ್ಬಂದಿ ಭೇಟಿ ನೀಡಿ ಮಾಹಿತಿ ಖಚಿತ ಪಡಿಸಿದ್ದಾರೆ. ಶಿವಾಜಿ ನಗರದ ನಿವಾಸಿ ಮಹಾದೇವಿ ಬಾವನೂರ (51) ಕೂಡ ಸಾವನ್ನಪ್ಪಿದ್ದಾರೆ. ಶಾಸಕ ರಾಜು ಸೇಠ್ ಕುಟುಂಬಸ್ಥರನ್ನು ಭೇಟಿಯಾಗಿ ವಿಷಯ ಮುಟ್ಟಿಸಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಿದ್ದಾರೆ.

### ಯಾವುದೇ ರೈಲುಗಳು ರದ್ದಾಗಿಲ್ಲ



ಕುಂಭಾಮೇಳಾ ಆಡಳಿತವು ಸಂಗಮದ ತುದಿಯಲ್ಲಿ ಅಖಾಡಾಗಳ ಸ್ನಾನಕ್ಕಾಗಿ ನಿಗದಿಪಡಿಸಿದ ಪ್ರದೇಶವನ್ನು ಸ್ವಚ್ಛಗೊಳಿಸುತ್ತಿದೆ. ಪ್ರದೇಶವನ್ನು ಸ್ವಚ್ಛಗೊಳಿಸಿದ ನಂತರ ಸ್ನಾದ ಅಖಾಡಗಳಲ್ಲಿ ಅಮೃತಸ್ನಾನ ಮಾಡಲು ಅವಕಾಶ ನೀಡಲಾಗುವುದು. ರೈಲ್ವೆ ಸಚಿವಾಲಯ ಯಾವುದೇ ವಿಶೇಷ ರೈಲುಗಳನ್ನು ರದ್ದುಗೊಳಿಸುವ ಯೋಜನೆ ಇಲ್ಲ ಎಂದು ತಿಳಿಸಿದೆ. ಪ್ರಯಾಗ್ ರಾಜ್‌ನ ವಿವಿಧ ನಿಲ್ದಾಣಗಳಿಂದ 360ಕ್ಕೂ ಹೆಚ್ಚು ರೈಲುಗಳನ್ನು ನಿಯೋಜಿಸಿದೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮಹಾಕುಂಭದ ಪರಿಸ್ಥಿತಿಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತಿದ್ದಾರೆ. ಮುಖ್ಯ ಕಾರ್ಯದರ್ಶಿ, ಡಿಜಿಪಿ, ಪ್ರಧಾನ ಕಾರ್ಯದರ್ಶಿ– ಗೃಹ, ಸಿಎಂಒ ಅಧಿಕಾರಿಗಳು ಮತ್ತು ಎಡಿಜಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಮಹಾ ಕುಂಭ 2025 ಗಾಗಿ ಸ್ಥಾಪಿಸಲಾದ ವಾರ್ ರೂಮ್‌ಗಳ ವ್ಯವಸ್ಥೆ ಮಾಡಲಾಗಿದೆ.



ಸಂಗಮದಲ್ಲಿ ನಡೆದ ಕಾಲ್ತುಳಿತದ ಬಗ್ಗೆ ಕಾಂಗ್ರೆಸ್ ಪಕ್ಷ ಕೇಂದ್ರ ಮತ್ತು ಉತ್ತರ ಪ್ರದೇಶ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದು, ಸಾಮಾನ್ಯ ಭಕ್ತರ ಬದಲಿಗೆ ವಿಐಪಿಗಳಿಗೆ ಆದ್ಯತೆ ನೀಡಿದ್ದೆ ಇಂತಹ ಅನಾಹುತಕ್ಕೆ ಕಾರಣ. ವಿಐಪಿ ಸಂಸ್ಕೃತಿಗೆ ಲಗಾಮು ಹಾಕಬೇಕು.ಪ್ರಯಾಗರಾಜ್ ನಲ್ಲಿ ನಡೆಯುವ ಮಹಾಕುಂಭದಲ್ಲಿ ಸಾಮಾನ್ಯ ಭಕ್ತರ ಅಗತ್ಯಗಳನ್ನು ಪೂರೈಸಲು ಸರ್ಕಾರವು ಉತ್ತಮ ವ್ಯವಸ್ಥೆಗಳನ್ನು ಮಾಡಬೇಕು.

-ರಾಹುಲ್ ಗಾಂಧಿ , ಕಾಂಗ್ರೆಸ್ ಧುರೀಣ



ಮಹಾಕುಂಭದ ವೇಳೆ ತೀರ್ಥರಾಜ್ ಸಂಗಮದ ದಡದಲ್ಲಿ ಉಂಟಾದ ಕಾಲ್ತುಳಿತದಿಂದ ಅನೇಕ ಜನರು ಪ್ರಾಣ ಕಳೆದುಕೊಂಡಿದ್ದಾರೆ ಮತ್ತು ಹಲವರು ಗಾಯಗೊಂಡಿದ್ದಾರೆ ಎಂಬ ಸುದ್ದಿ ಅತ್ಯಂತ ದುಃಖಕರವಾಗಿದೆ. ಭಕ್ತರ ಕುಟುಂಬಗಳಿಗೆ ನಮ ಆಳವಾದ ಸಂತಾಪ ಮತ್ತು ಗಾಯಾಳುಗಳು ಶೀಘ್ರ ಗುಣಮುಖರಾಗಲಿ ಎಂದು ಹಾರೈಸುತ್ತೇವೆ.

-ಮಲ್ಲಿಕಾರ್ಜುನ ಖರ್ಗೆ ಎಐಸಿಸಿ ಅಧ್ಯಕ್ಷ

### ಮಾಹಿತಿ ಪಡೆದ ಶಾ,ಮೋದಿ

ಪ್ರಯಾಗ್‌ರಾಜ್ ನಲ್ಲಿ ಉಂಟಾದ ಕಾಲ್ತುಳಿತಕ್ಕೆ ತೀವ್ರ ದಿಗ್ಭ್ರಾಂತಿ ವ್ಯಕ್ತಪಡಿಸಿರುವ ಪ್ರಧಾನಿ ಮೋದಿ ಮತ್ತು ಶಾ ಅವರು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರಿಗೆ ಕರೆ ಮಾಡಿ ಪರಿಸ್ಥಿತಿ ಅವಲೋಕಿಸಿ,ಅಗತ್ಯವಿರುವ ಎಲ್ಲಾ ನೆರವು ನೀಡುವುದಾಗಿ ತಿಳಿಸಿದ್ದಾರೆ. ಮೌನಿ ಅಮಾವಾಸ್ಯೆಯಂದು ಮುಂಜಾನೆ ಡ್ರೋನ್ ದೃಶ್ಯಗಳಲ್ಲಿ ಸಂಗಮ ಘಾಟ್‌ನಲ್ಲಿ ಅಪಾರ ಸಂಖ್ಯೆಯ ಭಕ್ತರು ಜಮಾಯಿಸಿದ್ದು ಕಂಡುಬಂದಿತು. ಸಂಗಮದಲ್ಲಿ ಕಾಲ್ತುಳಿತದಂತಹ ಪರಿಸ್ಥಿತಿ ಉಂಟಾದ ನಂತರ ಕೇಂದ್ರ ಗೃಹ ಸಚಿವ ಶಾ ಅವರು ಸಿಎಂ ಯೋಗಿ ಆದಿತ್ಯನಾಥ್ ಅವರೊಂದಿಗೆ ಮಾತನಾಡಿದ್ದಾರೆ. ಕೇಂದ್ರದಿಂದ ಸಂಪೂರ್ಣ ಬೆಂಬಲ ನೀಡುವುದಾಗಿ ಭರವಸೆ ನೀಡಿದರು.



## ಬಿವೈ ವಿಜಯೇಂದ್ರ ರಾಜಕೀಯವಾಗಿ ನನ್ನ ಸಮಾಧಿ ಮಾಡಲು ಹೊರಟಿದ್ದಾರೆ

**ಸಂಸದ ಕೆ.ಸುಧಾಕರ್ ಹೊಸ ಬಾಂಬ್!**




• ಉದಯವಾಹಿನಿ, ಬೆಂಗಳೂರು

ವಿಜಯೇಂದ್ರ ದ್ವೇಷದ ರಾಜಕಾರಣ ಮಾಡುತ್ತಿದ್ದಾರೆ. ಬೊಮ್ಮಾಯಿ ಅವರ ಜೊತೆಗೆ ಕೆಲಸ ಮಾಡಿದಕ್ಕಾಗಿ ದ್ವೇಷ ಮಾಡುತ್ತಿದ್ದಾರೆ. ಬಸವಣ್ಣನವರ ಪಾದದ ಮೇಲೆ ಪ್ರಮಾಣ ಮಾಡಿದ್ದು ಗೊತ್ತಿಲ್ವಾ? ಬಸವಣ್ಣನವರ ಪಾದದ ಮೇಲೆ ಆಣೆ ಮಾಡಿದಂತೆ ನಡೆದುಕೊಂಡರಾ? ಬಿಎಸ್ ವೈ ಅವರ ಯಾವ ಗುಣ ವಿಜಯೇಂದ್ರ ಬಳಿ. ಕೇವಲ ಹಠ, ದ್ವೇಷದ ರಾಜಕಾರಣ ಮಾಡುತ್ತಿದ್ದಾರೆ. ಬಿವೈ ವಿಜಯೇಂದ್ರ ರಾಜಕೀಯವಾಗಿ ನನ್ನ ಸಮಾಧಿ ಮಾಡಲು ಹೊರಟಿದ್ದಾರೆ ಎಂದು ಬಿವೈ ವಿಜಯೇಂದ್ರ ವಿರುದ್ಧ ಚಿಕ್ಕಬಳ್ಳಾಪುರ ಸಂಸದ ಡಾ.ಕೆ ಸುಧಾಕರ್ ಆಕ್ರೋಶ ಅವರ ಹಾಕಿದರು.ಇಂದು ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಬಿಜೆಪಿ ಬಹಳ ಪ್ರಬಲವಾಗಿರುವ ಕಡೆಗೆ ತಿಣುಕಾಡಿಕೊಂಡು ಗೆದ್ದಿದ್ದೀರಿ. ವರಿಷ್ಠರನ್ನು ಭೇಟಿಯಾಗಿ ನಿಮ್ಮ ಎಲ್ಲಾ ವ್ಯವಹಾರ ಗಮನಕ್ಕೆ ತರುತ್ತೇನೆ. ಬೊಮ್ಮಾಯಿ ಜೊತೆಗೆ ಚೆನ್ನಾಗಿ ಕೆಲಸ ಮಾಡಿದ್ದೇವೆ ಎಂದು ನಮ್ಮ ಮೇಲೆ ದ್ವೇಷನಾ? ವಿಜಯೇಂದ್ರ ಮಾಜಿ ಸಿಎಂ ಯಡಿಯೂರಪ್ಪನವರ ಮಗ ಆಗಿರಬಹುದು ಆದರೆ ಬಿಎಸ್ ಯಡಿಯೂರಪ್ಪಗೆ ಹೋಲಿಕೆ ಮಾಡಲು ಸಾಧ್ಯವೇ ಇಲ್ಲ.ಇವರದ್ದು ದ್ವೇಷದ ರಾಜಕಾರಣ. ನಿಮಗೆ ಎಸ್ ಬಾಸ್, ಜಿ ಹುಜೂರ್ ಎನ್ನುವವರು ಬೇಕು ಮಿಸ್ಟರ್ ವಿಜಯೇಂದ್ರ ಅವರ ಧೋರಣೆ ನನಗೆ ಬೇಸರ ತಂದಿದೆ. ವಿಜಯೇಂದ್ರಗೆ ಯಾರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಜಾಯಮಾನ ಇಲ್ಲ. ಬಿ ವೈ ವಿಜಯೇಂದ್ರ ಅಹಂಕಾರವಿದೆ. ಬಿವೈ ವಿಜಯೇಂದ್ರ ಬಳಿ ಸಾವಿರಾರು ಕೋಟಿ ರೂಪಾಯಿ ಇರಬಹುದು. ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಫೋನ್ ಮಾಡಿದರು ರೆಸ್ಪಾನ್ಸ್ ಮಾಡಲ್ಲ. ಎರಡು ಮೂರು ಬಾರಿ ಅಪಾಯಿಂಟ್ಮೆಂಟ್ ಫಿಕ್ಸ್ ಮಾಡಿ ಕ್ಯಾನ್ಸಲ್ ಮಾಡಿದ್ದಾರೆ. ಜೆಪಿ ನಡ್ಡಾ ಅವರಿಗೆ ಮೆಸೇಜ್ ಹಾಕಿದರೆ ಅಪಾಯಿಂಟ್ಮೆಂಟ್ ಕೊಡುತ್ತಾರೆ. ನಮ್ಮನ್ನು ತುಳಿಯಲು ಸಮಾಧಿ ಮಾಡಲು ಹೊರಟಿದ್ದೀರಾ ಎಂದು ಕಿಡಿ ಕಾರಿದರು. ವಿಜಯೇಂದ್ರ ಹಿಂಬಾಲಕರು ನನ್ನನ್ನು ಸೋಲಿಸಲು ಪ್ರಯತ್ನ ಪಟ್ಟರು. ಜಿಲ್ಲಾಧ್ಯಕ್ಷರ ಆಯ್ಕೆ ವಿಚಾರಕ್ಕೆ ಸೌಜನ್ಯಕ್ಕೂ ನನ್ನ ಜೊತೆಗೆ ಚರ್ಚಿಸಿಲ್ಲ. ವಿಜಯೇಂದ್ರ ತಮಗೆ ಬೇಕಾದವರನ್ನು ಅಧ್ಯಕ್ಷ ರಾಜ್ಯ ಕಾರ್ಯದರ್ಶಿ ಪ್ರಧಾನ ಕಾರ್ಯದರ್ಶಿ, ಜಿಲ್ಲಾ ಉಪಾಧ್ಯಕ್ಷರನ್ನಾಗಿ ಮಾಡಿಕೊಂಡಿದ್ದಾರೆ. ನಿಮ್ಮ ನಾಯಕತ್ವದಲ್ಲಿ ಕೋಲಾರ ಚಿಕ್ಕಬಳ್ಳಾಪುರದಲ್ಲಿ ಒಂದು ಸೀಟ್ ಗೆಲ್ಲಿ ನೋಡೋಣ ಎಂದು ಸವಾಲು ಹಾಕಿದರು.

## ಜ. 31ರಂದು ಬಿಜೆಪಿ ರೆಬೆಲ್ ಟೀಂ ಮಹತ್ವದ ಸಭೆ

● ರಾಜ್ಯಾಧ್ಯಕ್ಷ ಸ್ಥಾನದ ಅಭ್ಯರ್ಥಿ ಆಯ್ಕೆ ಅಂದೇ ನಿರ್ಧಾರ ● ನಮ್ಮಕಡೆಯಿಂದ ಸೂಕ್ತವಾದವರನ್ನು ಕಣಕ್ಕೆ ಇಳಿಸ್ತೇವೆ



• ಉದಯವಾಹಿನಿ, ಬೆಂಗಳೂರು

ಜನವರಿ 31 ಶುಕ್ರವಾರ ಬೆಂಗಳೂರಿನಲ್ಲಿ ಬಿಜೆಪಿ ರೆಬೆಲ್ ತಂಡದ ಮಹತ್ವದ ಸಭೆ ನಡೆಯಲಿದ್ದು, ಅಂದೇ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಯಾರನ್ನು ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಬೇಕು ಎಂಬ ನಿರ್ಧಾರವನ್ನು ಕೈಗೊಳ್ಳಲು ತೀರ್ಮಾನ ಮಾಡಲಾಗಿದೆ. ಈ ಕುರಿತಾಗಿ ಬೆಂಗಳೂರಿನಲ್ಲಿ ಬುಧವಾರ ಮಾತನಾಡಿದ ಬಿಜೆಪಿ ಮಾಜಿ ಶಾಸಕ ಕುಮಾರ್ ಬಂಗಾರಪ್ಪ, ಜನವರಿ 31 ರಂದು ನಾವು ಮಹತ್ವದ ಸಭೆ ನಡೆಸ್ತೇವೆ ರಾಜ್ಯಾಧ್ಯಕ್ಷ ಸ್ಥಾನಕ್ಕೆ ನಮ್ಮಕಡೆಯಿಂದ ಸೂಕ್ತವಾದವರನ್ನು ಕಣಕ್ಕೆ ಇಳಿಸ್ತೇವೆ. ಆವತ್ತಿನ ಸಭೆಯಲ್ಲಿ ನಮ್ಮ ಕಡೆಯಿಂದ ಯಾರನ್ನು ನಿಲ್ಲಿಸಬೇಕು ಅಂತ ಚರ್ಚಿಸಿ ತೀರ್ಮಾನ ಮಾಡ್ತೇವೆ ಎಂದಿದ್ದಾರೆ.

ಇನ್ನು ಇದೇ ಸಂದರ್ಭದಲ್ಲಿ ಶ್ರೀರಾಮುಲು ಅವರನ್ನು ಸಂಪರ್ಕ ಮಾಡಲು ಪ್ರಯತ್ನ ನಡೆಯುತ್ತಿದೆ ಎಂದು ಮಾಹಿತಿಯನ್ನು ನೀಡಿದ ಕುಮಾರ್ ಬಂಗಾರಪ್ಪ, ಅವರು ನಮ್ಮ ಸಭೆಗೆ ಬರ್ತಾರಾ ಇಲ್ವಾ ಅನ್ನೋ ಬಗ್ಗೆ ನಾಳೆ ಗೊತ್ತಾಗಲಿದೆ ಎಂದು ತಿಳಿಸಿದರು. ರಾಜ್ಯಾಧ್ಯಕ್ಷರಾದ ಕಾರಣ ಒತ್ತಡಗಳಿಂದ ಕ್ಷೇತ್ರದ ಕಡೆ ಗಮನ ಹರಿಸಿಲ್ಲ ಅನಿಸುತ್ತೆ. ಮೊದಲು ಕ್ಷೇತ್ರ ಭದ್ರ ಪಡಿಸಿಕೊಳ್ಳಲಿ. ಆ ಬಳಿಕ ರಾಜ್ಯ ಕೇಂದ್ರದ ಕಡೆ ಗಮನ ಹರಿಸಲಿ ಎಂದು ಬಿ.ವೈ.ವಿಜಯೇಂದ್ರಗೆ ಕುಮಾರ್ ಬಂಗಾರಪ್ಪ ಟಾಂಗ್ ನೀಡಿದರು.

ಮೊನ್ನೆ ರಾಧಾಮೋಹನ ದಾಸ್ ಅಗರವಾಲ್ ರಾಜ್ಯಕ್ಕೆ ಬಂದು ಸಭೆ ಮಾಡಿದ್ರು. ಆದ್ರೆ ಜಿಲ್ಲೆಗಳಿಗೆ ಅಧ್ಯಕ್ಷರ ಆಯ್ಕೆ ವಿಚಾರದಲ್ಲಿ ನಮ್ಮನ್ಯಾರೂ ಅಭಿಪ್ರಾಯ ಕೇಳಲಿಲ್ಲ. ಅನೇಕ ಜಿಲ್ಲೆಗಳಲ್ಲಿ ಇನ್ನೂ ಗೊಂದಲವಿದೆ. ಪಕ್ಷ ಉತ್ತಮವಾಗಿ ಮುನ್ನಡೆಸವುದು, ಒಗ್ಗಟ್ಟಾಗಿ ನಡೆಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಮೊನ್ನೆ ಅಗರವಾಲ್ ಇದ್ದ ಕೋರ್ ಕಮಿಟಿ ಸಭೆಯಲ್ಲೂ ಸಾಕಷ್ಟು ಚರ್ಚೆ ಮಾಡಲಾಗಿದೆ. ಮಂಡಲ, ಜಿಲ್ಲಾಧ್ಯಕ್ಷರ ಚುನಾವಣೆಯಲ್ಲಿ ಪಾರದರ್ಶಕತೆ ಇರಲಿಲ್ಲ. ಶ್ರೀರಾಮುಲು ಅವರ ವಿಚಾರದಲ್ಲಿ ನಮಗೂ ಬೇಸರ ಇದೆ. ರಾಮುಲು ಅವರ ವಿಚಾರದಲ್ಲಿ ಚರ್ಚೆ ಆಗಿದ್ದು ನಾಲ್ಕು ಗೋಡೆ ಮಧ್ಯೆಯೇ ಇರಬೇಕಿತ್ತು ಎಂದು ಹೇಳಿದರು.

ಸಂಡೂರು ಫಲಿತಾಂಶ ಬಂದಾಗ ಯಾರದ್ದು ತಪ್ಪು ಯಾರದ್ದು ಸರಿ ಅಂತ ಚರ್ಚೆ ಆಗೋದು ಸಹಜ. ಆದ್ರೆ ಕೋರ್ ಕಮಿಟಿಯಲ್ಲಿ ಚರ್ಚೆ ನಡೆದಿರೋದು ಅಲ್ಲೇ ಇರಬೇಕಿತ್ತು. ಆದ್ರೆ ಕೋರ್ ಕಮಿಟಿ ಸಭೆಯಲ್ಲಿ ನಡೆದ ಚರ್ಚೆ ಬಹಿರಂಗವಾಗಿ ಗೊಂದಲ ಉಂಟಾಗಿದೆ ಎಂದು ಹೇಳಿದರು. ಯತ್ನಾಳ್ ತಂಡದ ವಕ್ಫ್ ವರದಿಗೆ ಜೆಪಿಸಿ ಅಧ್ಯಕ್ಷ ಜಗದಾಂಬಿಕ ಪಾಲ್ ಮೆಚ್ಚುಗೆ ವಿಚಾರವಾಗಿ ಇದೇ ವೇಳೆ ಮಾತನಾಡಿ, 'ಯತ್ನಾಳ್, ಜಾರಕಿಹೊಳಿ, ಲಿಂಬಾವಳಿ ಅವರ ನೇತೃತ್ವದ ವಕ್ಫ್ ಹೋರಾಟಕ್ಕೆ ಒಂದು ಹಂತದ ಯಶಸ್ಸು ಸಿಕ್ಕಿದೆ. ನಮ್ಮ ವರದಿಯನ್ನು ಜಗದಾಂಬಿಕ ಪಾಲ್ ಅವರು ಮೆಚ್ಚಿದ್ದಾರೆ. ಜೆಪಿಸಿಯಲ್ಲಿ ವಕ್ಫ್ ಗೆ ಬೇಕಾದ ತಿದ್ದುಪಡಿಗಳನ್ನು ಜಗದಾಂಬಿಕ ಪಾಲ್ ಅವರು ಯಶಸ್ವಿಯಾಗಿ ಮಾಡಿಕೊಂಡು ಬರ್ತಿದ್ದಾರೆ. ನಮ್ಮ ತಂಡದಿಂದ ಜಗದಾಂಬಿಕ ಪಾಲ್ ಅವರನ್ನು ಎರಡು ಸಲ ಭೇಟಿ ಮಾಡಲಾಯ್ತು. ವಕ್ಫ್ ಕುರಿತು ನಾವು ವಿವರವಾದ ವರದಿ ಸಲ್ಲಿಕೆ ಮಾಡಿದ್ದೆವು. ವಕ್ಫ್ ವಿಚಾರದಲ್ಲಿ ನಮ್ಮ ಮಾರ್ಗ ಸರಿಯಾಗಿತ್ತು' ಎಂದರು.

### ಎರಡೂ ಸದನಗಳಲ್ಲೂ ವಕ್ಫ್ ತಿದ್ದುಪಡಿಗಳಿಗೆ ಅನುಮೋದನೆ ಸಿಗುವ ವಿಶ್ವಾಸ

ವಕ್ಫ್ ವಂಚನೆ ಸಂಬಂಧ ನಾವು ರೈತರಿಂದ ಅರ್ಜಿ ಪಡೆಯಲು ವಾರ್ ರೂಮ್ ಮಾಡಿದ್ವಿ. ಈಗ ವಕ್ಫ್ ನಿಯಮಗಳಲ್ಲಿ 14 ತಿದ್ದುಪಡಿಗಳನ್ನು ಜೆಪಿಸಿ ಮಾಡಿದೆ. ಇದಕ್ಕಾಗಿ ಜಗದಾಂಬಿಕ ಪಾಲ್ ಅವರಿಗೆ ನಮ್ಮ ಅಭಿನಂದನೆಗಳು. ಜಗದಾಂಬಿಕ ಪಾಲ್ ಅವರು ನಮ್ಮ ವರದಿಗೆ ವಿಶೇಷ ಗಮನ ಕೊಟ್ರು. ವರದಿಯ ವಿವರಗಳನ್ನು ಅವರೇ ಖುದ್ದಾಗಿ ಓದಿದ್ರು ಎಂದು ಮಾಹಿತಿ ನೀಡಿದರು. ಇಂದು ದೇಶದಲ್ಲಿ 9.50 ಲಕ್ಷ ಆಸ್ತಿ ವಕ್ಫ್ ದಾಗಿದೆ. ಹಾಗಾಗಿ ಯೋಗ್ಯ ಕಾನೂನು ದೇಶಕ್ಕೆ ಬೇಕಾಗಿತ್ತು. ಎರಡೂ ಸದನಗಳಲ್ಲೂ ವಕ್ಫ್ ತಿದ್ದುಪಡಿಗಳಿಗೆ ಅನುಮೋದನೆ ಸಿಗುವ ವಿಶ್ವಾಸ ಇದೆ ಎಂದು ಹೇಳಿದರು.



ಈ ದಿನದ ದರ ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹8,285 /Gram24ct ₹7,595/Gram22ct ಬೆಳ್ಳಿ: ₹96.50/Gram




## ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

### ಕುಂಭಮೇಳ

ಕುಂಭಮೇಳ ವಿಶೇಷವಾಗಿ ಮೂರು ನದಿ ಸೇರುವಲ್ಲಿ ನಡೆವ ಹಿಂದುಗಳ ಸಾಮೂಹಿಕ ಪವಿತ್ರ ಸ್ನಾನ. ನಾಲ್ಕುವರ್ಷ ಆರು ವರ್ಷ ( ಅರ್ಧ ಕುಂಭ) ಹನ್ನೆರಡು ವರ್ಷ ( ಪೂರ್ಣ ಕುಂಭ) ಕ್ಕೊಮ್ಮೆ. ಪ್ರಯಾಗ ಹರಿದ್ವಾರ ಉಜ್ಜಯಿನಿ ನಾಸಿಕಗಳಲ್ಲಿ ಪ್ರಸಿದ್ಧ. ಗಂಗಾ ಸ್ವರ್ಗ ನದೀ, ಅಲ್ಲಿ ಮಿಂದೆದ್ದು ಪ್ರಾರ್ಥಿಸಿದರೆ ಪಾಪನಾಶ - ಪುಣ್ಯಪ್ರಾಪ್ತಿ ಇದು ನಂಬಿಕೆ. ಈ ಇಂಥ ನಂಬಿಕೆಗಳನ್ನು ಕೆಲ ಜನ ಜನನಾಯಕ ವಿಚಾರವಾದಿ ಎನಿಸಿಕೊಂಡವರು ವ್ಯಂಗ್ಯ - ಅವಮಾನಿಸುವುದುಂಟು. ಸಣ್ಣತನ. ಪ್ರಜ್ಞಾವಂತ ಯಾವುದೇ ಕೋಮು ಧರ್ಮದ ಅಸಂಖ್ಯ ಜನಸಮುದಾಯದ ಇಂಥ ಭಾವನೆಗೆ ಧಕ್ಕೆ ತರಬಾರದು. ಸ್ವರ್ಗ ದೇವರು ಪುಣ್ಯ ನಿಜವೋ ಸುಳ್ಳೋ, ಆದರೆ ಭಕ್ತ ಇಂಥ ಭಕ್ತಿಯ ನಡೆಯಿಂದ ವಿಶಿಷ್ಟ ಆನಂದ ಸವಿಯುವುದು ನಿಜ. ಭಕ್ತನ ಈ ನಡೆ ಕಳ್ಳತನ ಭಯೋತ್ಪಾದಕತನ ದುಷ್ಕೃತ್ಯ ದುಶ್ಚಟ ಯಾವುದೂ ಅಲ್ಲ. ಭಾವ - ನಂಬಿಕೆಗಳನ್ನು ಬಹುಮತ ತರ್ಕಾದಿಗಳಿಂದ ಸಾಬೀತುಪಡಿಸಲು ನಿರಾಕರಿಸಲು ಆಗದು. ಡಿಎನ್ಎ ಪರೀಕ್ಷಿಸಿಯೇ ತಂದೆ ಎನಬೇಕಾದೀತು! ಹಿಂದು ಬೌದ್ಧ ಜೈನ ಸಿಖ್ಖ ಕ್ರೈಸ್ತ ಇಸ್ಲಾಂ ಯಾವುದೇ ಧರ್ಮದ ಆಚರಣೆ ಭಾವ - ನಂಬಿಕೆಯ ಮೇಲೆ ನಿಂತಿದೆ. ತತ್ತ್ವಸಿದ್ಧಾಂತಗಳು ವಿಚಾರದ ಮೇಲೆ ನಿಂತಿವೆ. ಭಾವುಕರಿಗೆ ಆಚರಣೆ ಪ್ರಧಾನ, ವಿಚಾರಶೀಲರಿಗೆ ತತ್ತ್ವ ಮುಖ್ಯ. ಇನ್ನು ಕಾಲ್ತುಳಿತ ದುರ್ಮರಣ ವ್ಯವಸ್ಥೆಯ ಲೋಪ ದೋಷ. ಧರ್ಮಕ್ಕಂಟಿಸಲಾಗದು.

## ಶ್ರೀಪುರಂದರದಾಸರ ಆರಾಧನಾ ಮಹೋತ್ಸವ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಶ್ರೀಪುರಂದರದಾಸರ ಆರಾಧನಾ ಮಹೋತ್ಸವ ಶ್ರೀರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಬೆಂಗಳೂರಿನ ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿಗಳವರ ಮಠದಲ್ಲಿ ಪರಮಪೂಜ್ಯ ಶ್ರೀ 1008 ಶ್ರೀಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶ ಅನುಗ್ರಹದೊಂದಿಗೆ ಶ್ರೀ ಮಠದ ಹಿರಿಯ ವ್ಯವಸ್ಥಾಪಕರಾದ ಆರ್. ಕೆ. ವಾದೀಂದ್ರಾಚಾರ್ಯರ, ಜಿ , ಕೆ ಆಚಾರ್ಯರ ನೇತೃತ್ವದಲ್ಲಿ ಶ್ರೀ ಪುರಂದದಾಸರ ಆರಾಧನಾ ಪ್ರಯುಕ್ತ ವಿಶೇಷವಾಗಿ ಶ್ರೀಹರಿ ವಾಯು ಉತ್ಸವ ಸೇವಾ ಭಜನಾ ಮಂಡಳಿಯಿಂದ ಶ್ರೀಹರಿ ಭಜನೆ, ರಥೋತ್ಸವ ಭಕ್ತರಿಗೆ ಅನ್ನ ಸಂತರ್ಪಣೆ ನೆರವೇರಿತು ಎಂದು ಶ್ರೀನಂದಕಿಶೋರಾಚಾರ್ಯರು ತಿಳಿಸಿದರು. ಈ ಸಂದರ್ಭದಲ್ಲಿ ನೂರಾರು ಭಕ್ತರು ಈ ಹರಿ ಭಜನೆ ಕಾರ್ಯಕ್ರಮದಲ್ಲಿ ಮತ್ತು ಉತ್ಸವದಲ್ಲಿ ಭಾಗವಹಿಸಿ ಶ್ರೀ ಹರಿ ವಾಯು ಗುರುಗಳ ಮತ್ತು ಶ್ರೀಪುರಂದರ ದಾಸರ ಅನುಗ್ರಹಕ್ಕೆ ಪಾತ್ರರಾದರು.

## ವಾರುಣಿ ಸಂಗೀತ ಶಾಲೆಯ ವಿದ್ಯಾರ್ಥಿಗಳಿಂದ ದಾಸರ ಪದಗಳ ಗಾಯನ




ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಪವಮಾನಪುರದ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಜನವರಿ 30, ಗುರುವಾರ ಸಂಜೆ 7-00ಕ್ಕೆ ವಾರುಣಿ ಸಂಗೀತ ಶಾಲೆಯ ವಿದ್ಯಾರ್ಥಿಗಳಿಂದ ದಾಸರ ಪದಗಳ ಗಾಯನ. ಗುರುಗಳು ವಿದುಷಿ ಪಿ. ವಾರುಣಿ, ಕೀ-ಬೋರ್ಡ್ ಶ್ರೀ ರಾಜೇಂದ್ರ, ಬೆಂಡೆ, ತಬಲಾ ಶ್ರೀ ಸರ್ವೋತ್ತಮ. ಸ್ಥಳ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ, ಬನಶಂಕರಿ 6ನೇ ಹಂತ, ಬೆಂಗಳೂರು-560109

## ಮೆಟ್ರೋ ಪ್ರಯಾಣ ದರ ಏರಿಕೆಯನ್ನು ತಡೆಹಿಡಿದ ಮೋದಿ ಸರ್ಕಾರ

• ಉದಯವಾಹಿನಿ, ಬೆಂಗಳೂರು

ನಮ್ಮ ಮೆಟ್ರೋ ಪ್ರಯಾಣಿಕರಿಗೆ ಸಿಹಿ ಸುದ್ದಿ. ಮೆಟ್ರೋ ದರ ಏರಿಕೆಗೆ ತಾತ್ಕಾಲಿಕ ಬ್ರೇಕ್ ಬಿದ್ದಿದೆ. ದರ ಏರಿಕೆ ಸಂಬಂಧ ಕೇಂದ್ರ ತಂಡ ಹೆಚ್ಚುವರಿ ವರದಿಯನ್ನು ಕೇಳಿತ್ತು. ಅಷ್ಟೇ ಅಲ್ಲದೇ ಯಾವುದೇ ನಿರ್ಧಾರ ತೆಗೆದುಕೊಳ್ಳುವ ಮೊದಲು ಸಮಗ್ರ ವರದಿಯನ್ನು ಸಲ್ಲಿಸುವಂತೆ ಕೇಂದ್ರ ಸರ್ಕಾರ ಬೆಂಗಳೂರು ಮೆಟ್ರೋ ರೈಲ್ ಕಾರ್ಪೊರೇಷನ್‌ಗೆ ನಿರ್ದೇಶನ ನೀಡಿದೆ. ಕಳೆದ ಭಾನುವಾರ ಮೆಟ್ರೋ ದರ ಏರಿಕೆಯಾಗುವುದು ಅನುಮಾನ ಎಂದು ವರದಿ ಪ್ರಕಟಿಸಿತ್ತು. ಈಗ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಬಿಜೆಪಿ ಸಂಸದ ಪಿಸಿ ಮೋಹನ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿ ದರ ಏರಿಕೆಯನ್ನು ತಡೆಹಿಡಿಯಲಾಗಿದೆ ಎಂದು ತಿಳಿಸಿದ್ದಾರೆ.

ಫೆಬ್ರವರಿ 1 ರಂದು ನಿಗದಿಯಾಗಿದ್ದ ಬಿಎಂಆರ್‌ಸಿಎಲ್‌ನ 45% ಮೆಟ್ರೋ ದರ ಹೆಚ್ಚಳದ ಪ್ರಸ್ತಾವನೆಯನ್ನು ತಡೆಹಿಡಿಯಲಾಗಿದೆ. ಯಾವುದೇ ನಿರ್ಧಾರ ತೆಗೆದುಕೊಳ್ಳುವ ಮೊದಲು ಸಮಗ್ರ ವರದಿಯನ್ನು ಸಲ್ಲಿಸುವಂತೆ ಮೋದಿ ಸರ್ಕಾರ ಬಿಎಂಆರ್‌ಸಿಎಲ್‌ಗೆ ನಿರ್ದೇಶನ ನೀಡಿದೆ. ಬೆಂಗಳೂರಿನ ಜನರಿಗೆ ಒಂದು ದೊಡ್ಡ ಗೆಲುವು ಪಾರದರ್ಶಕತೆ, ಹೊಣೆಗಾರಿಕೆ ಮತ್ತು ನ್ಯಾಯಯುತ ಮೆಟ್ರೋ ಬೆಲೆ ನಿಗದಿಯನ್ನು ಖಚಿತಪಡಿಸಲಾಗುತ್ತದೆ ಎಂದು ಬರೆದುಕೊಂಡಿದ್ದಾರೆ.

## ಕುಂಭಮೇಳದಲ್ಲಿ ಪಾಲ್ಗೊಂಡಿರುವ ಕನ್ನಡಿಗರು ಜಾಗರೂಕತೆಯಿಂದಿರಿ: ಸಿಎಂ

• ಉದಯವಾಹಿನಿ, ಬೆಂಗಳೂರು

ಪ್ರಯಾಗ್‌ರಾಜ್‌ನ ಮಹಾ ಕುಂಭಮೇಳದಲ್ಲಿ ಬುಧವಾರ ಮುಂಜಾನೆ ಸಂಭವಿಸಿದ ಕಾಲ್ತುಳಿತದಲ್ಲಿ ಹಲವರು ಸಾವಿಗೀಡಾದ ಸುದ್ದಿ ತಿಳಿದು ಸಿಎಂ ಸಿದ್ದರಾಮಯ್ಯ ತೀವ್ರ ವಿಷಾದ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಎಕ್ಸ್‌ನಲ್ಲಿ ಅವರು ಪೋಸ್ಟ್ ಮಾಡಿದ್ದಾರೆ. ಪೋಸ್ಟ್‌ನಲ್ಲಿ ಮೃತರ ಆತ್ಮಗಳಿಗೆ ಶಾಂತಿ ಸಿಗಲೆಂದು ಪ್ರಾರ್ಥಿಸುತ್ತೇನೆ. ಘಟನೆಯಲ್ಲಿ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿರುವವರು ಶೀಘ್ರ ಗುಣಮುಖರಾಗಲಿ ಎಂದು ಹಾರೈಸಿದ್ದಾರೆ. ಕಾಲ್ತುಳಿತದಲ್ಲಿ ರಾಜ್ಯದ ಕೆಲವರು ಗಾಯಗೊಂಡಿರುವ ಮಾಹಿತಿಯಿದೆ. ಅವರೆಲ್ಲರನ್ನು ಕ್ಷೇಮವಾಗಿ ರಾಜ್ಯಕ್ಕೆ ಕರೆತರಲು ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ನಮ್ಮವರ ರಕ್ಷಣೆಗೆ ಸರ್ಕಾರ ಎಲ್ಲಾ ರೀತಿಯ ಪ್ರಯತ್ನವನ್ನು ನಡೆಸುತ್ತಿದೆ. ಕುಂಭಮೇಳದಲ್ಲಿ ಪಾಲ್ಗೊಂಡಿರುವ ಕನ್ನಡಿಗರು ಸ್ವಲ್ಪ ಜಾಗರೂಕತೆಯಿಂದಿರಿ ಎಂದು ಮನವಿ ಮಾಡಿಕೊಂಡಿದ್ದಾರೆ.

## ಅಗ್ನಿ ಅವಘಡ ಕಾರು, ಬೈಕ್ ಸೇರಿ 100ಕ್ಕೂ ಹೆಚ್ಚು ವಾಹನಗಳು ಬೆಂಕಿಗಾಹುತಿ

• ಉದಯವಾಹಿನಿ, ಬೆಂಗಳೂರು

ಜೆಡಿಎಸ್ ಕಚೇರಿ ಪಕ್ಕದ ಮೈದಾನದಲ್ಲಿ ಅಗ್ನಿ ಅವಘಡ ಸಂಭವಿಸಿ 100ಕ್ಕೂ ಹೆಚ್ಚು ವಾಹನಗಳು ಬೆಂಕಿಗಾಹುತಿಯಾಗಿದೆ.ಜಪ್ತಿ ಮಾಡಿದ್ದ ವಾಹನಗಳನ್ನು ಪೊಲೀಸರು ಶೇಷಾದ್ರಿಪುರಂ ಬಳಿಯ ಜಕ್ಕರಾಯನ ಕೆರೆ ಗ್ರೌಂಡ್‌ನಲ್ಲಿ ಪಾರ್ಕ್ ಮಾಡಿದ್ದರು. ಈ ಜಾಗಕ್ಕೆ ಬುಧವಾರ ಬೆಳಗ್ಗೆ ಬೆಂಕಿ ಬಿದ್ದಿದೆ. ಈಗಾಗಲೇ ಐದು ಕಾರು, ಐದು ಆಟೋ, 50 ಕ್ಕೂ ಹೆಚ್ಚು ಬೈಕ್‌ಗಳು ಸುಟ್ಟು ಹೋಗಿವೆ.

ಮತ್ತಷ್ಟು ವಾಹನಗಳಿಗೆ ಬೆಂಕಿ ಹೊತ್ತಿಕೊಳ್ಳುತ್ತಿದ್ದು ನಾಲ್ಕು ಅಗ್ನಿಶಾಮಕ ವಾಹನಗಳು ಸ್ಥಳಕ್ಕೆ ಬಂದು ನಂದಿಸುವ ಕೆಲಸ ಮಾಡುತ್ತಿದೆ. ಮೈದಾನದಲ್ಲಿ ಹುಲ್ಲು, ಗಿಡ ಬೆಳೆದುಕೊಂಡಿತ್ತು. ಯಾರೋ ಸಿಗರೇಟ್‌ಗಾಗಿ ಬೆಂಕಿ ಕಡ್ಡಿ ಗೀರಿ ಎಸೆದು ಹೋಗಿದ್ದರಿಂದ ಈ ಅವಘಡ ಸಂಭವಿಸಿರಬಹುದು ಎಂದು ಶಂಕಿಸಲಾಗಿದೆ.

# ವಸತಿ ಸಮುಚ್ಚಯಗಳು ನೀರಿನ ಸಂಪರ್ಕ ಪಡೆದುಕೊಳ್ಳುತ್ತಿಲ್ಲ

## ಬೆಂಗಳೂರಿನ ಎಲ್ಲಾ ಅಪಾರ್ಟ್‌ಮೆಂಟ್‌ಗಳು ಕಡ್ಡಾಯ ಕಾವೇರಿ ನೀರಿನ ಸಂಪರ್ಕ ಪಡೆಯಬೇಕು: ಸೂಚನೆ


• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ಎಲ್ಲಾ ಅಪಾರ್ಟ್‌ಮೆಂಟ್‌ಗಳು ಕಡ್ಡಾಯ ಕಾವೇರಿ ನೀರಿನ ಸಂಪರ್ಕ ಪಡೆಯಬೇಕು ಎಂಬ ಮಹತ್ವದ ಸೂಚನೆಯನ್ನು ಬೆಂಗಳೂರು ಅಭಿವೃದ್ಧಿ ಸಚಿವ, ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಮಹತ್ವದ ಸೂಚನೆ ನೀಡಿದ್ದಾರೆ. ನಗರದ ಕಾವೇರಿ ಭವನದಲ್ಲಿ ಬಿಬಿಎಂಪಿ, ಬಿಡಿಎ, ಜಲಮಂಡಳಿ, ಬಿಎಂಆರ್‌ಡಿಎ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಂದರ್ಭದಲ್ಲಿ ಮಾತನಾಡಿರು. ಕಾವೇರಿ 5ನೇ ಹಂತದ ಯೋಜನೆಯಡಿ ಈವರೆಗೆ 15 ಸಾವಿರ ಹೊಸ ಸಂಪರ್ಕಗಳನ್ನು ಕಲ್ಪಿಸಲಾಗಿದೆ. ಇನ್ನೂ 20 ಸಾವಿರ ಸಂಪರ್ಕಗಳನ್ನು ನೀಡಬೇಕಿದೆ. ಅಲ್ಲದೆ, ಸಾಕಷ್ಟು ವಸತಿ ಸಮುಚ್ಚಯಗಳು ನೀರಿನ ಸಂಪರ್ಕ ಪಡೆದುಕೊಳ್ಳುತ್ತಿಲ್ಲ. ಎಲ್ಲಾರೂ ಕಡ್ಡಾಯವಾಗಿ ಸಂಪರ್ಕ ಪಡೆಯಬೇಕೆಂದು ಸೂಚಿಸಲಾಗಿದೆ, ಎಂದು ಡಿಸಿಎಂ ಹೇಳಿದರು.

ಸಾರ್ವಜನಿಕರ ಉಪಯೋಗಕ್ಕಾಗಿಯೇ ಕೋಟ್ಯಂತರ ರೂ. ವ್ಯಯಿಸಿ ಯೋಜನೆ ರೂಪಿಸಲಾಗಿದೆ. ಆದರೆ, ಹಲವರು ಸೇವಾ ಶುಲ್ಕ, ಠೇವಣಿ, ಇತರೆ ಶುಲ್ಕಗಳ ಪಾವತಿಯಿಂದ ತಪ್ಪಿಸಿಕೊಳ್ಳಲು ಅಕ್ರಮವಾಗಿ ಸಂಪರ್ಕಗಳನ್ನು ಪಡೆದಿದ್ದಾರೆ. ಇಂಥ ಅಕ್ರಮ ತಡೆಗೆ ಕಠಿಣ ಕ್ರಮ ತೆಗೆದುಕೊಳ್ಳಲಾಗಿದೆ. ಪ್ರತಿ ಮನೆ, ವಸತಿ ಸಮುಚ್ಚಯಗಳಿಗೆ ಭೇಟಿ ನೀಡಿ, ನೀರಿನ ಸಂಪರ್ಕ ಪಡೆಯಲು ಮನವಿ ಮಾಡಿಕೊಳ್ಳಲಾಗುತ್ತಿದೆ, ಎಂದು ಹೇಳಿದರು.

ಈ ಹಿಂದೆ ಕೊಳೆಗೇರಿಗಳು, ಬಡವರಿಗೆ ಕುಡಿಯುವ ನೀರು ಒದಗಿಸಲು ಸರಕಾರ 20 ಕೋಟಿ ರೂ. ಮೀಸಲಿಟ್ಟಿತ್ತು. ಈ ಹಿಂದಿನ ಬಿಜೆಪಿ ಸರ ಕಾರ ಆ ಸಹಾಯ ಧನ ಸ್ಥಗಿತಗೊಳಿಸಿದೆ. ಇದನ್ನು ಮುಂದು ವರಿಸಲಾಗುವುದು. ಬಡವರಿಗೆ ನೀರು ನೀಡಿದರೂ, ಅದು ಲೆಕ್ಕಕ್ಕೆ ಸಿಗಬೇಕು. ಹಲವೆಡೆ ಕೊಳೆಗೇರಿ ನಿವಾಸಿಗಳ ಹೆಸ ರಿನಲ್ಲಿಉಳ್ಳವರು ನೀರು ಪಡೆಯು ತ್ತಿದ್ದಾರೆ, ಎಂದು ಹೇಳಿದರು. ಸಾರ್ವ ಜನಿಕರು ಕೊಂಚವಾದರೂ ಹಣ ಪಾವತಿಸಿ ನೀರಿನ ಸಂಪರ್ಕ ಪಡೆಯಬೇಕು.

ಅಕ್ರಮ ವಾಗಿ ಸಂಪರ್ಕ ಪಡೆದಿರುವವರು ಸಕ್ರಮ ಮಾಡಿಕೊಳ್ಳಬೇಕು. ಜಲಮಂಡಳಿ ಉಳಿವಿಗೆ, ಎಲ್ಲಾರಿಗೂ ನೀರು ಒದಗಿಸುವ ನಿಟ್ಟಿನಲ್ಲಿ ಎಲ್ಲಾರೂ ಕೈ ಜೋಡಿಸಬೇಕು, ಎಂದು ಮನವಿ ಮಾಡಿಕೊಂಡರು.



**ಕುಡಿಯುವ ನೀರಿನ ದರ ಏರಿಕೆ:** ಕುಡಿಯುವ ನೀರಿನ ಬೆಲೆ ಹೆಚ್ಚಳದ ಬಗ್ಗೆ ವರದಿ ನೀಡಲು ಜಲ ಮಂಡಳಿ ಅಧಿಕಾರಿಗಳಿಗೆ ಸೂಚಿ ಸಲಾಗಿದೆ. ವರದಿ ನೀಡಿದ ತಕ್ಷಣವೇ ದರ ಏರಿಕೆಗೆ ಅನುಮತಿ ನೀಡಲು ಕ್ರಮ ತೆಗೆದುಕೊಳ್ಳಲಾಗುವುದು, ಎಂದು ಹೇಳಿದರು. ನೀರಿನ ಅಕ್ರಮ ಸಂಪರ್ಕಗಳ ಸಕ್ರಮೀಕರಣ, ನೀರಿನ ಸಂಪರ್ಕ ಮತ್ತು ಬಳಕೆಯ ನಿಖರ ಲೆಕ್ಕ ಪಡೆಯಲು ಕ್ರಮ ವಹಿಸಲಾಗಿದೆ. ಕಳೆದ 11 ವರ್ಷಗಳಿಂದ ಅಂದರೆ, 2014ರಿಂದ ನೀರಿದ ದರ ಹೆಚ್ಚಿಸಿಲ್ಲ. ಈ ಕಾರಣಕ್ಕಾಗಿ ಜಲಮಂಡಳಿಗೆ ವರ್ಷಕ್ಕೆ 1,000 ಕೋಟಿ ರೂ. ನಷ್ಟವಾಗುತ್ತಿದೆ. ಈ ಹಿಂದೆ 35 ಕೋಟಿ ರೂ. ವಿದ್ಯುತ್ ಶುಲ್ಕ ಪಾವತಿಸಬೇಕಿತ್ತು. ಈಗ 75 ಕೋಟಿಗೆ ಏರಿಕೆಯಾಗಿದೆ. ಇತರೆ ಸೇವೆಗಳು, ಮಾನವ ಸಂಪನ್ಮೂಲ ಸೇರಿದಂತೆ ಇತರೆ ವೆಚ್ಚಗಳಿಂದ ಮಾಸಿಕ 85 ಕೋಟಿ ರೂ. ನಷ್ಟ ಉಂಟಾಗುತ್ತಿದೆ ಎಂದು ತಿಳಿಸಿದರು.

> ನೀರಿನ ದರ ಹೆಚ್ಚಳ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ. ಈ ಹಿನ್ನೆಲೆಯಲ್ಲಿ ನಗರದ ಎಲ್ಲಶಾಸಕರನ್ನು ಅಧಿಕಾರಿಗಳು ಭೇಟಿ ಮಾಡಿ ಚರ್ಚಿಸಿದ್ದಾರೆ. ಅಲ್ಲದೆ, ನೀರಿನ ಸಂಪರ್ಕ ಜಾಲ ವಿಸ್ತರಿಸಲು ಬ್ಯಾಂಕ್‌ಗಳಲ್ಲಿ ಸಾಲ ಕೇಳುವುದಕ್ಕೂ ಆಗುತ್ತಿಲ್ಲ. ಜಲಮಂಡಳಿ ನಷ್ಟದಲ್ಲಿರುವುದರಿಂದ ಸಾಲ ನೀಡಲು ಮುಂದೆ ಬರುತ್ತಿಲ್ಲ. ಜೈಕಾ ಸಂಸ್ಥೆ ಕೂಡ ಸಾಲ ನೀಡಲು ಹಣ ಪಾವತಿ ಭರವಸೆ ನೀಡುವಂತೆ ಸೂಚಿಸುತ್ತಿದೆ ಎಂದರು.

**ಮಾಹಿತಿ ಕಲೆ ಹಾಕಲು ಯೋಜನೆ**

ಬಿಬಿಎಂಪಿ ವ್ಯಾಪ್ತಿಯಲ್ಲಿ ತೆರಿಗೆ ಪಾವತಿಗೆ ವ್ಯವಸ್ಥೆ ರೂಪಿಸಿರುವ ಮಾದರಿಯಲ್ಲೇ ನೀರಿನ ಸಂಪರ್ಕ, ಬಳಕೆಯ ನಿಖರ ಮಾಹಿತಿ ಕಲೆ ಹಾಕಲು ಯೋಜನೆ ರೂಪಿಸಲಾಗಿದೆ. ಬಡವರು, ಶ್ರೀಮಂತರು, ವಸತಿ ಸಮುಚ್ಚಯಗಳು ಎಷ್ಟು ನೀರು ಉಪಯೋಗಿಸುತ್ತಿವೆ ಎಂಬ ಲೆಕ್ಕ ಪಡೆಯಲಾಗುವುದು.

## ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿ ಅಸಾಧ್ಯ

• ಉದಯವಾಹಿನಿ, ಬೆಂಗಳೂರು

ನಮ್ಮ ದೇಶ ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ದೇಶ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿ ಮಾಡಲು ಸಾಧ್ಯವಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಹೇಳಿದರು. ಸೌಟ್ ಮತ್ತು ಗೈಡ್ಸ್‌ನ ವಜ್ರ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದ ನಂತರ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು. ಹರಿಯಾಣ ಬಿಜೆಪಿ ಸರ್ಕಾರ ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸಿರುವ ಬಗ್ಗೆ ಕೇಳಿದಾಗ, ಪ್ರತಿಯೊಬ್ಬ ನಾಗರಿಕನಿಗೂ ತನ್ನದೇ ಆದ ವೈಯಕ್ತಿಕ ಜೀವನವಿರುತ್ತದೆ. ಇಡೀ ದೇಶದಲ್ಲಿ ಜಾರಿ ಮಾಡಲು ಸಾಧ್ಯವಿಲ್ಲದ್ದು, ಒಂದು ರಾಜ್ಯದಲ್ಲಿ ಜಾರಿ ಮಾಡಲು ಹೇಗೆ ಸಾಧ್ಯ ಎಂದು ಹೇಳಿದರು. ನಾಯಕತ್ವ ಗುಣ ಬೆಳೆಯುತ್ತದೆ ಸೌಟ್, ಗೈಡ್ಸ್ ಕಾರ್ಯಕ್ರಮದಲ್ಲಿ ಭಾಗವಹಿಸಿ ನನಗೆ ತುಂಬಾ ಸಂತೋಷವಾಯಿತು. ನಾನು ಸಹ ನನ್ನ ಶಾಲಾ ದಿನಗಳಲ್ಲಿ ಇದರ ಭಾಗವಾಗಿದೆ ಎಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತದೆ. ಮಾನವೀಯತೆ ಮತ್ತು ಶಿಸ್ತನ್ನು ಇಲ್ಲಿಂದ ವಿದ್ಯಾರ್ಥಿಗಳು ಕಲಿಯಬಹುದು. ಜೊತೆಗೆ ನಾಯಕತ್ವ ಗುಣವನ್ನು ಇದು ಬೆಳೆಸುತ್ತದೆ. ಯುವ ಜನತೆಯ ವ್ಯಕ್ತಿತ್ವ ಇದರಿಂದ ಗಟ್ಟಿಯಾಗುತ್ತದೆ.ತಮಿಳುನಾಡು ಸರ್ಕಾರ ಅಚ್ಚುಕಟ್ಟಾಗಿ ಈ ಕಾರ್ಯಕ್ರಮವನ್ನು ಆ ಯೋಜನೆ ಮಾಡಿದೆ. ಇಷ್ಟು ದೊಡ್ಡ ಕಾರ್ಯಕ್ರಮವನ್ನು ಆಯೋಜಿಸುವುದು ಸುಲಭದ ಕೆಲಸವಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

## ಮೊಬೈಲ್ ಗೀಳಿಗೆ 13ರ ಬಾಲಕ ಆತ್ಮಹತ್ಯೆ

• ಉದಯವಾಹಿನಿ, ಬೆಂಗಳೂರು



ಮೊಬೈಲ್ ಗೀಳಿಗೆ 13 ವರ್ಷದ ಬಾಲಕ ನೋರ್ವ ನೇಣಿಗೆ ಶರಣಾಗಿರುವ ಘಟನೆ ಬೆಂಗಳೂರಿನ ಬ್ಯಾಡರಹಳ್ಳಿ ಪೊಲೀಸ್ ಠಾಣೆಯ ಗೊಲ್ಲರಹಟ್ಟಿಯ ರತ್ನನಗರದಲ್ಲಿ ನಡೆದಿದೆ.

ಧ್ರುವ ಆತ್ಮಹತ್ಯೆಗೆ ಶರಣಾದ ಬಾಲಕ. ಈತ 9 ವರ್ಷದ ತಂಗಿಯ ಮುಂದೆಯೇ ಉಡದಾರದಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈ ವೇಳೆ ಅಣ್ಣ ಏನು ಮಾಡುತ್ತಿದ್ದಾನೆ ಎಂಬ ಅರಿವು ಇಲ್ಲದೆ ತಂಗಿ ಸುಮ್ಮನೆ ನೋಡುತ್ತಿದ್ದಳು. ಧ್ರುವ ಮನೆಯವರ ಮಾತು ಕೇಳದೆ ಹೆಚ್ಚಾಗಿ ಮೊಬೈಲ್ ಬಳಸುತ್ತಿದ್ದ ಎಂದು ಪೊಲೀಸರ ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಮಂಗಳವಾರ ಪೋಷಕರು ಕೆಲಸಕ್ಕೆ ತೆರಳಿದ್ದರು. ಶಾಲೆ ಮುಗಿಸಿ ಬಂದ ಅಣ್ಣ-ತಂಗಿ ಮಾತ್ರ ಮನೆಯಲ್ಲಿದ್ದರು. ಆಗ ಬಾಲಕ ಪ್ಯಾಂಟ್ ತೆಗೆದು ಸೊಂಟದ ಉಡದಾರ ಫ್ಯಾನ್‌ಗೆ ಕಟ್ಟಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾನೆ. ಸಂಜೆ 7 ಗಂಟೆಯ ಸುಮಾರಿಗೆ ಬಾಲಕ ಆತ್ಮಹತ್ಯೆಗೆ ಯತ್ನಿಸಿದ್ದಾನೆ. ಆಗ ಉಡದಾರ ಕುತ್ತಿಗೆಗೆ ಬಿಗಿದು, ತುಂಡಾಗಿ ಬಾಲಕ ಕೆಳಗೆ ಬಿದ್ದಿದ್ದಾನೆ. ಅಣ್ಣ ಏನು ಮಾಡಿಕೊಳ್ಳುತ್ತಿದ್ದಾನೆ ಎಂಬ ಅರಿವು ಇಲ್ಲದೇ ತಂಗಿ ಸುಮ್ಮನೆ ನೋಡುತ್ತಿದ್ದಳು. ಬಾಲಕ ಕೆಳಗೆ ಬಿದ್ದ ಸಮಯಕ್ಕೆ ಕೆಲಸ ಮುಗಿಸಿ ತಾಯಿ ಬಂದಿದ್ದಾರೆ.

ಘಟನೆ ನೋಡಿ ಆತಂಕಗೊಂಡ ತಾಯಿ ಅಕ್ಕಪಕ್ಕದವರ ಸಹಾಯ ಪಡೆದು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಆದರೆ ಬಾಲಕನನ್ನು ಪರೀಕ್ಷಿಸಿದ ವೈದ್ಯರು ಆತ ಸಾವನ್ನಪ್ಪಿರುವುದಾಗಿ ತಿಳಿಸಿದ್ದಾರೆ. ಬಾಲಕನ ತಂದೆ ಬಸವರಾಜ್ ಬೇಕರಿ ಕೆಲಸ ಮಾಡುತ್ತಿದ್ದು, ತಾಯಿ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದರು. ಚಿಕ್ಕ ವಯಸ್ಸಿನಲ್ಲಿ ಆತ್ಮಹತ್ಯೆಗೆ ಮಾಡಿಕೊಳ್ಳಲು ಕಾರಣವೇನು ಎಂದು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಬಾಲಕ ಅತಿ ಹೆಚ್ಚಾಗಿ ಮೊಬೈಲ್ ಬಳಕೆ ಮಾಡುತ್ತಿದ್ದ ಎಂಬ ಮಾಹಿತಿ ಪೊಲೀಸರಿಗೆ ಲಭ್ಯವಾಗಿದ್ದು, ಇದೇ ವಿಷಯವಾಗಿ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಪೊಲೀಸರು ಅನುಮಾನ ವ್ಯಕ್ತಪಡಿಸಿದ್ದಾರೆ.

## ರಾಜ್ಯ ಸರ್ಕಾರದಿಂದ ಹೊಸ ವಾಹನ ಖರೀದಿಸುವವರಿಗೆ ಬಿಗ್ ಶಾಕ್

• ಉದಯವಾಹಿನಿ, ಬೆಂಗಳೂರು

2025 ಹೊಸ ವರ್ಷಕ್ಕೆ ಹೊಸ ಕಾರು ಹಾಗೂ ಬೈಕ್ ಖರೀದಿಸುವವರಿಗೆ ಇದೀಗ ರಾಜ್ಯ ಸರ್ಕಾರ ಬಿಗ್ ಶಾಕ್ ನೀಡಲು ಮುಂದಾಗಿದೆ. ಹೌದು ಹೊಸ ಕಾರು ಹಾಗೂ ಬೈಕ್ ಕೊಂಡುಕೊಳ್ಳುವವರಿಗೆ ಖರೀದಿಯ ನೋಂದಣಿ ಶುಲ್ಕ ತಲಾ 1000 ರೂ. ಹಾಗೂ 500 ರೂ. ಹೆಚ್ಚಳ ಮಾಡಲು ನಿರ್ಧರಿಸಿದೆ.ಈಗಾಗಲೇ ಬೆಳಗಾವಿಯ ಅಧಿವೇಶನದಲ್ಲಿ ರಿಜಿಸ್ಟ್ರೇಷನ್ ಶುಲ್ಕ ಹೆಚ್ಚಳದ ಮಸೂದೆಗೆ ಗ್ರೀನ್ ಸಿಗ್ನಲ್ ನೀಡಲಾಗಿದೆ. ಹೌದು ಕಳೆದ ಡಿಸೆಂಬರ್ ನಲ್ಲಿ ಬೆಳಗಾವಿಯ ಸುವರ್ಣ ಸೌಧದಲ್ಲಿ ನಡೆದ ಚಳಿಗಾಲದ ಅಧಿವೇಶನದಲ್ಲಿ ಹೊಸ ಬೈಕ್ ಹಾಗೂ ಕಾರು ಖರೀದಿಸುವ ನೊಂದಣಿ ಶುಲ್ಕ ಹೆಚ್ಚಳ ಮಾಡುವ ಕುರಿತು ಮಸೂದೆ ಮಂಡನೆ ಮಾಡಲಾಗಿತ್ತು. ಫೆಬ್ರವರಿಯಿಂದ ಪರಿಷ್ಕೃತ ದರ ಜಾರಿ ಆಗಲಿದೆ. ದರ ಹೆಚ್ಚಳದಿಂದ ಬಂದ ಹಣವನ್ನು ಯೆಲ್ಲೋ ಬೋರ್ಡ್ ಚಾಲಕರ ಅಭಿವೃದ್ಧಿಗೆ ಬಳಕೆ ಮಾಡುವುದಾಗಿ ರಾಜ್ಯ ಸರ್ಕಾರ ಹೇಳಿದೆ. ದರ ಹೆಚ್ಚಳ ಸಂಬಂದ ಈಗಾಗಲೇ ಗೆಜೆಟ್ ನೋಟಿಫಿಕೇಷನ್ ಆಗಿದ್ದು, ಸದ್ಯ ವಾಹನ್ - 4 ನಲ್ಲಿ ಅಪ್‌ಡೇಟ್ ಮಾಡಲಾಗುತ್ತಿದೆ. ಸಾರಿಗೆ ಇಲಾಖೆ ಸದ್ಯದಲ್ಲೇ ಅಂತಿಮ ಆದೇಶ ಹೊರಡಿಸಲಿದೆ. ಆದೇಶ ಹೊರಡಿಸಿದ ಬೆನ್ನಲ್ಲೇ, ರಾಜ್ಯದ ಎಲ್ಲಾ ಆರ್‌ಟಿಓಗಳಲ್ಲೂ ನೂತನ ರಿಜಿಸ್ಟ್ರೇಷನ್ ದರ ಜಾರಿ ಆಗಲಿದೆ.

**ಫೆ.1 ರಿಂದ ಸೆಸ್ ಹೆಚ್ಚಳ**

## ಹೆಬ್ಬಾಳದ ಬೈಕ್ ವೀಲಿಂಗ್ ಪ್ರಕರಣ : ಪೊಲೀಸರ ವಿರುದ್ಧ ಹೈಕೋರ್ಟ್ ಅಸಮಾಧಾನ

• ಉದಯವಾಹಿನಿ, ಬೆಂಗಳೂರು




ಬೆಂಗಳೂರಿನಲ್ಲಿ 18ರಿಂದ 20 ವರ್ಷದ ಯುವಕರು ಎಲ್ಲಿಂದರಲ್ಲಿ ಬೈಕ್ ವಿಲಿಂಗ್ ಮಾಡುತ್ತಿರುವ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದ್ದು ಇದರಿಂದ ವಾಹನ ಚಲಾಯಿಸುವವರಿಗೆ ಹಾಗೂ ಸಾರ್ವಜನಿಕರಿಗೆ ತುಂಬಾ ಸಮಸ್ಯೆ ಆಗುತ್ತಿದೆ ಆದರೂ ಕೂಡ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಹೈಕೋರ್ಟ್ ವಿಭಾಗೀಯ ಪೀಠ ಪೊಲೀಸರ ವಿರುದ್ಧ ಅಸಮಾಧಾನ ಹೊರಹಾಕಿದೆ.ಹೌದು ಈ ಕುರಿತು ವ್ಯಕ್ತಿಯೊಬ್ಬರು ಅರ್ಜಿಯೊಂದನ್ನು ಸಲ್ಲಿಸಿದ್ದು, ಈ ಅರ್ಜಿಯ ವಿಚಾರಣೆ ಕೈಗೆತ್ತಿಕೊಂಡ ಹೈಕೋರ್ಟ್ ಭಾಗಿಯ ಪೀಠವು, ಬೆಂಗಳೂರಿನ ಕೆಲ ಏರಿಯಾಗಳಲ್ಲಿ ಬೈಕ್ ಸವಾರರಿಂದ ವಿಲಿಂಗ್ ನಡೆಯುತ್ತಿದ್ದು, ಈ ಕುರಿತು ಯಾವುದೆ ಕ್ರಮ ಕೈಗೊಳ್ಳದ ಪೊಲೀಸರ ನಿರ್ಲಕ್ಷಕ್ಕೆ ಹೈಕೋರ್ಟ್ ವಿಭಾಗೀಯ ಪೀಠ ಅಸಮಾಧಾನ ವ್ಯಕ್ತಪಡಿಸಿದೆ. ಸುಮಾರು 18 ರಿಂದ 20 ವಯಸ್ಸಿನ ಯುವಕರು ವಿಲಿಂಗ್ ಮಾಡಿ ಸಮಸ್ಯೆ ಸೃಷ್ಟಿಸುತ್ತಿದ್ದಾರೆ ವಿಲಿಂಗ್ ಮಾಡು ಅವರ ವಿರುದ್ಧ ಪೊಲೀಸರು ಸೂಕ್ತ ಕ್ರಮ ಕೈಗೊಳ್ಳುತ್ತಿಲ್ಲ. ಬೆಂಗಳೂರಿನಲ್ಲಿ ವಾಸ ಮಾಡುವವರಿಗೆ ಇದರಿಂದ ತುಂಬಾ ತೊಂದರೆಯಾಗುತ್ತಿದೆ. ವಿಲಿಂಗ್‌ನಿಂದ ಅಪಘಾತವಾಗಿ ಸಾವುಗಳು ಕೂಡ ಸಂಭವಿಸುತ್ತಿವೆ. ಬೈಕ್ ಸವಾರರು ಹೆಲ್ಮಟ್ ಧರಿಸದೆ ವಾಹನ ಚಲಾಯಿಸುತ್ತಾರೆ. ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಿದೆ ಎಂದು ತಿಳಿಸಲು ಹೈಕೋರ್ಟ್ ವಿಭಾಗಿಯ ಪೀಠ ಸೂಚನೆ ನೀಡಿದೆ. ನ್ಯಾ. ಎನ್ ವಿ ಆಂಜಾರಿಯ, ನ್ಯಾ. ಎಂ.ಐ ಅರುಣ್ ಅವರಿದ್ದ ಪೀಠ ಸೂಚನೆ ನೀಡಿದೆ. ಬಳಿಕ ಅರ್ಜಿಯ ವಿಚಾರಣೆಯನ್ನು ಮಾರ್ಚ್ 17ಕ್ಕೆ ನಿಗದಿಪಡಿಸಿತು. ಅರ್ಜಿದಾರರ ಪರ ವಕೀಲ ನಿತಿನ್ ರಮೇಶ್ ವಾದ ಮಂಡಿಸಿದರು. ಮಕ್ಕಳಿಗೂ ಹೆಲ್ಮೆಟ್ ನಿಯಮ ಜಾರಿಗೆ ಮನವಿ ಮಾಡಿದರು. ಸೂಕ್ತ ಹೆಟ್ ನಿಯಮ ಜಾರಿಗಾಗಿ ಡಾಕ್ಟರ್ ಅರ್ಚನಾ ಭಟ್ ಪಿಐಎಲ್ ಸಲ್ಲಿಸಿದ್ದರು.

## ರಾಮುಲು ವಿಚಾರವಾಗಿ ರಾಧಾಮೋಹನ್‌ಗೆ ತಪ್ಪು ಮಾಹಿತಿ

• ಉದಯವಾಹಿನಿ, ಬೆಂಗಳೂರು

ಮಾಜಿ ಸಚಿವ ಶ್ರೀ ರಾಮುಲು ವಿಚಾರವಾಗಿ ರಾಜ್ಯ ಬಿಜೆಪಿ ಉಸ್ತುವಾರಿ ರಾಧಾಮೋಹನ್ ಅಗರ್‌ವಾಲ್ ಅವರಿಗೆ ತಪ್ಪು ಮಾಹಿತಿಯನ್ನು ನೀಡಿದವರು ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಎಂದು ಬಿಜೆಪಿ ರೆಬೆಲ್ ಶಾಸಕ ಬಿಪಿ ಹರೀಶ್ ಗಂಭೀರ ಆರೋಪ ಮಾಡಿದ್ದಾರೆ.ಬೆಂಗಳೂರಿನಲ್ಲಿ ಬುಧವಾರ ಮಾತನಾಡಿದ ಅವರು, ವಿಜಯೇಂದ್ರ ವಿರುದ್ಧ ಹರಿಹಾಯ್ದಿದ್ದಾರೆ. ವಿಜಯೇಂದ್ರ ಅವರು ಸಂಡೂರು ಉಪ ಚುನಾವಣೆ ವಿಚಾರವಾಗಿ ಶ್ರೀರಾಮುಲು ಬಗ್ಗೆ ರಾಧಾಮೋಹನ್ ಅಗರವಾಲ್ ರಿಗೆ ತಪ್ಪು ಮಾಹಿತಿ ಕೊಟ್ಟಿದ್ದಾರೆ. ಹೀಗಾಗಿ ರಾಮುಲು ಬಗ್ಗೆ ಕೋರ್ ಕಮಿಟಿ ಸಭೆಯಲ್ಲಿ ಅಗರ್‌ವಾಲ್ ಅವರು ಹಾಗೆ ಮಾತಾಡಿದ್ದರು ಎಂದರು. ರಾಜ್ಯಾಧ್ಯಕ್ಷರಾದವರು ಹೀಗೆಲ್ಲ ಮಾಡಬಾರದು ಎಂದು ಇದೇ ಸಂದರ್ಭದಲ್ಲಿ ವಿಜಯೇಂದ್ರ ವಿರುದ್ಧ ಬಿ ಪಿ ಹರೀಶ್ ತೀವ್ರ ಆಕ್ರೋಶ ಹೊರಹಾಕಿದರು. ಸ್ಥಳೀಯ ಚುನಾವಣೆಗಳಲ್ಲಿ ಪಕ್ಷ ವಿರೋಧಿಗಳಿಗೆ ವಿಜಯೇಂದ್ರ ಬೆಂಬಲ ಕೊಡ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ಅಲ್ಲದೆ, ಬಿಜಪಿ ಮಂಡಲ ಅಧ್ಯಕ್ಷರ ಆಯ್ಕೆಯನ್ನೂ ಬೆಂಗಳೂರಿನಲ್ಲಿ ಮಾಡಿದ್ದಾರೆ. ದಾವಣಗೆರೆ ಜಿಲ್ಲಾಧ್ಯಕ್ಷರ ಆಯ್ಕೆ ಬಗ್ಗೆ ಸಭೆಯನ್ನೂ ಅವರ ಮನೆಯಲ್ಲಿ ಮಾಡಿದ್ದಾರೆ. ಹೈಕಮಾಂಡ್ ಇದನ್ನೆಲ್ಲ ಗಮನಿಸಬೇಕು, ಹೈಕಮಾಂಡ್ ಮಧ್ಯಪ್ರವೇಶ ಮಾಡಬೇಕು ಎಂದು ಇದೇ ವೇಳೆ ಆಗ್ರಹ ಮಾಡಿದರು. ಇದು ರಾಮುಲು ಅಸಮಾಧಾನಕ್ಕೆ ಕಾರಣವಾಗಿದೆ. ಇದರ ಬೆನ್ನಲ್ಲೇ ರಾಮುಲು ಮತ್ತು ಜನಾರ್ದನ ರೆಡ್ಡಿ ನಡುವೆ ಅಸಮಾಧಾನ ಸ್ಫೋಟ ಗೊಂಡಿದೆ. ಅಗರ್‌ವಾಲ್ ಅವರಿಗೆ ಜನಾ ರ್ದನ ರೆಡ್ಡಿ ಮಾಹಿತಿ ನೀಡಿದ್ದರು. ಎಂದು ರಾಮುಲು ಆರೋಪ ಮಾಡಿದ್ದರು. ಆದರೆ ರೆಡ್ಡಿ ಇದನ್ನು ನಿರಾಕರಣೆ ಮಾಡಿದ್ದರು.



ಇದೀಗ ರೆಡ್ಡಿ, ಶ್ರೀರಾಮುಲು ನಡುವಿನ ಭಿನ್ನಾಭಿಪ್ರಾಯ ತೀವ್ರಗೊಂಡ ಹಿನ್ನೆಲೆಯಲ್ಲಿ ಹೈಕಮಾಂಡ್ ಸಂಧಾನ ನಡೆಸುವ ಸಾಧ್ಯತೆ ಇದೆ. ಈ ನಡುವೆ ಬಿಪಿ ಹರೀಶ್ ಹೊಸ ಬಾಂಬ್ ಸಿಡಿಸಿದ್ದಾರೆ. ನೇರವಾಗಿ ವಿಜಯೇಂದ್ರ ವಿರುದ್ಧ ಆರೋಪ ಮಾಡಿದ್ದಾರೆ.

**ಬಹಿರಂಗವಾಗಿ ಆರೋಪ**

ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಕೋರ್ ಕಮಿಟಿ ಸಭೆಯಲ್ಲಿ ಶ್ರೀರಾಮುಲು ವಿರುದ್ಧ ರಾಜ್ಯ ಬಿಜೆಪಿ ಉಸ್ತುವಾರಿ ಅಗರ್‌ವಾಲ್ ಅಸಮಾಧಾನ ಹೊರಹಾಕಿದ್ದರು. ಸಂಡೂರು ಉಪ ಚುನಾವಣೆಯ ಸೋಲಿನ ಕುರಿತಾಗಿ ರಾಮುಲು ಕಾರ್ಯವೈಖರಿಗೆ ಬಗ್ಗೆ ಬಹಿರಂಗವಾಗಿ ಆರೋಪ ಮಾಡಿದ್ದರು.

## ವಿಮಾನ ನಿಲ್ದಾಣ ತುಮಕೂರು ಭಾಗದಲ್ಲಿ ನಿರ್ಮಿಸಿ

• ಉದಯವಾಹಿನಿ, ಬೆಂಗಳೂರು

2ನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ತುಮಕೂರು ಭಾಗದಲ್ಲಿ ನಿರ್ಮಿಸಿದರೆ 21 ಜಿಲ್ಲೆಗಳಿಗೆ ಅನುಕೂಲವಾಗುತ್ತೆ ಎಂದು ಡಾ.ಜಿ . ಪರಮೇಶ್ವರ್ ಹೇಳಿದ್ದಾರೆ. ಸದಾಶಿವನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ತುಮಕೂರಿಗೆ ನೀಡುವಂತೆ ಕೇಳುತ್ತಿದ್ದೇವೆ. ತುಮಕೂರಿನ ಭಾಗದಲ್ಲಿ ನಿರ್ಮಾಣವಾದರೆ ಉತ್ತರ ಕರ್ನಾಟಕ ಭಾಗದ 21 ಜಿಲ್ಲೆಗಳಿಗೂ ಅನುಕೂಲವಾಗಲಿದೆ. ಈಗಿರುವ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕು ಸಂಪರ್ಕವಾಗುತ್ತದೆ ಎಂದರು. ತುಮಕೂರುವರೆಗೆ ಮೆಟ್ರೋ ಯೋಜನೆ ಡಿಪಿಆರ್ ಇನ್ನು ಅಂತಿಮವಾಗಿಲ್ಲ. ಹೈದ್ರಾಬಾದ್ ಕಂಪನಿಗೆ ನೀಡಲಾಗಿದ್ದು ಡಿಪಿಆರ್ ವರದಿ ನೀಡಿಲ್ಲ. ವರದಿ ನೀಡಿದ ನಂತರ ತೀರ್ಮಾನ ತೆಗೆದುಕೊಳ್ಳುತ್ತೇವೆ. ತದನಂತರ ಕೇಂದ್ರ ಸರ್ಕಾರದ ಅನುಮತಿ ಕೇಳುತ್ತೇವೆ ಎಂದು ಹೇಳಿದರು. ಸಿಎಂ ನೇಮಕ ಮಾಡುವುದು ಹೈಕಮಾಂಡ್. ಶಾಸಕರ ಅಭಿಪ್ರಾಯ ಕೇಳಬೇಕಿಲ್ಲ ಎಂದು ರಾಮನಗರ ಶಾಸಕರ ಹೇಳಿಕೆ ನೀಡಿದ್ದಾರೆ. ಹೈಕಮಾಂಡ್ ಸೂಚನೆ ಶಾಸಕರಿಗೆ ಅನ್ವಯವಾಗುವುದಿಲ್ಲವೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಹೈಕಮಾಂಡ್ ಸೂಚನೆ ಶಾಸಕರಿಗು, ಮಂತ್ರಿಗಳಿಗು ಎಲ್ಲರಿಗೂ ಅನ್ವಯಯಾವಗುತ್ತದೆ. ಪಕ್ಷದಲ್ಲಿ ಯಾರು ಆ ರೀತಿ ಹೇಳಿಕೆ ಕೊಡಬಾರದು ಎಂದು ಹೈಕಮಾಂಡ್ ಸೂಚಿಸಿದ ಮೇಲೆ ಎಲ್ಲರಿಗು ಅನ್ವಯವಾಗುತ್ತದೆ. ಅವರಿಗು ಹೈಕಮಾಂಡ್ ಮತ್ತೆ ಹೇಳುತ್ತಾರೆ ಎಂದರು. ಹೈಕಮಾಂಡ್, ಶಾಸಕರು ಆಯ್ಕೆ ಮಾಡುತ್ತಾರೆ. ಮೊದಲು ಶಾಸಕರ ಅಭಿಪ್ರಾಯ ಪಡೆಯುತ್ತಾರೆ. ಆನಂತರ ಅವರು ತೀರ್ಮಾನ ಮಾಡುತ್ತಾರೆ. ಬೆಂಬಲ ಸೇರಿದಂತೆ ಬೇರೆ ಬೇರೆ ವಿಚಾ ರಗಳನ್ನು ಆಧರಿಸಿ ಪ್ರಕಟಿಸುತ್ತಾರೆ ಎಂದು ಹೇಳಿ ದರು.



# ಮಾಸ್ಟರ್ ಪ್ಲಾನ್ ಆದ ಕಡೆ ಮತ್ತೆ ಭೂ ಪರಿವರ್ತನೆ ಅಗತ್ಯವಿಲ್ಲ


## ಜಮೀನು ಖಾತೆಗೆ ಆಧಾರ್ ಸೀಡಿಂಗ್, ಅನಧಿಕೃತ ಬಡಾವಣೆಗಳ ಖಾತಾ ಬಂದ್ : ನಕಲಿ ದಾಖಲೆ ಸೃಷ್ಟಿ ತಡೆಗೆ ಮಹತ್ವದ ಹೆಜ್ಜೆ

• ಉದಯವಾಹಿನಿ, ಬೆಂಗಳೂರು

ನಮ್ಮ ಸರ್ಕಾರ ಬಂದಾಗ 10 ಸಾವಿರಕ್ಕೂ ಮಿಕ್ಕಿ ಅವಧಿ ಮೀರಿದ ಪ್ರಕರಣಗಳು ಇದ್ದವು. ಈಗ ಕೇವಲ 369 ಪ್ರಕರಣಗಳು ಮಾತ್ರ ತಹಶೀಲ್ದಾರ್ ನ್ಯಾಯಾಲಯಗಳಲ್ಲಿವೆ ಎಂದು ಸಿಎಂ ಸಿದ್ದರಾಮಯ್ಯಗೆ ದಾಖಲೆ ಸಮೇತ ವಿವರಿಸಿದ ಕಂದಾಯ ಸಚಿವ ಕೃಷ್ಣಬೈರೇಗೌಡ ವಿವರಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೃಷ್ಣಾದಲ್ಲಿ ನಡೆಸಿದ ಕಂದಾಯ ಇಲಾಖೆ ಪ್ರಗತಿ ಪರಿಶೀಲನಾ ಸಭೆಯ ವೇಳೆ, ಬರೀ ವಿಲೇವಾರಿ ಸಾಲದು, ವಿಲೇವಾರಿ ಆದರೆ ಮಾತ್ರ ಮೇಲ್ಮನವಿಗಳಿಗೆ ಬ್ರೇಕ್ ಬೀಳುತ್ತದೆ. ಈ ದಿಕ್ಕಲ್ಲಿ ಹೆಚ್ಚಿನ ಗಮನ ಹರಿಸಿ ಎಂದು ಸಚಿವರಿಗೆ ಸಿಎಂ ಸೂಚಿಸಿದರು.

ಭೂ ಪರಿವರ್ತನೆ ಸಂಪೂರ್ಣ ಪ್ರಕ್ರಿಯೆಯನ್ನು ಒಂದು ತಿಂಗಳ ಒಳಗಾಗಿ ಪೂರ್ಣಗೊಳಿಸಬೇಕು. ಮಾಸ್ಟರ್ ಪ್ಲಾನ್ ಆದ ಕಡೆ ಮತ್ತೆ ಭೂ ಪರಿವರ್ತನೆ ಅಗತ್ಯವಿಲ್ಲ ಎಂದು ಕಾಯ್ದೆಗೆ ತಿದ್ದುಪಡಿ ಮಾಡಲಾಗಿದೆ. ನಮ್ಮ ಸರ್ಕಾರ ಬಂದಾಗ 10 ಸಾವಿರಕ್ಕೂ ಮಿಕ್ಕಿ ಅವಧಿ ಮೀರಿದ ಪ್ರಕರಣಗಳು ಇದ್ದವು. ಈಗ ಕೇವಲ 369 ಪ್ರಕರಣಗಳು ಮಾತ್ರ ತಹಶೀಲ್ದಾರ್ ನ್ಯಾಯಾಲಯಗಳಲ್ಲಿವೆ. ಪ್ರಕರಣಗಳ ವಿಲೇವಾರಿ ತ್ವರಿತಗೊಳಿಸುವ ಜತೆಗೆ ನ್ಯಾಯದಾನದ ಗುಣಮಟ್ಟ ಸಹ ಸುಧಾರಿಸಬೇಕು. ತಹಶೀಲ್ದಾರ್ - ಎಸಿ ಕೋರ್ಟ್‌ಗಳಲ್ಲಿ ಪ್ರಕರಣಗಳು ಸಮರೋಪಾದಿಯಲ್ಲಿ ವಿಲೇವಾರಿ ಆಗುತ್ತಿದೆ. ಆದರೆ ಉಪ ವಿಭಾಗಾಧಿಕಾರಿ ನ್ಯಾಯಾಲಯಗಳಲ್ಲಿ ವಿಲೇವಾರಿ ವೇಗ ಕಡಿಮೆ ಇರುವುದನ್ನು ತಾಂತ್ರಿಕ ಕಾರಣಗಳ ಸಮೇತ ಸಚಿವ ಕೃಷ್ಣಬೈರೇಗೌಡರು ಸಿಎಂಗೆ ವಿವರಿದರು.ಇದನ್ನು ಕಾಲಮಿತಿಯೊಳಗೆ ವಿಲೇವಾರಿ ಮಾಡ ಬೇಕು. ಉಪವಿಭಾಗಾಧಿಕಾರಿ ನ್ಯಾಯಾಲಯಗಳ ಕಾರ್ಯವೈಖರಿ ಸುಧಾರಿಸಬೇಕು. ಈ ಬಗ್ಗೆ ಉಪ ವಿಭಾಗಾಧಿಕಾರಿಗಳಿಗೆ ಕೊನೆಯ ಎಚ್ಚರಿಕೆ ಕೊಡಿ ಎಂದು ಸಿ.ಎಂ ಸೂಚಿಸಿದರು. ಜಿಲ್ಲಾಧಿಕಾರಿ ನ್ಯಾಯಾಲಯಗಳಲ್ಲಿ 9,947 ಒಂದು ವರ್ಷಕ್ಕೂ ಅಧಿಕ ಅವಧಿ ಯಿಂದ ಬಾಕಿಯಿತ್ತು. ಈಗ ಇದರ ಪ್ರಮಾಣ ಕೇವಲ 6 ಸಾವಿರಕ್ಕೆ ಇಳಿದಿದೆ. ಬೆಂಗ ಳೂರು ವ್ಯಾಪ್ತಿಯಲ್ಲಿ ಪ್ರಕರಣಗಳ ತ್ವರಿತ ವಿಲೇವಾರಿಗೆ 18 ವಿಶೇಷ ಉಪವಿಭಾಗಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಜಮೀನು ಖಾತೆಗೆ ಆಧಾರ್ ಸೀಡಿಂಗ್ ಮಾಡಲಾಗುತ್ತಿದೆ. ರಾಜ್ಯದಲ್ಲಿ ಇದುವರೆಗೆ 2.22 ಕೋಟಿ ಖಾತೆಗಳಿಗೆ ಆಧಾರ ಸೀಡಿಂಗ್ ಮಾಡಲಾಗಿದ್ದು, ಇದರಿಂದ ನಕಲಿ ದಾಖಲೆ ಸೃಷ್ಟಿಸುವುದನ್ನು ತಡೆಯಲು ಸಾಧ್ಯವಾಗಿದೆ. ಭೂ ಪರಿವರ್ತನೆಯಾಗದೆ ವಾಣಿಜ್ಯ ಉದ್ದೇಶಗಳಿಗೆ ಜಮೀನು ಬಳಕೆ ಪ್ರಕ ರಣಗಳನ್ನು ಪತ್ತೆ ಹಚ್ಚಲು ಇದರಿಂದ ಸಾಧ್ಯ ವಾಗಿದೆ. ಅನಧಿಕೃತ ಬಡಾವಣೆಗಳಿಗೆ ಖಾತಾ ನೀಡುವುದನ್ನು ಸ್ಥಗಿತಗೊಳಿಸಲು ಈಗಾಗಲೇ ಸೂಚನೆ ನೀಡಿದ್ದೇವೆ.



ಒಂದು ಅವಧಿಗೆ ಬಿ ಖಾತಾ ನೀಡುವ ಪ್ರಕ್ರಿಯೆ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಿ, ಇನ್ನು ಮುಂದೆ ಅನಧಿಕೃತ ಬಡಾವಣೆಗಳು ತಲೆ ಎತ್ತದಂತೆ ನೋಡಿಕೊಳ್ಳ ಬೇಕು ಎನ್ನುವ ಸೂಚನೆ. ರಾಜ್ಯದಲ್ಲಿ ಹಲವು ಪ್ರಕರಣಗಳಲ್ಲಿ ಜಮೀ ನುಗಳ ಖಾತೆ ಇನ್ನೂ ನಿಧನ ಹೊಂದಿದವರ ಹೆಸರಿನಲ್ಲಿಯೇ ಇದೆ. ಪೌತಿ ಖಾತೆ ಅಭಿಯಾನದ ಮೂಲಕ ಮಾಲೀಕರ ಹೆಸರಿಗೆ ಜಮೀನು ಮಾಡುವ ನೋಂದಣಿ ಮಾಡುವ ಕಾರ್ಯವನ್ನು ತ್ವರಿತಗೊಳಿಸಬೇಕು ಎನ್ನುವ ಸೂಚನೆ ನೀಡಿದರು.

**ನೋಂದಣಿ ಮಾಡುವ ಕಾರ್ಯ ತ್ವರಿತ**

**31 ಜಿಲ್ಲೆಗಳಲ್ಲಿ ದಾಖಲೆ**

ಭೂ ಸುರಕ್ಷಾ ಯೋಜನೆ ಮೂಲಕ ಭೂ ದಾಖಲೆಗಳ ಕಂಪ್ಯೂಟರೀಕರಣ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ಇದುವರೆಗೆ ಸುಮಾರು 8 ಕೋಟಿ ಮೂಲ ದಾಖಲೆಗಳ ಕಂಪ್ಯೂಟರೀಕರಣ ಪೂರ್ಣಗೊಳಿಸಲಾಗಿದೆ. ಎಲ್ಲಾ 31 ಜಿಲ್ಲೆಗಳಲ್ಲಿ ದಾಖಲೆಗಳ ಕಂಪ್ಯೂಟರೀಕರಣ ಕಾರ್ಯ ನಡೆಯು ತ್ತಿದೆ. ಹಲವು ವರ್ಷಗಳಿಂದ ಸರ್ಕಾರಿ ಜಮೀನು ಸಾಗುವಳಿ ಮಾಡುತ್ತಿರುವ ರೈತರಿಂದ ಸದರಿ ಜಮೀನು ಸ್ವಾಧೀನಪಡಿಸುವ ಸಂದರ್ಭದಲ್ಲಿ ಎಕ್ಸ್ ಗ್ರೇಷಿಯಾ ನೀಡುವ ಬಗ್ಗೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಬೇಕು.

**ಡ್ರೋನ್ ಸರ್ವೆ ಆರಂಭ**

ಭೂ ದಾಖಲೆಗಳ ರಕ್ಷಣೆಗೆ, ವಂಚಕರಿಂದ ದುರುಪಯೋಗ ಆಗದಂತೆ, ದಾಖಲೆ ತಿದ್ದಲು ಅವಕಾಶ ಆಗದಂತೆ ಭೂ ಸುರಕ್ಷಾ ಪರಿಣಾಮಕಾರಿಯಾಗಿ ಜಾರಿಯಾಗಲಿ. ತಂತ್ರಾಂಶವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಮೂಲಕ ಕಂದಾಯ ವ್ಯವಸ್ಥೆಯಲ್ಲಿ ಸುಧಾರಣಾ ಕಾರ್ಯ. ನಕ್ಷಾ ಯೋಜನೆ ಮೂಲಕ ನಗರ ಪ್ರದೇಶದಲ್ಲಿ ಡ್ರೋನ್ ಸರ್ವೆ ಮೂಲಕ ಪ್ರಾಪರ್ಟಿ ಕಾರ್ಡು. 21 ಜಿಲ್ಲೆಗಳಲ್ಲಿ ಡ್ರೋನ್ ಮೂಲಕ ಸರ್ವೇ ಕಾರ್ಯ, ಉಳಿದ ಜಿಲ್ಲೆಗಳಲ್ಲೂ ಡ್ರೋನ್ ಸರ್ವೆ ಆರಂಭ.

# ಸೌಹಾರ್ದತೆಯ ದೀಪ ಹೊತ್ತಿಸಿದ ದಶಮಿ

## ದಸರಾ ಉತ್ಸವ ಸಮಿತಿಯ ಸುವರ್ಣ ಮಹೋತ್ಸವದಲ್ಲಿ ಸ್ಮರಣ ಸಂಚಿಕೆ 'ದಶಮಿ' ಲೋಕಾರ್ಪಣೆ

• **ಉದಯವಾಹಿನಿ, ಮಡಿಕೇರಿ**

ಕುಂದುರುಮೊಟ್ಟೆ ಶ್ರೀ ಚೌಟಿ ಮಾರಿಯಮ್ಮ ದೇವಾಲಯ ದಸರಾ ಉತ್ಸವ ಸಮಿತಿಯ ಸುವರ್ಣ ಮಹೋತ್ಸವದಲ್ಲಿ ಸ್ಮರಣ ಸಂಚಿಕೆ 'ದಶಮಿ' ಲೋಕಾರ್ಪಣೆಗೊಂಡಿತು. ಹಿಂದೂ, ಮುಸ್ಲಿಮ್, ಕ್ರೈಸ್ತ ಧರ್ಮಗುರುಗಳು ಆಶೀರ್ವಚನ ನೀಡುವ ಮೂಲಕ ಸಮಾರಂಭದಲ್ಲಿ ಸೌಹಾರ್ದತೆಯ ದೀಪ ಹೊತ್ತಿಸಿದರು. ಇಂತಹದ್ದೊಂದು ಅಪರೂಪದ ಕಾರ್ಯಕ್ರಮಕ್ಕೆ ಮಂಗಳವಾರ ಸಾಕ್ಷಿಯಾದುದ್ದು ರಾಜದರ್ಶನ್ ಸಭಾಂಗಣ. ಇಲ್ಲಿ ಕುಂದುರುಮೊಟ್ಟೆ ಶ್ರೀ ಚೌಟಿ ಮಾರಿಯಮ್ಮ ದೇವಾಲಯ ದಸರಾ ಉತ್ಸವ ಸಮಿತಿಯು ಸುವರ್ಣ ಮಹೋತ್ಸವ ಮತ್ತು ಸ್ಮರಣ ಸಂಚಿಕೆ ಬಿಡುಗಡೆ ಸಮಾರಂಭವನ್ನು ಏರ್ಪಡಿಸಿತ್ತು.

ಕಾರ್ಯಕ್ರಮ ಉದ್ಘಾಟಿಸಿದ ವಿಧಾನಪರಿಷತ್ತಿನ ಮಾಜಿ ಸದಸ್ಯ ಹಾಗೂ ಕುಂದುರುಮೊಟ್ಟೆ ಶ್ರೀ ಚೌಟಿ ಮಾರಿಯಮ್ಮ ದೇವಾಲಯ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಎಂ.ಪಿ.ಸುನಿಲ್ ಸುಬ್ರಮಣಿ, ತಾವು ಚೌಟಿ ಮಾರಿಯಮ್ಮ ದೇವತೆಯ ಭಕ್ತರಾದ ಪ್ರಸಂಗವನ್ನು ನೆನಪು ಮಾಡಿಕೊಂಡು ಭಾವುಕರಾದರು.

'ಹಿಂದೆ ಸಾಕಷ್ಟು ಮಂದಿ ಬಂದು ದೇಗುಲಕ್ಕೆ ಬರುವಂತೆ ಆಹ್ವಾನ ನೀಡಿದರೂ ನಾನು ಅದನ್ನು ನಿರ್ಲಕ್ಷಿಸಿದ್ದೆ. ಆದರೆ, ಒಮ್ಮೆ ಅಪಘಾತವಾಗಿ ಉಳಿಯುವುದೇ ಕಷ್ಟಕರವಾಗಿದ್ದಾಗ ಇದೆ ದೇವತೆ ನನ್ನನ್ನು ಕಾಪಾಡಿತು' ಎಂದರು. ಸ್ಮರಣ ಸಂಚಿಕೆಯ ಸಂಪಾದಕ ಟಿ.ಪಿ.ರಮೇಶ್ ಮಾತನಾಡಿ, 'ಇದು ಸರ್ವ ಧರ್ಮೀಯರೂ ಒಟ್ಟಾಗಿ ಕೆಲಸ ಮಾಡುವ ದೇವಾಲಯ' ಎಂದು ಹೇಳಿದರು.



**ಹಿರಿಯ ಪದಾಧಿಕಾರಿಗಳು ಸೇರಿದಂತೆ 31 ಮಂದಿಗೆ ಸನ್ಮಾನ**

ಸ್ಮರಣ ಸಂಚಿಕೆ ರಚಿಸುವಾಗ ದಾಖಲೆಗಳ ಕೊರತೆ ಎದುರಾಯಿತು. ಆದರೂ ಮೌಖಿಕ ಪರಂಪರೆ ಸೇರಿದಂತೆ ಸಾಕಷ್ಟು ಕ್ಷೇತ್ರ ಕಾರ್ಯ ಮಾಡಿ ಈ ಪುಸ್ತಕ ರಚಿಸಲಾಗಿದೆ. ಇದರಲ್ಲಿ ದೇವಸ್ಥಾನದ ದಸರಾ ಉತ್ಸವ ಸಮಿತಿಯಲ್ಲಿ ಕಳೆದ 50 ವರ್ಷದಲ್ಲಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ 24 ಜನರ ಮಾಹಿತಿ ಇದೆ. ಮಾಜಿ ಅಧ್ಯಕ್ಷರು, ನಿಧನರಾದ ಅಧ್ಯಕ್ಷರ ಕುಟುಂಬಸ್ಥರು, ಹಿರಿಯ ಪದಾಧಿಕಾರಿಗಳು ಸೇರಿದಂತೆ 31 ಮಂದಿಗೆ ಸನ್ಮಾನ ಮಾಡಲಾಯಿತು.ಮಂಟಪ ಸಮಿತಿಯ 110 ಮಂದಿಗೆ ಸ್ಮರಣಿಕೆ ನೀಡಲಾಯಿತು. ಸಮಿತಿಯ ಅಧ್ಯಕ್ಷ ರವಿ ಕರ್ಕರ ಅಧ್ಯಕ್ಷತೆ ವಹಿಸಿದ್ದರು. ಸಮಿತಿಯ ಸಂಚಾಲಕ ಮಂಜುನಾಥ, ಸ್ಮರಣ ಸಂಚಿಕೆಯ ಪೋಷಕ ಸಂಪಾದಕ ಡಾ. ಎಚ್.ವಿ.ದೇವದಾಸ್ ಭಾಗವಹಿಸಿದ್ದರು. 'ಇಂದು ನಡೆಯುತ್ತಿರುವ ಜಾತಿಯ ಸಂಘರ್ಷವನ್ನು ಹಿರಿಯರು ತಿದ್ದಬೇಕು. ಇಂದಿನ ಘಟನೆ ನಾಳೆ ಇತಿಹಾಸ ಆಗುತ್ತದೆ ಎಂಬುದನ್ನು ಮರೆಯಬಾರದು' ಎಂದು ಎಂ.ಪಿ.ಸುನಿಲ್ ಸುಬ್ರಮಣಿ ನುಡಿದರು. 'ದೇವರ ಕೆಲಸ ಮಾಡುವಾಗ ನಿಷ್ಪಕ್ಷಪಾತವಾಗಿರಬೇಕು. ಯಾರ ಮನಸ್ಸನ್ನೂ ನೋಯಿಸಬಾರದು. ಒಳ್ಳೆಯ ರೀತಿಯಲ್ಲೇ ನಡೆದುಕೊಳ್ಳಬೇಕು. ಮುಂದಿನ ಪೀಳಿಗೆಗೆ ನಾವು ಮಾದರಿಯಾಗಬೇಕು ಎಂದರು.ಆಚರಣೆಯ ಮೂಲಸ್ವರೂಪಕ್ಕೆ ಪೆಟ್ಟಾಗದಿರಲಿ; ಸ್ವಾಮೀಜಿ ವಿರಾಜಪೇಟೆಯ ಅರಮೇರಿ ಗ್ರಾಮದ ಕಳಂಚೇರಿ ಮಠದ ಮಠಾಧೀಶರಾದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಅವರು 'ನುಡಿದರೆ ಮುತ್ತಿನ ಹಾರದಂತಿರಬೇಕು' ಎಂಬ ವಚನದ ಮೂಲಕ ತಮ್ಮ ಆಶೀರ್ವಚನ ಆರಂಭಿಸಿದರು. ಇಂದಿನ ಆಚರಣೆಗಳೂ ಆಧುನೀಕರಣಗೊಳ್ಳುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದ ಅವರು ಯಾವುದೇ ವಿಧವಾದ ಆಧುನೀಕರಣಗೊಂಡರೂ ಆಚರಣೆಯ ಮೂಲಸ್ವರೂಪಕ್ಕೆ ಧಕ್ಕೆ ಉಂಟು ಮಾಡದಂತಿರಬೇಕು ಎಂಬ ಕವಿಮಾತನ್ನು ಹೇಳಿದರು.ಮನುಷ್ಯ–ಮನುಷ್ಯನ ನಡುವೆ ಹೆಚ್ಚಾಗುತ್ತಿದೆ ಅಂತರ; ಅಬ್ಬುಸಲಾಮ್ ಜಮಾಅತೆ ಇಸ್ಲಾಮೀ ಹಿಂದ್ ಮೈಸೂರು ವಲಯದ ಸಂಚಾಲಕ ಮಂಗಳೂರಿನ ಮೌಲಾನ ಯು.ಅಬ್ಬುಸಲಾಮ್ ಅವರು ಮನುಷ್ಯ ಮತ್ತು ಮನುಷ್ಯನ ನಡುವಿನ ಅಂತರ ಹೆಚ್ಚಾಗುತ್ತಿರುವ ಕುರಿತು ತಮ್ಮ ಆತಂಕ ಹೊರ ಹಾಕಿದರು. ಇಂದು ಜಗತ್ತೇ ಗ್ರಾಮವಾಗಿದ್ದು ದೇಶ ದೇಶಗಳ ನಡುವೆ ಸಮುದ್ರಗಳ ನಡುವೆ ಅಷ್ಟೇ ಏಕೆ ಭೂಮಿ ಮತ್ತು ಆಕಾಶದ ಮಧ್ಯೆ ಅಂತರ ಕಡಿಮೆಯಾಗುತ್ತಿದೆ. ಆದರೆ ಮನುಷ್ಯ ಮನುಷ್ಯನ ನಡುವಿನ ಅಂತರ ಮಾತ್ರ ಹೆಚ್ಚಾಗುತ್ತಿದೆ. ಇಂತಹ ಹೊತ್ತಿನಲ್ಲಿ ಇಂತಹ ಸೌಹಾರ್ದದ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ನಡೆಯಬೇಕು ಎಂದರು.

> **ದೇಗುಲಕ್ಕಿರುವ 300 ವರ್ಷಗಳ ಇತಿಹಾಸ ಸೇರಿದಂತೆ ಹಲವು ಕೌತುಕಮಯ ವಿಚಾರಗಳು ಸ್ಮರಣ ಸಂಚಿಕೆಯಲ್ಲಿವೆ ಎಂದು ಹೇಳುವ ಮೂಲಕ ಸಭಿಕರಲ್ಲಿ ಕುತೂಹಲ ಹೆಚ್ಚಿಸಿದರು.ಪತ್ರಿಕೋದ್ಯಮಿ ಜಿ.ರಾಜೇಂದ್ರ ಅವರು 'ದೇಗುಲದಲ್ಲಿ ಧನಾತ್ಮಕ ಶಕ್ತಿ ಇದೆ' ಎಂದು ಪ್ರತಿಪಾದಿಸಿದರು.**

> **ರಾಜಾಸೀಟ್ ಉದ್ಯಾನಕ್ಕೆ ಬೆಳಿಗ್ಗೆ ವಾಯುವಿಹಾರಕ್ಕೆ ಬಂದವರಿಗೆ ಈ ದೇಗುಲದಿಂದ ಬರುವ ಭಕ್ತಿಗೀತೆಗಳು ಕೇಳುತ್ತವೆ. ಬೆಳಿಗ್ಗೆ ಎದ್ದಾಗ ಇಲ್ಲಿಗೆ ಬಂದರೆ ಧನಾತ್ಮಕವಾದ ಶಕ್ತಿ ಬರುತ್ತದೆ. ಚರ್ಚ್ ಮಸೀದಿಗಳಲ್ಲೂ ಇಂತಹ ಧನಾತ್ಮಕ ಶಕ್ತಿ ಇರುತ್ತದೆ. ಹೆಸರು ಬೇರೆ ಬೇರೆ ಇರಬಹುದು.ಎಲ್ಲರೂ ಆ ಶಕ್ತಿಗೆ ಅಹಂಕಾರ ಬಿಟ್ಟು ವಂದಿಸಬೇಕು' ಎಂದು ಹೇಳಿದರು.**

# ಹಕ್ಕಿಗಾಗಿ ನ್ಯಾಯ ಕೇಳುವುದು ತಪ್ಪಾ?

• **ಉದಯವಾಹಿನಿ, ಗುಡಿಬಂಡೆ**

ರಸ್ತೆ ಆಗಲೀಕರಣದ ವೇಳೆ ಮನೆಗಳನ್ನು ಕಳೆದುಕೊಂಡ ದಲಿತರು ತಮಗೆ ಮಂಜೂರಾಗಿರುವ ಭೂಮಿಯಲ್ಲಿ ಪ್ರತಿಭಟನೆ ಮಾಡಿರುವುದರಿಂದ ದೂರು ದಾಖಲು ಮಾಡಿರುವುದು ಸಮಂಜಸವಲ್ಲ, ನ್ಯಾಯ ಕೇಳುವುದೇ ತಪ್ಪಾ ಎಂದು ದಲಿತ ಮುಖಂಡರು ಪೊಲೀಸರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳು ಮತ್ತು ಪ್ರತಿಭಟನಾ ನಿರತರೊಂದಿಗೆ ನಡೆದ ಸಂಧಾನ ಸಭೆಯಲ್ಲಿ ದಲಿತ ಮುಖಂಡರು ಪೊಲೀಸರ ವಿರುದ್ಧ ಅಸಮಾಧಾನ ಹೊರಹಾಕಿದರು.

ದಲಿತರು ತಮ್ಮ ನಿವೇಶನಗಳಿಗಾಗಿ ಸರ್ಕಾರ ಮೀಸಲಿಟ್ಟಿರುವ ಭೂಮಿಯಲ್ಲಿ ತ್ವರಿತವಾಗಿ ನಿವೇಶನಗಳನ್ನು ನೀಡಬೇಕೆಂದು ಒತ್ತಾಯಿಸಿ ಪ್ರತಿಭಟಿಸಿದರೆ ತಪ್ಪಾ? ಹಕ್ಕನ್ನು ಕೇಳುವುದು ಬಿಟ್ಟರೇ ಕಾನೂನು ಉಲ್ಲಂಘಿಸುವ ಯಾವುದೇ ಕೆಲಸ ಮಾಡಿಲ್ಲ. ಆದರೂ ಪೊಲೀಸರು 24 ಮಂದಿ ವಿರುದ್ಧ ದೂರು ದಾಖಲಿಸಿದ್ದಾರೆ. ಇದು ಎಷ್ಟರಮಟಗೆ ಸರಿ ಎಂದು ದಲಿತ ಮುಖಂಡರು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಅಧಿಕಾರಿಗಳು ಸದರಿ ಜಮೀನಿನ ವಿಚಾರದಲ್ಲಿ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವುದರಿಂದ ಅ ಜಮೀನಿಗೆ ಪ್ರವೇಶ ಮಾಡಬಾರದೆಂದು ತಿಳಿಸಿದರು.



ತಾಲ್ಲೂಕಿನ ಅನೇಕ ಗ್ರಾಮಗಳಲ್ಲಿ ಸ್ಮಶಾನಗಳು ಇಲ್ಲ. ಅಂಬೇಡ್ಕರ್ ಭವನ ನಿರ್ಮಾಣ ಮಾಡಲು ಜಾಗ ನೀಡಿಲ್ಲ, ಬಡ ದಲಿತರ ದರಖಾಸ್ತು ಜಮೀನು ಮಂಜೂರು ಮಾಡುವುದು, ಇಲಾಖೆಗಳಲ್ಲಿ ಆಗಿರುವ ಅಕ್ರಮಗಳನ್ನು ತನಿಖೆ ಮಾಡುವುದು ಸೇರಿ ಇತರ ಬೇಡಿಕೆಗಳನ್ನು ಈಡೇರಿಸಬೇಕು, ಇಲ್ಲವಾದಲ್ಲಿ ಪ್ರತಿಭಟನೆ ಹಿಂಪಡೆಯುವುದಿಲ್ಲ ಎಂದು ಧರಣಿನಿರತು ಎಚ್ಚರಿಸಿದರು.

ತಾಪಂ ಇಒ ನಾಗಮಣಿ, ಸಮಾಜ ಕಲ್ಯಾಣ ಇಲಾಖೆ ಸಹಾಯ ನಿರ್ದೇಶಕ ಲಕ್ಷ್ಮೀಪತಿರೆಡ್ಡಿ, ಗ್ರೇಡ್–2 ತಹಶಿಲ್ದಾರ್ ತುಳಸಿ, ಪಪಂ ಮುಖ್ಯಾಧಿಕಾರಿ ಸಬಾ ಶಿರೀನ್, ಆರಕ್ಷಕ ಉಪ ನಿರೀಕ್ಷಕ ಗಣೇಶ್ ಸೇರಿ ಕಂದಾಯ ನಿರೀಕ್ಷಕರು, ಗ್ರಾಮ ಲೆಕ್ಕಾಧಿಕಾರಿಗಳು ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ಭರವಸೆ ನೀಡಿದರು.

> **ತಹಸೀಲ್ದಾರ್ ಸಿಗ್ನತ್‌ವುಲ್ಲಾ ಮಾತನಾಡಿ, ಬೇಡಿಕೆಗಳನ್ನು ಹಂತಹಂತವಾಗಿ ಈಡೇರಿಸಲಾಗುವುದು. ಈ ಬಗ್ಗೆ ದಲಿತ ಮುಖಂಡರೊಂದಿಗೆ ಸಭೆ ನಡೆಸಬೇಕೆಂದು ಮೇಲಧಿಕಾರಿಗಳು ಸೂಚಿಸಿದ್ದು, ಇಂದಿನ ಸಭೆಯಲ್ಲಿ ವ್ಯಕ್ತವಾದ ಅಂಶಗಳನ್ನು ಜಿಲ್ಲಾ ಅಧಿಕಾರಿಗಳು ನಡೆಸುವ ಸಭೆಯಲ್ಲಿ ಚರ್ಚಿಸಲಾಗುವುದು ಎಂದರು.**

# 30 ಬಿಪಿ ಮಾತ್ರೆಗಳನ್ನು ನುಂಗಿ ಆತ್ಮಹತ್ಯೆಗೆ ಯತ್ನ!

• **ಉದಯವಾಹಿನಿ, ತುಮಕೂರು**

ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಹಾವಳಿ ಮಿತಿ ಮೀರಿದ್ದು, ಫೈನಾನ್ಸ್ ಸಿಬ್ಬಂದಿಗಳ ಕಿರುಕುಳಕ್ಕೆ ಬೇಸತ್ತು ಸಾಲ ಪಡೆದವರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಇದೀಗ ತುಮಕೂರಿನಲ್ಲಿ ಕೂಡ ಮತ್ತೊಂದು ಘಟನೆ ನಡೆದಿದ್ದು ಮಹಿಳೆ ಒಬ್ಬರು ಫೈನಾನ್ಸ್ ಸಿಬ್ಬಂದಿ ಕಿರುಕುಳಕ್ಕೆ ನೊಂದು 30 ಬಿಪಿ ಮಾತ್ರೆಗಳನ್ನು ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ವರದಿಯಾಗಿದೆ.ಹೌದು ತುಮಕೂರು ಜಿಲ್ಲೆಯ ಕೊರಟಗೆರೆ ತಾಲೂಕಿನ ಅಲ್ಲಾಳಸಂದ್ರ ಹನುಮಂತಪುರದಲ್ಲಿ ಘಟನೆ ನಡೆದಿದ್ದು, ಫೈನಾನ್ಸ್ ಕಿರುಕುಳಕ್ಕೆ ಹೆದರಿ ಮಂಗಳಮ್ಮ (45) ಆತ್ಮಹತ್ಯೆಗೆ ಯತ್ನಿಸಿದ್ದಾರೆ. 30 ಬಿಪಿ ಮಾತ್ರೆಗಳನ್ನು ನುಂಗಿ ಮಂಗಳಮ್ಮ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಕೂಡಲೇ ತುಮಕೂರು ಜಿಲ್ಲಾ ಆಸ್ಪತ್ರೆಯ ಐಸಿಯು ಘಟಕದಲ್ಲಿ ಮಹಿಳೆಗೆ ಚಿಕಿತ್ಸೆ ನೀಡಲಾಗುತ್ತಿದೆ. ಈ ಕುರಿತು ಕೋಳಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವಿವಿಧ ಫೈನಾನ್ಸ್ ಕಂಪನಿಗಳಲ್ಲಿ ಮಂಗಳಮ 2 ಲಕ್ಷ ಸಾಲ ಪಡೆದಿದ್ದರು. ಗ್ರಾಮೀಣ ಕೂಟದಲ್ಲಿ 2 ಲಕ್ಷ ಮತ್ತು ಫೈನಾನ್ಸ್ ನಲ್ಲಿ 70 ಸಾವಿರ,ಆಶೀರ್ವಾದ ಫೈನಾನ್ಸ್ ಬಳಿ 80 ಸಾವಿರ ಸಾಲವನ್ನು ಮಂಗಳಮ್ಮ ಪಡೆದಿದ್ದರು. ಒಂದು ವರ್ಷ ಹಿಂದೆ ಹೋಟೆಲ್ ಮಾಡಲು ಮಂಗಳಮ್ಮ ಸಾಲವನ್ನು ಪಡೆದಿದ್ದರು ಹೋಟೆಲ್ ವ್ಯಾಪಾರದಲ್ಲಿ ನಷ್ಟ ಆಗಿದ್ದಕ್ಕೆ ಸಾಲ ತೀರಿಸಲು ವಿಳಂಬವಾಗಿದೆ ದಿನಗೂಲಿ ಕೆಲಸಕ್ಕೆ ಹೋಗಿ ಈಗಾಗಲೇ ಮಂಗಳಮ್ಮ 40 ಕಂತುಗಳನ್ನು ಕಟ್ಟಿದರು. ಎರಡು ದಿನದಿಂದ ಮನೆ ಬಳಿ ಫೈನಾನ್ಸ್ ಸಿಬ್ಬಂದಿ ಬಂದು ಗಲಾಟೆ ಮಾಡುತ್ತಿದ್ದರು. ಇದರಿಂದ ಮನನೊಂದು ಮಂಗಳಮ್ಮ ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎಂದು ತಿಳಿದು ಬಂದಿದೆ.



# ಸೌರ ಬೇಲಿಗಳ ಸಮರ್ಪಕ ನಿರ್ವಹಣೆಗೆ ಸಚಿವ ಈಶ್ವರ ಖಂಡ್ರೆ ಖಡಕ್ ಸೂಚನೆ

• **ಉದಯವಾಹಿನಿ, ಮೈಸೂರು**

ಅರಣ್ಯ ವೃತ್ತದಲ್ಲಿ ಆನೆ ಹಾವಳಿ ಇರುವ ಪ್ರದೇಶಗಳಲ್ಲಿ ತೋಡಲಾಗಿರುವ ಆನೆ ಕಂದಕಗಳ ಮತ್ತು ಅಳವಡಿಸಲಾದ ಸೌರ ಬೇಲಿಗಳ ಸಮರ್ಪಕ ನಿರ್ವಹಣೆ ಮಾಡಿ, ವರದಿ ಸಲ್ಲಿಸುವಂತೆ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಸೂಚನೆ ನೀಡಿದ್ದಾರೆ.

ಮೈಸೂರು ಅರಣ್ಯ ಭವನದಲ್ಲಿಂದು ಅರಣ್ಯ ಮತ್ತು ಪರಿಸರ ಇಲಾಖೆಯ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಾನವ–ವನ್ಯಜೀವಿ ಸಂಘರ್ಷ ನಿಯಂತ್ರಣಕ್ಕಾಗಿ ಕಾಡಿನಂಚಿನಲ್ಲಿ ಬಿದಿರು ಬೆಳೆಸುವುದು ಮತ್ತು ಅರಣ್ಯದೊಳಗಿನ ನೀರು ಗುಂಡಿಗಳು ಬತ್ತದಂತೆ ಸೌರ ಪಂಪ್ ಸೆಟ್ ಮೂಲಕ ಕೊಳವೆ ಬಾವಿಗಳಿಂದ ನೀರು ಹರಿಸುವುದು ಸೇರಿದಂತೆ ಎಲ್ಲಾ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.



**ಪರಿಸರ ಇಲಾಖೆಯ ಅಧಿಕಾರಿಗಳ ಸಭೆ**

ಬೇಸಿಗೆಯಲ್ಲಿ ಕಾಡ್ಗಿಚ್ಚು ಅರಣ್ಯ ನಾಶಕ್ಕೆ ಕಾರಣವಾಗುತ್ತದೆ.

ಹೀಗಾಗಿ ಬರುವ ಬೇಸಿಗೆಯಲ್ಲಿ ಕಾಡ್ಗಿಚ್ಚು ಸಂಭವಿಸದಂತೆ ಎಲ್ಲಾ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು ಮತ್ತು ಕಾಡ್ಗಿಚ್ಚು ಕಾಣಿಸಿಕೊಂಡರೆ ಕೂಡಲೇ ನಂದಿಸಲು ಅಗ್ನಿಶಾಮಕ ಉಪ ಕರಣಗಳ ಸುಸ್ಥಿತಿಯನ್ನು ಖಾತ್ರಿಪಡಿಸಿಕೊಂಡು, ಸಿಬ್ಬಂದಿಯನ್ನು ಸನ್ನದ್ಧವಾಗಿರುವಂತೆ ನಿರ್ದೇಶಿಸಲು ಸೂಚಿಸಿದರು.

### ಏಕ ಬಳಕೆ ಪ್ಲಾಸ್ಟಿಕ್ ನಿಯಂತ್ರಿಸಲು ಸೂಚನೆ

**ಮೈಸೂರು ನಗರವನ್ನು ಏಕ ಬಳಕೆ ಪ್ಲಾಸ್ಟಿಕ್ ಮುಕ್ತ ನಗರ ಎಂದು ಘೋಷಿಸಲಾಗಿದ್ದು, ನಗರದಲ್ಲಿ ಪ್ಲಾಸ್ಟಿಕ್ ಕ್ಯಾರಿಬ್ಯಾಗ್, ಬಾಟಲಿ, ತಟ್ಟೆ, ಲೋಟ, ಬ್ಯಾನರ್, ಬಂಟಿಗ್ಸ್ ಸೇರಿದಂತೆ ಯಾವುದೇ ಏಕ ಬಳಕೆ ವಸ್ತು ಮಾರಾಟ, ಸಾಗಾಟ, ದಾಸ್ತಾನಿಗೆ ಅವಕಾಶ ಇಲ್ಲದಂತೆ ನಿಯಮಿತವಾಗಿ ತಪಾಸಣೆ ನಡೆಸಿ ದಂಡ ವಿಧಿಸಲು ಸೂಚನೆ ನೀಡಿದರು. ಕಲುಷಿತ ನೀರು ಸೇವಿಸಿ ಯಾರೂ ಅಸ್ವಸ್ಥರಾಗಬಾರದು. ಈ ಹಿನ್ನೆಲೆಯಲ್ಲಿ ನಿಯಮಿತವಾಗಿ ಕುಡಿಯುವ ನೀರು ಪೂರೈಕೆ ಮಾಡುವ ಟ್ಯಾಂಕ್‌ಗಳ ನೀರಿನ ಗುಣಮಟ್ಟ ಪರೀಕ್ಷಿಸುವಂತೆ ಪರಿಸರ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.**

# ಬಿಜೆಪಿ ಅಧ್ಯಕ್ಷರ ನೇಮಕದ ಬೆನ್ನಲ್ಲೇ ಅಸಮಾಧಾನ ಸ್ಫೋಟ

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ಭಗತ್ ಸಿಂಗ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷರೂ ಆದ ಮುಖಂಡ ಸಂದೀಪ್ ರೆಡ್ಡಿ ಅವರನ್ನು ಬುಧವಾರ ಚಿಕ್ಕಬಳ್ಳಾಪುರ ಜಿಲ್ಲಾ ಬಿಜೆಪಿ ಅಧ್ಯಕ್ಷರಾಗಿ ನೇಮಿಸಲಾಗಿದೆ.

ಈ ನೇಮಕವು ಬಿಜೆಪಿಯಲ್ಲಿ ಅಸಮಾಧಾನ ಸ್ಫೋಟಕ್ಕೆ ಕಾರಣವಾಗಿದೆ.ಬುಧವಾರ ಪಕ್ಷದ ಜಿಲ್ಲಾ ಉಸ್ತುವಾರಿ ಅಶ್ವತ್ಥನಾರಾಯಣ್, ನಿರ್ಗಮಿತ ಅಧ್ಯಕ್ಷ ರಾಮಲಿಂಗಪ್ಪ ಮತ್ತಿತರ ಮುಖಂಡರು ಜಿಲ್ಲಾ ಕಚೇರಿಯಲ್ಲಿ ಈ ನೇಮಕವನ್ನು ಘೋಷಿಸಿದರು.

ಆದರೆ ಸಂಸದ ಡಾ.ಕೆ.ಸುಧಾಕರ್ ಅವರ ಬೆಂಬಲಿಗರು ಮತ್ತು ಅಧ್ಯಕ್ಷ ಸ್ಥಾನದ ಸ್ಪರ್ಧೆಯಲ್ಲಿದ್ದ ಮುಖಂಡರು ಈ ಸಂಭ್ರಮಾಚರಣೆಯಿಂದ ದೂರವೇ ಉಳಿದರು.

ಅಶ್ವತ್ಥನಾರಾಯಣ್ ಸುದ್ದಿಗೋಷ್ಠಿ ಪೂರ್ಣಗೊಳಿಸಿದ ಸ್ವಲ್ಪ ಸಮಯಕ್ಕೆ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಹಾಗೂ ಡಾ.ಕೆ. ಸುಧಾಕರ್ ಬೆಂಬಲಿಗ ಮರಳುಕುಂಟೆ ಕೃಷ್ಣಮೂರ್ತಿ ನೇತೃತ್ವದಲ್ಲಿ ಬಂದ ಮುಖಂಡರು, ಪಕ್ಷದ ರಾಜ್ಯ ಅಧ್ಯಕ್ಷ ಬಿ.ವೈ ವಿಜಯೇಂದ್ರ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿದರು. ಮತ್ತೊಂದು ಕಡೆ ನೂತನ ಜಿಲ್ಲಾ ಅಧ್ಯಕ್ಷರ ಬೆಂಬಲಿಗರು ಸಂದೀಪ್ ರೆಡ್ಡಿ ಪರ ಘೋಷಣೆ ಕೂಗಿದರು. ಈ ವೇಳೆ ತೀವ್ರ ಗದ್ದಲದ ವಾತಾವರಣ ಉಂಟಾಯಿತು.



> **'ವಿಜಯೇಂದ್ರ ಪಕ್ಷವನ್ನು ಸರ್ವನಾಶ ಮಾಡಲು ಹೊರಟಿದ್ದಾರೆ. ಸುಧಾಕರ್ ಅವರು ಜಿಲ್ಲೆಯಲ್ಲಿ ಪಕ್ಷ ಕಟ್ಟಲು ಶ್ರಮಿಸುತ್ತಿದ್ದಾರೆ. ಆದರೆ ಸುಧಾಕರ್ ಅವರನ್ನು ಪರಿಗಣನೆಗೆ ತೆಗೆದುಕೊಳ್ಳದೆ ಈ ನೇಮಕ ಮಾಡಿದ್ದಾರೆ. ವಿಜಯೇಂದ್ರ ಪಕ್ಷ ಕಟ್ಟಲು ಬಂದಿಲ್ಲ. ಪಕ್ಷ ನಾಶಕ್ಕೆ ಬಂದಿದ್ದಾರೆ' ಎಂದು ಮರಳುಕುಂಟೆ ಕೃಷ್ಣಮೂರ್ತಿ ಆಕ್ರೋಶ ವ್ಯಕ್ತಪಡಿಸಿದರು.**

# ವೀರ ಸೇನಾನಿಗಳ ಆದರ್ಶ ಪಾಲಿಸಿ: ಕಾಳಿಮಾಡ ಶಿವಪ್ಪ

• **ಉದಯವಾಹಿನಿ, ಗೋಣಿಕೊಪ್ಪಲು**

ಇಲ್ಲಿಯ ಕಾವೇರಿ ಕಾಲೇಜು ಆವರಣದಲ್ಲಿರುವ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಹಾಗೂ ಜನರಲ್ ತಿಮ್ಮಯ್ಯ ಅವರ ಜೋಡಿ ಪ್ರತಿಮೆಗಳಿಗೆ ಪುಷ್ಪಾರ್ಚನೆ ಮಾಡುವ ಮೂಲಕ ವೀರ ಸೇನಾನಿಗಳ ಜನ್ಮದಿನ ಆಚರಿಸಲಾಯಿತು.

ಕಾಲೇಜಿನ ಎನ್‌ಸಿಸಿ ಘಟಕದಿಂದ ನಡೆದ ಕಾರ್ಯಕ್ರಮದಲ್ಲಿ ಹಿರಿಯ ವೈದ್ಯ ಕಾಳಿಮಾಡ ಶಿವಪ್ಪ ಮಾತನಾಡಿ, 'ಕಾವೇರಿ ಮಣ್ಣಿನಲ್ಲಿ ಜನಿಸಿದ ಕಾರ್ಯಪ್ಪ ಅವರು ಕೊಡಗಿನ ಕೀರ್ತಿಯನ್ನು ವಿಶ್ವಮಟ್ಟಕ್ಕೆ ಕೊಂಡೊಯ್ದರು ಭಾರತೀಯ ಸೇನೆಯಲ್ಲಿ ಶಿಸ್ತನ್ನು ಮೂಡಿಸಿದ ಮಹಾನುಭಾವರಾಗಿದ್ದರು. ಮಾತೃಭಕ್ತಿ, ಪಿತೃಭಕ್ತಿ, ಗುರುಭಕ್ತಿ, ದೇಶಭಕ್ತಿ, ದೈವಭಕ್ತಿಯ ಜೊತೆಗೆ ಶಿಸ್ತು, ಸಮಯಪಾಲನೆಗೆ ಅತ್ಯಂತ ಮಹತ್ವವನ್ನು ಕೊಡುತ್ತಿದ್ದರು.

ಇಂದಿನ ಯುವ ಪೀಳಿಗೆ ಕಾರ್ಯಪ್ಪ ಅವರ ಆದರ್ಶಗಳನ್ನು ಪಾಲನೆ ಮಾಡುವ ಮೂಲಕ ದೇಶಪ್ರೇಮವನ್ನು ಮೈಗೂಡಿಸಿಕೊಳ್ಳಬೇಕು' ಎಂದರು.



ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಪ್ರೊ. ಎಂ.ಬಿ.ಕಾವೇರಿಯಪ್ಪ ಮಾತನಾಡಿ, 'ಅಪ್ರತಿಮ ದೇಶಪ್ರೇಮಿಯಾಗಿದ್ದ ಕಾರ್ಯಪ್ಪನವರ ಬದುಕಿನ ರೀತಿ ಇಂದಿನ ಯುವ ಜನತೆಗೆ ದಾರಿ ದೀಪ ತಮ್ಮ ಕುಟುಂಬಕ್ಕಿಂತಲೂ ಹೆಚ್ಚಾಗಿ ದೇಶವನ್ನು ದೇಶದ ಸೈನಿಕರನ್ನು ಪ್ರೀತಿಸುತ್ತಿದ್ದ ಅವರ ನಡೆ ನುಡಿ, ಕಾರ್ಯಕ್ಷಮತೆ ಹೃದಯ ವೈಶಾಲ್ಯತೆ, ಅವರು ಹಿರಿಯರಿಗೆ ಕೊಡುತ್ತಿದ್ದ ಗೌರವ ಎಲ್ಲವೂ ಅಜರಾಮರ. ಇಂದಿನ ಯುವಜನತೆ ಹೆಚ್ಚು ಹೆಚ್ಚು ಸೈನ್ಯಕ್ಕೆ ಸೇರುವ ಮೂಲಕ ದೇಶಸೇವೆಯಲ್ಲಿ ತೊಡಗಿಸಿಕೊಂಡು ಕಾರ್ಯಪ್ಪನವರ ಆದರ್ಶ ತುಂಬಿದ ಹಾದಿಯಲ್ಲಿ ನಡೆಯುವಂತಾಗಲಿ' ಎಂದು ಆಶಿಸಿದರು.

ಕಾವೇರಿ ಪದವಿ ಪೂರ್ವ ಕಾಲೇಜು ಉಪ ಪ್ರಾಂಶುಪಾಲರಾದ ಎಂ.ಕೆ. ಪದ್ಮಾ, ಎನ್‌ಸಿಸಿ ಅಧಿಕಾರಿ ಲೆಫ್ಟಿನೆಂಟ್ ಎಂ.ಆರ್.ಆಕ್ರಂ, ಕಚೇರಿ ಅಧೀಕ್ಷಕಿ ಟಿ.ಕೆ.ಲತಾ ಹಾಜರಿದ್ದರು

# ಸರ್ಕಾರಿ ಶಾಲೆ ಬಳಿ ಬಾಯಿ ತೆರೆದ ಚರಂಡಿ


## 1ರಿಂದ 7ನೇ ತರಗತಿವರೆಗೆ ಸುಮಾರು 80ಕ್ಕೂ ಹೆಚ್ಚು ವಿದ್ಯಾರ್ಥಿಗಳು ಓದುತ್ತಿದ್ದಾರೆ

• **ಉದಯವಾಹಿನಿ, ಬೇತಮಂಗಲ**

ಇಲ್ಲಿನ ಗುಟ್ಟಹಳ್ಳಿ ಸರ್ಕಾರಿ ಶಾಲೆಯ ಪ್ರವೇಶ ದ್ವಾರದ ಬಳಿ ಇರುವ ಚರಂಡಿ ವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದ್ದು, ಚರಂಡಿಯು ಬಾಯಿ ತೆರೆದಿದೆ. ಶಾಲೆಯ ಸಣ್ಣ ಮಕ್ಕಳು ಅಥವಾ ಯಾವುದೇ ವಿದ್ಯಾರ್ಥಿಗಳು ಸ್ವಲ್ಪ ಎಚ್ಚರ ತಪ್ಪಿದರೂ, ಚರಂಡಿಯಲ್ಲಿ ಬೀಳುವುದು ಖಚಿತ ಎಂದು ಸ್ಥಳೀಯ ನಾಗರಿಕರು ಆರೋಪಿಸುತ್ತಾರೆ. ಗುಟ್ಟಹಳ್ಳಿ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 1ನೇ ತರಗತಿಯಿಂದ 7ನೇ ತರಗತಿವರೆಗೆ ಸುಮಾರು 80ಕ್ಕೂ ಹೆಚ್ಚು ವಿದ್ಯಾರ್ಥಿಗಳು ಓದುತ್ತಿದ್ದಾರೆ. ಗ್ರಾಮೀಣ ಭಾಗದ ಈ ಶಾಲೆಯಲ್ಲಿ ಬಹುತೇಕ ಸಣ್ಣ ಮಕ್ಕಳೇ ಶಾಲೆಯಲ್ಲಿ ಓದುತ್ತಿದ್ದು, ಪ್ರವೇಶ ದ್ವಾರದಲ್ಲೇ ಚರಂಡಿಯ ಮೇಲೆ ದೊಡ್ಡ ಗುಂಡಿ ಬಿದ್ದಿದೆ.

ಆಟ ಆಡುವ ಸಣ್ಣ ವಯಸ್ಸಿನ ಮಕ್ಕಳು ತಿಳಿಯದೆ ಈ ಚರಂಡಿಯಲ್ಲಿ ಬೀಳುವ ಸಾಧ್ಯತೆ ಇದೆ ಎಂದು ಶಾಲಾ ಶಿಕ್ಷಕರು ಆತಂಕ ವ್ಯಕ್ತಪಡಿಸುತ್ತಾರೆ.

ಶಾಲೆಯಲ್ಲಿನ ಶಿಕ್ಷಕರು ಮಕ್ಕಳಿಗೆ ಪಾಠ, ಪ್ರವಚನ ನೀಡುವ ಜೊತೆಗೆ ಮಕ್ಕಳ ಭದ್ರತೆ ಮೇಲೂ ಹೆಚ್ಚಿನ ನಿಗಾ ವಹಿಸುವ ಅನಿವಾರ್ಯತೆ ಎದುರಾಗಿದೆ.



**ಪೋಷಕ ನಾರಾಯಣಪ್ಪ ಹೇಳಿಕೆ**

ಶಿಕ್ಷಕರು ಕೊಂಚ ಎಚ್ಚರ ತಪ್ಪಿದರೂ, ಶಾಲಾವರಣದಲ್ಲಿ ಆಟವಾಡುವ ಮಕ್ಕಳು, ಶಾಲೆಯ ಪ್ರವೇಶ ದ್ವಾರಕ್ಕೆ ಬಂದು, ಚರಂಡಿಯಲ್ಲಿ ಬೀಳುವ ಸಾಧ್ಯತೆ ಇದೆ. ಮಕ್ಕಳಿಗೆ ಏನೇ ಹೆಚ್ಚು–ಕಮಿಯಾದರೂ ನಾವೇ ಜವಾಬಾ ರರಾಗುತ್ತೇವೆ ಹೀಗಾಗಿ ಮಕ್ಕಳು. ಚರಂಡಿಯ ಹತ್ತಿರ ಸುಳಿಯದಂತೆ ನಾವೇ ಎಚ್ಚರ ವಹಿಸಬೇಕಿದೆ. ಇದು ದೊಡ್ಡ ಸವಾಲಾಗಿದೆ ಎಂದು ಶಿಕ್ಷಕರು ಅಲವತ್ತುಕೊಳ್ಳುತ್ತಾರೆ.

ನಮ್ಮ ಶಾಲೆಯ ಮುಂಭಾಗದಲ್ಲಿರುವ ಚರಂಡಿಯ ಮೇಲೆ ಹೊದಿಸಲಾಗಿದ್ದ ಕಾಂಕ್ರೀಟ್ ಕಿತ್ತು ಹೋಗಿದೆ. ಇದರಿಂದಾಗಿ ಚರಂಡಿ ಮೇಲೆ ಗುಂಡಿ ಬಿದ್ದಿದೆ. ಚರಂಡಿ ದುರಸ್ತಿಗೊಳಿಸಲು ಸ್ಥಳೀಯ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳಿಗೆ ಕೋರಲಾಗಿದೆ. ಆದಾಗ್ಯೂ, ಮಕ್ಕಳು ಜೋಪಾನದಿಂದ ಇರಬೇಕು. ಜೊತೆಗೆ ಮಕ್ಕಳ ಯೋಗಕ್ಷೇಮಕ್ಕಾಗಿ ನಾವು ಅಗತ್ಯ ಕ್ರಮ ಕೈಗೊಂಡಿದ್ದೇವೆ' ಎಂದು ಶಾಲೆಯ ಮುಖ್ಯ ಶಿಕ್ಷಕ ಶ್ರೀನಿವಾಸ್ ಹೇಳುತ್ತಾರೆ.

> **ಖಾಸಗಿ ಶಾಲೆಗಳಿಗೆ ಕಳುಹಿಸಲು ಆರ್ಥಿಕವಾಗಿ ಸಬಲವಾಗಿರದ ಕಾರಣ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುತ್ತೇವೆ. ಸರ್ಕಾರವು ಮಕ್ಕಳಿಗೆ ಶಿಕ್ಷಣ ನೀಡುವ ಜೊತೆಗೆ ಮಕ್ಕಳ ಬಗ್ಗೆ ಕಾಳಜಿಯನ್ನೂ ವಹಿಸಬೇಕು. ಮಕ್ಕಳಿಗೆ ಯಾವುದೇ ತೊಂದರೆಯಾದರೂ, ಸುಮ್ಮನಿರಲ್ಲ ಎಂದು ಶಾಲೆಯ ವಿದ್ಯಾರ್ಥಿಯೊಬ್ಬರ ಪೋಷಕ ನಾರಾಯಣಪ್ಪ ತಿಳಿಸಿದ್ದಾರೆ.**


# ಒಂದೇ ದಿನದಲ್ಲಿ ಒಬ್ಬನ ಹೆಸರಿಗೆ 31 ಸೈಟ್ ರಿಜಿಸ್ಟರ್ ಇಡಿಯಿಂದ 160 ಸೈಟ್ ಜಪ್ತಿ

• **ಉದಯವಾಹಿನಿ, ಮೈಸೂರು**

ಜಾರಿ ನಿರ್ದೇಶನಾಲಯ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ 50:50 ಅನುಪಾದಲ್ಲಿ ಸೈಟು ಪಡೆದಿದ್ದ ಫಲಾನುಭವಿಗಳಿಗೆ ಬಿಗ್ ಶಾಕ್ ಕೊಟ್ಟಿದೆ. ಬರೋಬ್ಬರಿ 160 ಸೈಟುಗಳ ಜಪ್ತಿ ಮಾಡಿ ಇಡಿ ಆದೇಶ ಪ್ರಕಟಿಸಿದೆ.ಅಕ್ರಮ ಹಣ ವರ್ಗಾವಣೆ ಕಾಯ್ದೆ ಅಡಿಯಲ್ಲಿ ಎಲ್ಲಾ ಸೈಟುಗಳ ಜಪ್ತಿಗೆ ಇಡಿ ಅಧಿಕೃತ ಆದೇಶ ಪ್ರಕಟಿಸಿದ್ದು, ಈ ಆದೇಶ ಲಭ್ಯವಾಗಿದೆ.

50:50 ಅನುಪಾತದಲ್ಲಿ ಹಂಚಿಕೆಯಾಗಿರುವ ಸೈಟುಗಳ ವಹಿವಾಟಿನಲ್ಲಿ ಬೇನಾಮಿ ಮತ್ತು ಅಕ್ರಮ ಹಣದ ವ್ಯವಹಾರ ಇದೆ ಎಂಬ ಶಂಕೆ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಅಕ್ರಮ ಹಣ ವರ್ಗಾವಣೆ ಕಾಯ್ದೆ ಅಡಿಯಲ್ಲಿ ಇಡಿ ಎಲ್ಲಾ ಸೈಟುಗಳ ಜಪ್ತಿಗೆ ಆದೇಶ ಹೊರಡಿಸಿದೆ. ಆದೇಶ ಪತ್ರವನ್ನು ಸಬ್ ರಿಜಿಸ್ಟ್ರಾರ್‌ಗೆ ಕಳುಹಿಸಿದೆ.ಸರ್ಕಾರದ ಮಾರ್ಗಸೂಚಿ ಪ್ರಕಾರ ಆ ಸೈಟುಗಳ ಮೌಲ್ಯ 81 ಕೋಟಿ ರೂ. ಆಗಿದೆ. ಆದರೆ ಮಾರುಕಟ್ಟೆ ಮೌಲ್ಯ 300 ಕೋಟಿ ರೂ.ಗಿಂತಲೂ ಅಧಿಕ ಇದೆ ಎನ್ನಲಾಗಿದೆ.

ರವಿ ಅವರ 31 ಸೈಟ್, ಅಬ್ದುಲ್ ವಾಹಿದ್ ಹೆಸರಿನಲ್ಲಿದ್ದ 41 ಸೈಟ್, ಕ್ಯಾಥಡ್ರಾಲ್ ಸೊಸೈಟಿಯ 40 ಸೈಟ್, ಇತರರಿಗೆ ಸೇರಿದ 48 ಸೈಟ್‌ಗಳನ್ನು ಜಪ್ತಿ ಮಾಡಿದೆ. ಮುಡಾ ಬ್ರಹ್ಮಾಂಡ್ ಭ್ರಷ್ಟಾಚಾರ ಕೇಸ್ ಬೆನ್ನು ಹತ್ತಿರುವ ಇಡಿ ಇಂಚಿಂಚೂ ಮಾಹಿತಿಯನ್ನು ಬಟಾಬಯಲು ಮಾಡುತ್ತಿದೆ. ಮುಡಾದಲ್ಲಿ ಒಂದೇ ದಿನದಲ್ಲಿ ಒಬ್ಬ ವ್ಯಕ್ತಿಯ ಹೆಸರಿನಲ್ಲಿ 31 ಸೈಟು ರಿಜಿಸ್ಟರ್ ಮಾಡಿರುವುದು ಬೆಳಕಿಗೆ ಬಂದಿದೆ. 2023ರ ಅ. 11ರಂದು ರವಿ ಎಂಬುವವರ ಹೆಸರಿಗೆ 31 ಸೈಟುಗಳು ನೋಂದಣಿ ಆಗಿರುವುದು ಇಡಿ ಕಾರ್ಯಾಚರಣೆ ವೇಳೆ ಬೆಳಕಿಗೆ ಬಂದಿದೆ. ಮೈಸೂರು ನಗರದ ಹೃದಯ ಭಾಗ ಕುವೆಂಪುನಗರದಲ್ಲಿ 12 ಸೈಟ್, ದಟ್ಟಗಳ್ಳಿ ಮತ್ತು ವಿಜಯನಗರದಲ್ಲಿ 19 ಸೈಟುಗಳು ನೋಂದಣಿ ಆಗಿವೆ. ಇದಲ್ಲದೇ ಅಬ್ದುಲ್ ವಾಹಿದ್ ಹೆಸರಿನಲ್ಲಿ 2023ರ ಮಾರ್ಚ್ 8 ರಂದು 25 ಸೈಟ್ ನೋಂದಣಿಯಾಗಿದ್ದರೆ 2023ರ ಅ.1ರಂದು 3 ಸೈಟ್ ನೋಂದಣಿ ಆಗಿದೆ.




# ಮಿನಿ ನ್ಯೂಸ್

## ಯುವತಿ ಮೇಲೆ ಅಸ್ಸಾಂ ಮೂಲದ ಯುವಕನಿಂದ ಅತ್ಯಾಚಾರ

• **ಉದಯವಾಹಿನಿ, ರಾಮನಗರ**

ರಾಮನಗರ ಜಿಲ್ಲೆಯ ಬಿಡದಿಯಲ್ಲಿ 20 ವರ್ಷದ ಯುವತಿ ಮೇಲೆ ಅಸ್ಸಾಂ ಮೂಲದ ಯುವಕ ಅತ್ಯಾಚಾರ ಎಸಗಿರುವ ಘಟನೆ ಬುಧವಾರ ನಡೆದಿದೆ.ಬಿಡದಿ ಬಡಾವಣೆಯಲ್ಲಿ ಯುವತಿಯ ಪಕ್ಕದ ಮನೆಯಲ್ಲಿ ವಾಸವಿದ್ದ ಆರೋಪಿ ಮಂಜೂರ್ ಆಲಂ ಈ ಪೈಶಾಚಿಕ ಕೃತ್ಯ ಎಸಗಿದ್ದಾನೆ. ಸ್ನಾನ ಮಾಡಲು ಬಾತ್ ರೂಮ್‌ಗೆ ತೆರಳುತ್ತಿದ್ದ ಯುವತಿಯನ್ನು ಮಂಜೂರ್ ಆಲಂ ತನ್ನ ರೂಮ್‌ಗೆ ಹೊತ್ತೊಯ್ದು ಅತ್ಯಾಚಾರ ಎಸಗಿದ್ದಾನೆ.ಈ ವೇಳೆ ಯುವತಿಯ ಚೀರಾಟ ಕೇಳಿದ ಸ್ಥಳೀಯರು ಘಟನೆ ನಂತರ ತಪ್ಪಿಸಿಕೊಳ್ಳುತ್ತಿದ್ದ ಆರೋಪಿಯನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.ಸದ್ಯ ಅಸ್ಸಾಂ ಮೂಲದ ಮಂಜೂರ್ ಆಲಂ ಎಂಬಾತನನ್ನು ಬಿಡದಿ ಪೊಲೀಸ್ ಬಂಧಿಸಿದ್ದು, ಪ್ರಕರಣ ದಾಖಲಿಸಿಕೊಂಡಿದ್ದಾರೆ

## ಕಿರುಗಾವಲು ಗ್ರಾಮದಲ್ಲಿ ಗಾಂಜಾ ಮಾರಾಟ:ಮೂವರ ಬಂಧನ

• **ಉದಯವಾಹಿನಿ, ಮಳವಳ್ಳಿ**

ಕಿರುಗಾವಲು ಗ್ರಾಮದಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಮೂವರನ್ನು ಪೊಲೀಸರು ಬಂಧಿಸಿದ್ದಾರೆ. ಗ್ರಾಮದ ಕಾಶೀಫ್(24), ಇಮ್ರಾನ್ ಖಾನ್(29) ಜಖಿ ಉಲ್ಲಾ ಖಾನ್ (20) ಬಂಧಿತರು. ಆರೋಪಿಗಳಿಂದ ರೂ. 2,600 ಬೆಲೆಯ 14 ಗ್ರಾಂ ಒಣ ಗಾಂಜಾವನ್ನು ವಶಪಡಿಸಿಕೊಳ್ಳಲಾಗಿದೆ. ಕೋರ್ಟ್ ಆರೋಪಿಗಳಿಗೆ ನ್ಯಾಯಾಂಗ ಬಂಧನ ವಿಧಿಸಿದೆ. ಕಿರುಗಾವಲು ಠಾಣೆ ಪಿಎಸ್‌ಐ ಎಂ.ರವಿಕುಮಾರ್, ಸಿಬ್ಬಂದಿ ಮಹೇಶ್, ಶ್ರೀನಿವಾಸ್ ಕಾರ್ಯಾಚರಣೆ ನಡೆಸಿದ್ದರು.

## ಜನಾರ್ದನ ರೆಡ್ಡಿ ಹೇಳಿಕೆಗೆ ವಾಲ್ಮೀಕಿ ಸಮುದಾಯ ಖಂಡನೆ

• **ಉದಯವಾಹಿನಿ, ಕೋಲಾರ**

'ಶಾಸಕ ಗಾಲಿ ಜನಾರ್ದನ ರೆಡ್ಡಿ ವಾಲ್ಮೀಕಿ ಸಮುದಾಯದ ಮಾಜಿ ಸಚಿವ ಬಿ.ಶ್ರೀರಾಮುಲು ಅವರನ್ನು ಹೀಯಾಳಿಸಿದ್ದಾರೆ. ವಾಲ್ಮೀಕಿ ಸಮುದಾಯ ಹಾಗೂ ಶ್ರೀರಾಮುಲು ಅಭಿಮಾನಿಗಳ ಬಳಗವು ಈ ನಡೆಯನ್ನು ತೀವ್ರವಾಗಿ ಖಂಡಿಸಿದೆ' ಎಂದು ಜಿಲ್ಲಾ ವಾಲ್ಮೀಕಿ ಸಮುದಾಯದ ಮುಖಂಡ ನರಸಿಂಹಯ್ಯ ತಿಳಿಸಿದರು. ನಗರದ ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಜನಾರ್ದನ ರೆಡ್ಡಿ ಅವರು ಶ್ರೀರಾಮುಲು ಸಹಕಾರದಿಂದ ರಾಜಕಾರಣದಲ್ಲಿ ಬೆಳೆದಿದ್ದಾರೆ. ಆದರೆ, ಈಗ ಅವರ ವಿರುದ್ಧವೇ ನೀಡುತ್ತಿರುವ ಹೇಳಿಕೆ ಸಹಿಸಲು ಸಾಧ್ಯವಿಲ್ಲ. ಬಿಜೆಪಿ ಈ ಹಿಂದೆ ಅಧಿಕಾರ ಹಿಡಿಯುವಲ್ಲಿ ಶ್ರೀರಾಮುಲು ಪ್ರಮುಖ ಪಾತ್ರವಹಿಸಿದ್ದರು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಶ್ರೀರಾಮುಲು ಅವರಿಗೆ ರಾಜ್ಯಸಭಾ ಸದಸ್ಯತ್ವ ನೀಡಿ ಕೇಂದ್ರದ ಸಚಿವರನ್ನಾಗಿ ಮಾಡಬೇಕು' ಎಂದು ಆಗ್ರಹಿಸಿದರು.'ಶ್ರೀರಾಮುಲು ವಿರುದ್ಧ ತಾತ್ಸಾರದ ಮಾತನಾಡಿರುವ ರೆಡ್ಡಿ ಬಹಿರಂಗವಾಗಿ ಕ್ಷಮೆಯಾಚಿಸಬೇಕು' ಎಂದು ಒತ್ತಾಯಿಸಿದರು.ಸಮುದಾಯದ ಮುಖಂಡರಾದ ನವೀನ್, ನಾಗರಾಜ್, ಮುನಿಯಪ್ಪ, ಮಾಲೂರು ಕೃಷ್ಣಪ್ಪ, ಐತರಾಸನಹಳ್ಳಿ ನರಸಿಂಹಪ್ಪ, ಗರುಡುನಹಳ್ಳಿ ಬಾಬು, ನರಸಾಪುರ ವೆಂಕಟೇಶ್, ಚಿಕ್ಕಕಡತೂರು ಶ್ರೀನಿವಾಸ್, ಹುಂಗೇನಹಳ್ಳಿ ವೆಂಕಟೇಶ್, ಕುಡುವನಹಳ್ಳಿ ಆನಂದ್ ಇದ್ದರು.

## ಪಡಿತರ ಅಕ್ಕಿ ಕಳ್ಳಸಾಗಣೆ: ಬಂಧನ

• **ಉದಯವಾಹಿನಿ, ರಾಮನಗರ**

ತಾಲ್ಲೂಕಿನ ಎಸ್.ಬಿ. ದೊಡ್ಡಿ, ಗೇಟ್ ಬಳಿ ಸೋಮವಾರ ರಾತ್ರಿ ಸರಕು ಸಾಗಣೆ ವಾಹನದಲ್ಲಿ ಪಡಿತರ ಅಕ್ಕಿಯನ್ನು ಕಳ್ಳಸಾಗಣೆ ಮಾಡುತ್ತಿದ್ದ ಆರೋಪದ ಮೇಲೆ, ರಾಮನಗರ ಗ್ರಾಮಾಂತರ ಠಾಣೆ ಪೊಲೀಸರು ವಾಹನ ಚಾಲಕನೊಬ್ಬನನ್ನು ಬಂಧಿಸಿದ್ದಾರೆ. ಬೆಂಗಳೂರಿನ ನಾಯಂಡಹಳ್ಳಿಯ ತೌಸಿಫ್ ಬಂಧಿತ ಚಾಲಕ. ಆತನ ವಾಹನದಲ್ಲಿದ್ದ 6,854 ಕೆ.ಜಿ.ಯ 120 ಅಕ್ಕಿ ಮೂಟೆಗಳನ್ನು ಪೊಲೀಸರನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿ ರಾತ್ರಿ 10.30ರ ಸುಮಾರಿಗೆ ತಾಲ್ಲೂಕಿನ ಮಾಯಗಾನಹಳ್ಳಿ ಕಡೆಯಿಂದ ಮದ್ದೂರು ಕಡೆಗೆ ಕೇರಳ ನೋಂದಣಿಯ ವಾಹನದಲ್ಲಿ ಅಕ್ಕಿ ಸಾಗಿಸುತ್ತಿರುವ ಖಚಿತ ಮಾಹಿತಿ ಮೇರೆಗೆ, ಎಸ್.ಬಿ. ದೊಡ್ಡಿ ಬಳಿ ವಾಹನ ಜಿಲ್ಲೆ ತಡೆದು ತಪಾಸಣೆ ನಡೆಸಲಾಯಿತು ಎಂದು ಪೊಲೀಸರು ತಿಳಿಸಿದರು. ಆಗ ವಾಹನದಲ್ಲಿದ್ದ ಚೀಲಗಳಲ್ಲಿ ಸರ್ಕಾರ ವಿತರಿಸುವ ಪಡಿತರ ಅಕ್ಕಿ ಇರುವುದು ಪತ್ತೆಯಾಯಿತು. ಈ ಕುರಿತು ತೌಸಿಫ್‌ನನ್ನು ವಿಚಾರಿಸಿದಾಗ, ಆತ ಸಾರ್ವಜನಿಕರಿಂದ ಪಡಿತರ ಅಕ್ಕಿ ಖರೀದಿಸಿ ಮದ್ದೂರು ಬಳಿಯ ಗೆಜ್ಜಲಗೆರೆಗೆ ಹೆಚ್ಚಿನ ದರಕ್ಕೆ ಮಾರಾಟ ಮಾಡಲು ಕೊಂಡೊಯ್ಯುತ್ತಿರುವುದಾಗಿ ತಿಳಿಸಿದ. ಆದರೆ, ಆತನ ಬಳಿ ಅಕ್ಕಿ ಸಾಗಾಟಕ್ಕೆ ಮತ್ತು ಮಾರಾಟಕ್ಕೆ ಪರವಾನಗಿ ಇರಲಿಲ್ಲ. ಹಾಗಾಗಿ, ಆರೋಪಿಯನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿ ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

## ಕ್ಷಯ ಮುಕ್ತ ಗ್ರಾಮ ಪಂಚಾಯತ್ ಅಭಿಯಾನ ಕಾರ್ಯಕ್ರಮ

• **ಉದಯವಾಹಿನಿ, ಮೈಸೂರು**

ಕ್ಷಯ ಮುಕ್ತ ಜಿಲ್ಲೆ ಮಾಡಲು ಜಿಲ್ಲೆ ಮಾಡಲು ಎಲ್ಲರೂ ಕೈಜೋಡಿಸಿ. ಗ್ರಾಮ ಪಂಚಾಯತ್ ಮಟ್ಟದಲ್ಲಿ ಕ್ಷಯ ರೋಗದ ಬಗ್ಗೆ ಅರಿವು ಮೂಡಿಸುವ ಮೂಲಕ ಈ ನಿಟ್ಟಿನಲ್ಲಿ ಎಲ್ಲಾ ಇಲಾಖೆಗಳ ಅಧಿಕಾರಿಗಳು ಕಾರ್ಯ ನಿರ್ವಹಿಸಬೇಕು ಎಂದು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಕೆ.ಎಂ. ಗಾಯಿತ್ರಿ ಅವರು ತಿಳಿಸಿದರು. ಜಿಲ್ಲಾ ಪಂಚಾಯತ್ ಶ್ರೀ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ನಡೆದ ಕ್ಷಯಮುಕ್ತ ಗ್ರಾಮ ಪಂಚಾಯತ್ ಅಭಿಯಾನ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಗ್ರಾಮ ಪಂಚಾಯತ್ ಸದಸ್ಯರುಗಳಿಗೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಆರೋಗ್ಯ ಇಲಾಖೆಯ ಸಿಬ್ಬಂದಿಗಳಿಗೆ ಹಾಗೂ ವಿವಿಧ ಇಲಾಖೆಗಳ ಸಿಬ್ಬಂದಿಗಳಿಗೆ ತರಬೇತಿ ನೀಡಲಾಗುತ್ತಿದೆ. ಕ್ಷಯ ಇರುವ ರೋಗಿಗಳಿಗೆ ಸರ್ಕಾರದಿಂದ ಹಲವು ಸೌಲಭ್ಯಗಳನ್ನು ನೀಡಲಾಗುತ್ತಿದೆ. ಕ್ಷಯ ರೋಗ ನಿರ್ಮೂಲನೆ ಹಲವು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಬಗ್ಗೆ ಕ್ಷಯ ರೋಗಿಗಳಿಗೆ ಅರಿವನ್ನು ಮೂಡಿಸಬೇಕು ಎಂದು ತಿಳಿಸಿದರು.

ಅಂತರಾಳದಿಂದ... EDITORIAL

# ಮೈಕ್ರೋ ಫೈನಾನ್ಸ್ ಸಂಸ್ಥೆಗಳ ನಿಯಂತ್ರಣಕ್ಕೆ ಬಿಗಿ ಕ್ರಮ ಅಗತ್ಯ

ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಂದ ಸಾಲ ಪಡೆದಿರುವವರ ಮೇಲೆ ದೌರ್ಜನ್ಯ ಹೆಚ್ಚುತ್ತಿರುವುದು, ದೌರ್ಜನ್ಯ ತಾಳಲಾರದೇ ಸಾಲಗಾರರು ಆತ್ಮಹತ್ಯೆಗೆ ಯತ್ನಿಸಿರುವುದು ಮತ್ತು ಪ್ರಾಣ ಕಳೆದುಕೊಂಡಿರುವ ಪ್ರಕರಣಗಳು ಇತ್ತೀಚಿನ ದಿನಗಳಲ್ಲಿ ಸರಣಿಯೋಪಾದಿಯಲ್ಲಿ ವರದಿಯಾಗಿವೆ. ಬಡವರು ಮತ್ತು ದುಡಿಯುವ ವರ್ಗದ ಜನರಲ್ಲಿ ಉಳಿತಾಯ ಮನೋಭಾವವನ್ನು ಉತ್ತೇಜಿಸಲು ಮತ್ತು ತುರ್ತು ಅಗತ್ಯಗಳಿಗೆ ಸಾಲ ಪಡೆಯಲು ನೆರವಾಗುವ ಉದ್ದೇಶದಿಂದ ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಆರಂಭವಾದವು. ಬ್ಯಾಂಕ್‌ಗಳ ಜೊತೆ ಸಂಪರ್ಕ ಸಾಧಿಸಿ ವಹಿವಾಟು ನಡೆಸಲು ಸಾಧ್ಯವಾಗದ ದುರ್ಬಲ ವರ್ಗಗಳನ್ನೇ ಗುರಿಯಾಗಿಸಿಕೊಂಡು ಆರಂಭವಾದ ಈ ಸಂಸ್ಥೆಗಳು, ಆರಂಭದಲ್ಲಿ ಆರೋಗ್ಯ, ಶಿಕ್ಷಣ, ಮದುವೆ ವೆಚ್ಚ ಭರಿಸುವಂತಹ ತೀರಾ ಅಗತ್ಯಗಳಿಗೆ ಸಾಲ ಒದಗಿಸುತ್ತಿದ್ದವು. ಆದರೆ, ಈಗ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ವಹಿವಾಟಿನ ಸ್ವರೂಪವೇ ಬದಲಾಗಿದೆ. ರಾಜ್ಯದಲ್ಲಿ 1.09 ಕೋಟಿ ಖಾತೆಗಳ ಮೂಲಕ 59,367 ಕೋಟಿ ಮೊತ್ತದ ಸಾಲವನ್ನು 31 ನೋಂದಾಯಿತ ಮೈಕ್ರೋ ಫೈನಾನ್ಸ್ ಕಂಪನಿಗಳು ನೀಡಿವೆ ಎಂಬ ಅಂಕಿಅಂಶವನ್ನು ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಭೆಯಲ್ಲೇ ಹಂಚಿಕೊಳ್ಳಲಾಗಿದೆ. ನೋಂದಾಯಿತವಲ್ಲದ ಇನ್ನೂ ಹಲವು ಕಂಪನಿಗಳು ರಾಜ್ಯದಲ್ಲಿ ಹಣಕಾಸು ವಹಿವಾಟು ನಡೆಸುತ್ತಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು.

> **ಸದ್ಯ ಇರುವ ಕಾನೂನುಗಳ ಪ್ರಕಾರ, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮಾತ್ರ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಮೇಲೆ ನೇರ ನಿಯಂತ್ರಣ ಹೊಂದಿದೆ. ಆರ್‌ಬಿಐ ಮಾರ್ಗಸೂಚಿಯ ಪ್ರಕಾರ, ಈ ಸಂಸ್ಥೆಗಳು ಒಬ್ಬ ವ್ಯಕ್ತಿಗೆ 2 ಲಕ್ಷಕ್ಕಿಂತ ಹೆಚ್ಚು ಸಾಲ ನೀಡುವಂತಿಲ್ಲ. ಸಾಲ ವಿತರಣೆಯಲ್ಲಿ ಮಾತ್ರವಲ್ಲ, ವಸೂಲಾತಿಯಲ್ಲೂ ಈ ಸಂಸ್ಥೆಗಳು ಕಾನೂನುಬಾಹಿರ ಮಾರ್ಗಗಳನ್ನು ಅನುಸರಿಸುತ್ತಿವೆ ಎಂಬುದು ಬಹಿರಂಗವಾಗಿದೆ.**

ಸಾಲಗಾರರ ಮರುಪಾವತಿ ಸಾಮರ್ಥ್ಯವನ್ನು ಕಡೆಗಣಿಸಿ ಒಂದಕ್ಕಿಂತ ಹೆಚ್ಚು ಬಾರಿ ಸಾಲ ನೀಡಲಾಗುತ್ತಿದೆ. ಮೈಕ್ರೋ ಫೈನಾನ್ಸ್ ಸಂಸ್ಥೆಗಳ ವಹಿವಾಟು ವಿಸ್ತರಣೆಯ ದಾಹ ಮತ್ತು ಸಾಲ ವಿತರಣೆಗೆ ನೌಕರರಿಗೆ ನೀಡುತ್ತಿರುವ ಗುರಿಯು ಸಮಸ್ಯೆ ಬಿಗಡಾಯಿಸಲು ಕಾರಣವಾಗುತ್ತಿವೆ. ಪರಿಣಾಮವಾಗಿ ಜನ ಸಾಲದ ಬಲೆಗೆ ಸಿಲುಕಿ, ಮರುಪಾವತಿಸಲಾಗದೇ ಒದ್ದಾಡುತ್ತಿದ್ದಾರೆ. ಆರ್‌ಬಿಐ ಅನುಮತಿಸಿರುವುದಕ್ಕಿಂತಲೂ ಹೆಚ್ಚಿನ ಮೊತ್ತದ ಬಡ್ಡಿ ವಿಧಿಸುತ್ತಿರುವುದು, ಮರುಪಾವತಿ ವಿಳಂಬದ ಕಾರಣಕ್ಕೆ ದುಬಾರಿ ದಂಡ ವಿಧಿಸುವುದು ಸೇರಿದಂತೆ ಹಲವು ವಿಧಾನಗಳ ಮೂಲಕ ಈ ಸಂಸ್ಥೆಗಳು ಸಾಲಗಾರರ ಮೇಲೆ ದೌರ್ಜನ್ಯ ನಡೆಸುತ್ತಿವೆ ಎಂಬ ದೂರುಗಳಿವೆ. ಸಾಲ ವಸೂಲಾತಿಗೆ ಕೆಲವು ಸಂಸ್ಥೆಗಳು ಕ್ರಿಮಿನಲ್ ಹಿನ್ನೆಲೆಯ ವ್ಯಕ್ತಿಗಳನ್ನೂ ಬಳಸಿಕೊಳ್ಳುತ್ತಿರುವ ಆರೋಪಗಳಿವೆ. ಸಾಲಗಾರರು ಮತ್ತು ಜಾಮೀನುದಾರರ ಮೇಲೆ ಹಲ್ಲೆ ನಡೆಸುವುದು, ಬೆದರಿಕೆ ಹಾಕುವ ಮೂಲಕ ಮರುಪಾವತಿಗೆ ಒತ್ತಡ ಹೇರುತ್ತಿರುವುದೂ ನಡೆಯುತ್ತಿದೆ. ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಕಿರುಕುಳ, ದೌರ್ಜನ್ಯ ಎದುರಿಸಲಾಗದೇ ಜನ ಹೊಲ–ಗದ್ದೆ, ತೋಟಗಳಲ್ಲೇ ರಾತ್ರಿ ಕಳೆಯುತ್ತಿರುವಂತಹ ಅಮಾನವೀಯ ಪ್ರಕರಣಗಳೂ ವರದಿಯಾಗಿವೆ. ಮೈಕ್ರೋ ಫೈನಾನ್ಸ್ ಸಂಸ್ಥೆಗಳನ್ನು ನಿಯಂತ್ರಿಸುವ ಕ್ರಮಗಳ ಅನುಪಸ್ಥಿತಿ ಹಾಗೂ ಮೇಲುಸ್ತುವಾರಿಯ ಕೊರತೆಯೇ ಈಗ ಸೃಷ್ಟಿಯಾಗಿರುವ ಬಿಕ್ಕಟ್ಟಿಗೆ ಕಾರಣ. ಬ್ಯಾಂಕ್‌ಗಳ ಸಂಪರ್ಕದಿಂದ ದೂರ ಉಳಿದ ಜನರಲ್ಲಿ ಹಣಕಾಸು ಸಾಕ್ಷರತೆ ಮೂಡಿಸಿ, ಉಳಿತಾಯಕ್ಕೆ ಉತ್ತೇಜಿಸಿ, ತುರ್ತು ಸಂದರ್ಭಗಳಲ್ಲಿ ಸಾಲ ಒದಗಿಸುವುದು ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಮೂಲ ಉದ್ದೇಶ. ಬಹುತೇಕ ಸಂಸ್ಥೆಗಳು ಈ ಉದ್ದೇಶದಿಂದ ವಿಮುಖವಾಗಿದ್ದು, ಲಾಭವನ್ನಷ್ಟೇ ಗುರಿಯಾಗಿಸಿಕೊಂಡು ಕೆಲಸ ಮಾಡುತ್ತಿವೆ. ಇಲ್ಲಿಯೇ ಸಮಸ್ಯೆಯ ಮೂಲ ಇರುವುದು. ಈಗ ಈ ಸಂಸ್ಥೆಗಳನ್ನು ನಿಯಂತ್ರಿಸಲು ಹೊಸ ಕಾನೂನು ಜಾರಿಗೊಳಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಈ ಸಂಸ್ಥೆಗಳ ನೋಂದಣಿಯನ್ನು ಕಡ್ಡಾಯಗೊಳಿಸುವುದರ ಜೊತೆಗೆ, ಅವುಗಳ ಚಟುವಟಿಕೆಯನ್ನು ನಿಯಂತ್ರಿಸುವ ಪ್ರಸ್ತಾವ ಕರಡು ಮಸೂದೆಯಲ್ಲಿದೆ. ಹೊಸ ಕಾನೂನು ಜಾರಿಯಾದ ತಕ್ಷಣವೇ ಈ ಸಮಸ್ಯೆ ನಿಯಂತ್ರಣಕ್ಕೆ ಬರುತ್ತದೆ ಎಂದು ಖಚಿತವಾಗಿ ಹೇಳಲಾಗದು. ಹೊಸ ಹಾದಿಗಳ ಮೂಲಕ ಇದೇ ಸಂಸ್ಥೆಗಳು ಚಟುವಟಿಕೆ ವಿಸ್ತರಿಸಬಹುದು ಅಥವಾ ಸ್ಥಳೀಯವಾಗಿ ಬಡ್ಡಿ ವ್ಯಾಪಾರಿಗಳ ಹಾವಳಿ ಹೆಚ್ಚಲೂಬಹುದು. ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಹಾಯವಾಣಿ ತೆರೆದು, ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಕಿರುಕುಳದ ಕುರಿತ ದೂರುಗಳನ್ನು ದಾಖಲಿಸಿಕೊಳ್ಳುವುದಕ್ಕೂ ಮುಖ್ಯಮಂತ್ರಿ ಆದೇಶಿಸಿದ್ದಾರೆ. ಇವೆಲ್ಲವೂ ತಾತ್ಕಾಲಿಕ ಪರಿಹಾರವನ್ನಷ್ಟೇ ಒದಗಿಸುತ್ತವೆ. ರಾಷ್ಟ್ರೀಕೃತ ಬ್ಯಾಂಕ್‌ಗಳು ಮತ್ತು ಖಾಸಗಿ ವಲಯದ ಬೃಹತ್ ಬ್ಯಾಂಕ್‌ಗಳು ಬಡವರು, ದುಡಿಯುವ ವರ್ಗದ ಜನರಿಗೆ ಸಾಲ ಒದಗಿಸುವ ವಿಚಾರದಲ್ಲಿ ಹೊಂದಿರುವ ಬಿಗಿ ನಿಲುವನ್ನು ಬದಲಿಸಿಕೊಳ್ಳದ ವಿನಾ ಶಾಶ್ವತ ಪರಿಹಾರ ದೊರಕದು. ಬ್ಯಾಂಕ್‌ಗಳನ್ನು ಆ ದಾರಿಗೆ ತರಬೇಕಾದ ಹೊಣೆಗಾರಿಕೆ ಸರ್ಕಾರದ ಮೇಲಿದೆ. ಸಹಕಾರಿ ಸಂಸ್ಥೆಗಳನ್ನೂ ಸಮರ್ಪಕವಾಗಿ ಬಳಸಿಕೊಂಡು, ದುರ್ಬಲರಿಗೆ ಸಾಲ ಒದಗಿಸುವುದಕ್ಕೆ ಮುಂದಾಗಬೇಕು. ಸುಲಭವಾಗಿ ಸಾಲ ದೊರಕುತ್ತದೆ ಎಂದು ಮರುಪಾವತಿಯ ಸಾಮರ್ಥ್ಯವನ್ನು ಮೀರಿ ಸಾಲ ಪಡೆಯುವುದರಿಂದ ಎದುರಾಗಬಹುದಾದ ಸಂಕಷ್ಟಗಳ ಕುರಿತು ಜನಸಾಮಾನ್ಯರಲ್ಲಿ ಅರಿವು ಮೂಡಿಸುವ ಕೆಲಸವೂ ಆಗಬೇಕು. ಕಾನೂನು ಮತ್ತು ಆರ್‌ಬಿಐ ಮಾರ್ಗಸೂಚಿಗಳನ್ನು ಮೀರಿ ಸಾಲದ ವಹಿವಾಟು ನಡೆಸಿ, ಬಡವರನ್ನು ಶೋಷಿಸುವ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ಜರುಗಿಸುವ ದಿಟ್ಟ ನಿಲುವನ್ನು ಆರ್‌ಬಿಐ ಮತ್ತು ರಾಜ್ಯ ಸರ್ಕಾರ ಪ್ರದರ್ಶಿಸಬೇಕು.



# ರಾಮಾಯಣ

## ಶ್ರೀ ರಾಮನು ಪರಶು ರಾಮನನ್ನು ಜಯಿಸಿದ್ದು

• ಹಿಂದಿನ ಸಂಚಿಕೆಯಿಂದ **76ನೆಯ ಅಧ್ಯಾಯ**

ಆ ಬಳಿಕ ರಘುನಾಥನು ರಥಾರೂಢನಾಗಿ ರಾಜಬೀದಿಯಲ್ಲಿ ಬರುತ್ತಿದ್ದನು. ಉಪ್ಪರಿಗೆಯ ಮೇಲಿದ್ದ ದಶರಥರಾಯನು ಆತನನ್ನು ಕಂಡು ಅತ್ಯಂತ ಸಂತೋಷಪಡುತ್ತಿದ್ದನು. ರಘುನಾಥನು ಸಾಕ್ಷಾತ್ ಗಂಧರ್ವಪತಿಯ ಹಾಗೆ ಲೋಕದಲ್ಲಿ ಅತ್ಯಂತ ಪ್ರಸಿದ್ಧನಾದವನು. ನಿಡಿದಾದ ತೋಳುಗಳುಳ್ಳವನೂ ಮದ್ದಾನೆಯ ನಡೆಯುಳ್ಳವನೂ ಚಂದ್ರನಂತೆ ಮನೋಹರವಾದ ಮುಖಮಂಡಲವುಳ್ಳವನೂ ನೋಡುವ ಜನರಿಗೆ ಅತ್ಯಂತ ಪ್ರಿಯದರ್ಶನನಾಗಿ ರೂವಲಾವಣ್ಯಗಳುಳ್ಳವನೂ ಬಾಡಿದ ಸಸ್ಯಾದಿಗಳನ್ನು ಮಳೆಗರೆದು ಚಿಗುರಿಸುವ ಪರ್ಜನ್ಯನೋಪಾದಿಯಲ್ಲಿ ಸಮಸ್ತ ಪ್ರಜೆಗಳನ್ನೂ ತನ್ನ ಕೃಪಾದೃಷ್ಟಿಯಿಂದಲೇ ತೃಪ್ತಿಪಡಿಸುವಂಥವನೂ ಆದ ಶ್ರೀರಾಮನನ್ನು ಕಂಡು ಸರ್ವರೂ ಸಂತೋಷಪಟ್ಟರು. ಆಮೇಲೆ ಅರಮನೆಯನ್ನು ಸೇರಿ ರಥದಿಂದಿಳಿದು ಸಾರಥಿಯ ಮಂತ್ರಿಯೂ ಆದ ಸುಮಂತ್ರನು ಶ್ರೀರಾಮನನ್ನು ದಶರಥರಾಯನ ಸಮೀಪಕ್ಕೆ ಕರೆತಂದನು. ಶ್ರೀರಾಮನು ಕೈಲಾಸಪರ್ವತದ ಕೋಡುಗಲ್ಲಿನಂತೆ ಅತ್ಯಂತ ಬಿಳುಪಾದ ಉಪ್ಪರಿಗೆಯನ್ನು ಹತ್ತಿ ಸುಮಂತ್ರನೊಡನೆ ತಂದೆಯ ಸಮೀಪಕ್ಕೆ ಹೋಗಿ ತನ್ನ ಗೋತ್ರನಾಮಗಳನ್ನು ಹೇಳಿ ಅಭಿನಂದಿಸಿದನು. ಆ ರಾಯನು ತನಗೆ ನಮಸ್ಕಾರವನ್ನು ಮಾಡಿ ಕೈ ಮುಗಿದುಕೊಂಡು ಸಮೀಪದಲ್ಲಿ ನಿಂತಿದ್ದ ಮಗನನ್ನು ಕೈ ಹಿಡಿದೆತ್ತಿ ಬಿಗಿದಪ್ಪಿ ರತ್ನಖಚಿತವಾದ ಗದ್ದುಗೆಯನ್ನು ಹಾಕಿಸಿ ಕುಳಿತುಕೊಳ್ಳೆಂದು ಹೇಳಿದನು. ಆಗ ತಂದೆಯ ಆಜ್ಞೆಯಿಂದ ಆ ಗದ್ದುಗೆಯಲ್ಲಿ ಕುಳಿತಿದ್ದ ಶ್ರೀರಾಮನು ಉದಯಪರ್ವತವನ್ನೇರಿದ ಸೂರನು ತನ್ನ ಕಾಂತಿಗಳಿಂದ ಲೋಕಗಳನ್ನು ಬೆಳಗಿಸುವ ರೀತಿಯಲ್ಲಿ ದಶರಥರಾಯನ ಸಭೆಯನ್ನು ಪ್ರಕಾಶಗೊಳಸುತ್ತಿದ್ದನು. ಆ ಸಭೆಯು ಪೂರ್ಣಿಮಾಚಂದ್ರನಿಂದೊಪ್ಪುವ ನಿರ್ಮಲವಾದ ಆಕಾಶದಂತೆ ಪ್ರಕಾಶಿಸುತ್ತಿತ್ತು. ಆಗ ದಶರಥರಾಯನು ಸಮಸ್ತಾಲಂಕಾರಗಳಿಂದ ಕೂಡಿದ ತನ್ನ ಶರೀರವೇ ಕನ್ನಡಿಯಲ್ಲಿ ಪ್ರತಿಬಿಂಬಿಸಿತೋ ಎಂಬ ಹಾಗಿದ್ದ ಶ್ರೀರಾಮನನ್ನು ಕಂಡು ಅತ್ಯಂತ ಸಂತೋಷದಿಂದ ಕಶ್ಯಪಬ್ರಹ್ಮನು ದೇವೇಂದ್ರನ ಸಂಗಡ ಮಾತನಾಡುವ ಹಾಗೆ ಆತನನ್ನು ಕುರಿತು ಶ್ರೀರಾಮ, ನೀನು ನನ್ನ ವ್ಯಪತ್ನಿಯಾದ ಕೌಸಲಾದೇವಿಯಲ್ಲಿ ನನ್ನ ಗುಣರೂಪಾದಿಗಳಿಗೆ ಸಮಾನನಾಗಿ ಅತ್ಯಂತ ಪ್ರಿಯಕುಮಾರನಾಗಿ ಜನಿಸಿದೆ. ನಿನ್ನಿಂದ ಸಮಸ್ತ ಪ್ರಜೆಗಳೂ ಸಂತುಷ್ಟರಾದರು. ಆದಕಾರಣ ನಾನು ನಾಳೆ ಪುಷ್ಯನಕ್ಷತ್ರದಲ್ಲಿ ನಿನಗೆ ಪಟ್ಟಾಭಿಷೇಕವನ್ನು ಮಾಡುವೆನು. ಸಮಸ್ತ ಪ್ರಜೆಗಳೂ ನಿನ್ನ ವಿನಯಾದಿಗುಣಗಳಿಂದ ನಿನಗೆ ಅನುಕೂಲರಾಗಿರುವರು. ಎಲೈ ಮಗನೆ, ನೀನು ಗುಣವಂತನಾದ ಕಾರಣ ಪಿತೃಸ್ನೇಹದಿಂದ ನಿನಗೆ ಹಿತವನ್ನು ಹೇಳುತ್ತೇನೆ ಕೇಳು. ವಿನಯಗುಣ ಸಂಪನ್ನನಾಗಿ ಜಿತೇಂದ್ರಿಯನಾಗಿರು, ಕಾಮಕ್ರೋಧಾಸೂಯೆಗಳು ಪರಸ್ತ್ರೀ ಜೂಜು ದೇಚೆ ಮದ್ಯಪಾನ ವಾಕ್ಪಾರುಷ್ಯ ದೂಷಣೆ ಮೊದಲಾದ ವ್ಯಸನಗಳನ್ನು ದೂರವಿಡು. ಪ್ರತ್ಯಕ್ಷದಲ್ಲಿ ಕಂಡದ್ದನ್ನಾದರೂ ವಿಚಾರಿಸಿ ನೋಡು. ಪ್ರಧಾನಿಗಳನ್ನು ಸಂತೋಷಪಡಿಸು. ಗೋಶಾಲೆಗಳನ್ನೂ ಆಯುಧಶಾಲೆಗಳನ್ನೂ ಬಹಳವಾಗಿ ಸಂಗ್ರಹಿಸು. ಪ್ರಜೆಗಳನ್ನು ಸಂತೋಷಪಡಿಸಿ ಭೂಮಿಯನ್ನು ಆಳುವರ್ವಗೆ ಸಮಸ್ತ ಪ್ರಜೆಗಳೂ ಅಮೃತವನ್ನು ಪಡೆದ ದೇವತೆಗಳಂತೆ ಸಂತೋಷಪಟ್ಟು ಮಿತ್ರರಾಗುವರು. ಆದಕಾರಣ, ಶ್ರೀರಾಮ ನೀನು ಈ ರೀತಿಯಾಗಿ ಮನೋನಿಗ್ರಹದಿಂದ ನಡೆ ಎಂದು ಹೇಳಿದನು. ಆ ಸಮಯದಲ್ಲಿ ಶ್ರೀರಾಮನಿಗೆ ಪಟ್ಟಾಭಿಷೇಕವಾಗುವ ವೃತ್ತಾಂತವನ್ನು ಆತನ ಸೇವಕರು ಕೇಳಿ ಶೀಘ್ರದಲ್ಲಿ ಕೌಸಲ್ಯಾದೇವಿಯ ಸಮೀಪಕ್ಕೆ ಬಂದು ಆ ಸುದ್ದಿಯನ್ನು ಹೇಳಿದರು. ಆ ದೇವಿಯು ತನ್ನ ಮಗನ ಪಟ್ಟಾಭಿಷೇಕವಾರ್ತೆಯನ್ನು ಕೇಳಿ ಆ ಶುಭವಾರ್ತೆಯನ್ನು ಹೇಳಿದವರಿಗೆ ಅನೇಕ ರತ್ನಾಭರಣಗಳನ್ನು ಉಡುಗೊರೆಯಾಗಿ ಕೊಟ್ಟಳು. ಶ್ರೀರಾಮನು ದಶರಥರಾಯನಿಗೆ ಕೈ ಮುಗಿದು ರಥಾರೂಢನಾಗಿ ಸಮಸ್ತ ಪರಿಜನ ಪುರಜನರಿಂದ ಸತ್ಕರಿಸಲ್ಪಟ್ಟು ತನ್ನ ಅರಮನೆಗೆ ಹೋದನು. ಸಮಸ್ತ ಪ್ರಜೆಗಳೂ ದಶರಥರಾಯನಿಂದ ಬೀಳ್ಕೊಂಡು ತಮ್ಮ ತಮ್ಮ ಮನೆಗಳಿಗೆ ಹೋಗಿ ಶ್ರೀರಾಮನಿಗೆ ಪಟ್ಟಾಭಿಷೇಕವಾಗಬೇಕೆಂದು ತಮ್ಮ ಇಷ್ಟದೇವತಾಪ್ರಾರ್ಥನೆಗಳನ್ನು ಮಾಡುತ್ತಿದ್ದರು.

ಮುಂದುವರಿಯುವುದು...



ಕಲಾ ಸಾಹಿತ್ಯ

**ಕೃಷ್ಣಪ್ಪ**
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

# ಮಹಾತ್ಮ ಗಾಂಧೀಜಿರವರ 77ನೇ ಪುಣ್ಯಸ್ಮರಣೆ

• ಉದಯವಾಹಿನಿ ವಿಶೇಷ

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು 1869 ಅಕ್ಟೋಬರ್ 02ರಂದು ಗುಜರಾತ್‌ನ ಪೋರ್ ಬಂದರ್‌ನಲ್ಲಿ ಜನಿಸಿದರು. ತಂದೆ ಕರಮಚಂದ, ತಾಯಿ ಪುತಲೀಬಾಯಿ. ತಂದೆ ಗುಜರಾತಿನ ಅನೇಕ ಸಂಸ್ಥಾನಗಳಲ್ಲಿ ದಿವಾನರಾಗಿದ್ದರು. ಅವರು ನಿಷ್ಪಕ್ಷಪಾತ ನ್ಯಾಯವಾದಿಗಳೆಂದು ಪ್ರಸಿದ್ಧಿಪಡೆದಿದ್ದರು. ಗಾಂಧೀಜಿರವರ ಪ್ರಾಥಮಿಕ ವಿದ್ಯಾಭ್ಯಾಸ ಪೋರಬಂದರ್‌ನಲ್ಲಿ ನಡೆಯಿತು.

ಶಾಲಾ ವಿದ್ಯಾರ್ಥಿಯಾಗಿದ್ದಾಗಲೇ (ಅಂದರೆ 13 ವರ್ಷ ವಯಸ್ಸಾಗಿದ್ದಾಗ) 1882ರಲ್ಲಿ ಅವರಿಗಿಂತ ಆರು ತಿಂಗಳು ದೊಡ್ಡವರಾದ ಕಸ್ತೂರಬಾರವರೊಂದಿಗೆ ವಿವಾಹವಾಯಿತು. ಪತಿಯ ಎಲ್ಲಾ ಮಹತ್ಕಾರ್ಯಗಳಲ್ಲಿ ಆಸರೆಯಾಗಿ ನಿಂತು ತಮ್ಮ ವೈವಾಹಿಕ ಬದುಕನ್ನು ಸಾರ್ಥಕಗೊಳಿಸಿದರು. ಗಾಂಧೀಜಿಗೆ ಹರಿಲಾಲ್, ಮಣಿಲಾಲ್, ರಾಮದಾಸ್, ದೇವದಾಸ್ ಎಂಬ ನಾಲ್ಕು ಜನ ಗಂಡು ಮಕ್ಕಳು. ಗಾಂಧೀಜಿ 1887 ರಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಭಾವ ನಗರದಲ್ಲಿ ಕಾಲೇಜಿಗೆ ಪ್ರವೇಶ ಪಡೆದರು.

ಆ ಬಳಿಕ ಇಂಗ್ಲೆಂಡಿಗೆ ತೆರಳಿ ಅಲ್ಲಿ ಮೂರು ವರ್ಷಗಳ ಕಾಲ ವ್ಯಾಸಂಗ ನಡೆಸಿ ಬ್ಯಾರಿಸ್ಟರ್‌ಲಾ ಪದವೀಧರರಾದರು. 1897 ರಲ್ಲಿ ಗಾಂಧೀಜಿ ಇಂಗ್ಲೆಂಡಿನಿಂದ ಭಾರತಕ್ಕೆ ಹಿಂದಿರುಗಿದರು. ಮುಂಬೈನ ರಾಜ್ಕೋಟ್‌ನಲ್ಲಿ ಕೆಲಕಾಲ ವಕೀಲಿ ವೃತ್ತಿ ನಡೆಸಿದರು. ಕೆಲದಿನಗಳ ಬಳಿಕ ದಾದ ಅಬ್ದುಲ್ಲ ಮತ್ತು ಕಂಪನಿ ಎಂಬ ಶ್ರೀಮಂತ ವ್ಯಾಪಾರಿ ಸಂಸ್ಥೆಯ ಪರವಾಗಿ ದಕ್ಷಿಣ ಆಫ್ರಿಕೆಯಲ್ಲಿ ವಕೀಲಿ ನಡೆಸುವ ಅವಕಾಶ ಅವರಿಗೆ ದೊರೆಯಿತು. ಅವಕಾಶ ಅವರ ಬದುಕನ್ನೇ ಪರಿವರ್ತಿಸುವ ಸಂದರ್ಭವಾಯಿತು. ತಮ್ಮ ಉದ್ದೇಶ ಸಾಧನೆಗಾಗಿ ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿ 21 ವರ್ಷಗಳ ಕಾಲ ಉಳಿಯುವಂತಾಗಿ ಗಾಂಧೀಜಿ ಒಂದು ನೈತಿಕ, ದೈತ್ಯ ಶಕ್ತಿಯಾಗಿ ಬೆಳೆದರು. ಅಂದಿನ ದಿನಗಳಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರ ವರ್ಣಭೇದನೀತಿ ಅತ್ಯಂತ ಕ್ರೂರವೂ, ಅಮಾನವೀಯವಾಗಿ ಇದ್ದು ಅಲ್ಲಿ ಭಾರತೀಯರು ಅತ್ಯಂತ ಹೀನಾಯ ಸ್ಥಿತಿಯಲ್ಲಿದ್ದರು. ಆಗ ಮನಗಂಡು ಸಂಘಟನೆಯೊಂದಿಗೆ ಪರಿಹಾರವನ್ನು ಕಂಡು ಹಿಡಿದು ಕೊಟ್ಟರು. ಗಾಂಧೀಜಿ ಭಾರತಕ್ಕೆ ಬಂದು ದಕ್ಷಿಣ ಆಫ್ರಿಕಾ ಪರಿಸ್ಥಿತಿಯನ್ನು ಕುರಿತು ಒಂದು ಪುಸ್ತಕ ಬರೆದರು. ಅದಕ್ಕೆ ಹಸಿರು ಕರ ಪತ್ರ ಎಂಬ ಹೆಸರು ಬಂದಿತು. ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿದ್ದಾಗ ಪ್ರಥಮವಾಗಿ ಸತ್ಯಾಗ್ರಹ ಎಂಬ ಪರಿಕಲ್ಪನೆಗೆ ಸಾಕಾರ ನೀಡಿದರು. ಸತ್ಯಾಗ್ರಹಿಗಳಿಗೆ ಸತ್ಯ ಮತ್ತು ಅಹಿಂಸೆಯ ಪಾಠವನ್ನು ಕಲಿಸಿದರು. ಟ್ರಾನ್ಸ್ ವಾಲ್ ಸರ್ಕಾರ ಭಾರತೀಯರಿಗೆ ಸಂಬಂಧಿಸಿದ ವಿಶೇಷ ಶಾಸನವೊಂದನ್ನು ಜಾರಿಗೆ ತಂದಾಗ ಅದರ ವಿರುದ್ಧ ಗಾಂಧೀಜಿಯವರ ನಾಯಕತ್ವದಲ್ಲಿ ಭಾರತೀಯರು ಅಸಹಕಾರ ಚಳುವಳಿ ನಡೆಸಿದರು.



> **ಜಗತ್ತಿಗೆ ವಿಸ್ಮಯ ಹುಟ್ಟಿಸಿದರು**

ಗಾಂಧೀಜಿ ಸೆರೆಮನೆವಾಸ ಅನುಭವಿಸಬೇಕಾಯಿತು. ಗಾಂಧೀಜಿಯವರ ಆಧ್ಯಾತ್ಮಿಕ ನಂಬಿಕೆಗಳು ಅವರನ್ನು ಮತ್ತಷ್ಟು ಬಲಿಷ್ಠರನ್ನಾಗಿಸಿತು. ಗಾಂಧೀಜಿ ಕ್ರೈಸ್ತ, ಬೌದ್ಧ, ಮುಸಲ್ಮಾನರ ಧಾರ್ಮಿಕ ವಿಚಾರಗಳನ್ನು ತೆರೆದ ಮನಸ್ಸಿನಿಂದ ಸ್ವೀಕರಿಸಿದರು. ಸರ್ವಧರ್ಮ ಸಮಭಾವನೆ ಅವರ ಮನದಲ್ಲಿ ಆಳವಾಗಿ ಬೇರೂರಿತು. ಸತ್ಯ ಆರಾಧಕರಾಗಿ, ಸತ್ಯಾನ್ವೇಷಕರಾಗಿ ಯಾವುದೇ ಮೋಸ, ವಂಚನೆ ತಮ್ಮ ಬಳಿ ಸುಳಿಯಲು ಅವಕಾಶ ನೀಡಲಿಲ್ಲ. ಸತ್ಯ, ಅಹಿಂಸೆ ಇವುಗಳ ಮೂಲಕವಾಗಿಯೇ ಬ್ರಿಟೀಷ್ ಸಾಮ್ರಾಜ್ಯದ ವಿರುದ್ಧ ಹೋರಾಟಕ್ಕೆ ಅವರು ಸಿದ್ಧರಾದರು. 1915 ರ ಜನವರಿಯಲ್ಲಿ ಗಾಂಧೀಜಿ ತಮ್ಮ ಪತ್ನಿ ಹಾಗೂ ನಾಲ್ಕು ಮಕ್ಕಳೊಂದಿಗೆ ಭಾರತಕ್ಕೆ ಬಂದರು. ತಮ್ಮ ರಾಜಕೀಯ ಗುರುಗಳಾಗಿದ್ದ ಗೋಪಾಲಕೃಷ್ಣ ಗೋಖಲೆ ಅವರ ಸಲಹೆಯಂತೆ ಭಾರತದ ಪರಿಸ್ಥಿತಿಯನ್ನು ತಿಳಿಯಲು ಇಡೀ ದೇಶಾದ್ಯಂತ ಪ್ರವಾಸ ಕೈಗೊಂಡರು. ಗಾಂಧೀಜಿ ಶಾಂತಿನಿಕೇತನಕ್ಕೆ ಹೋಗಿ ರವೀಂದ್ರನಾಥ್ ಠಾಕೂರ್ ಅವರನ್ನು ಭೇಟಿ ಮಾಡಿದರು. ಗಾಂಧೀಜಿ ಅಹಮದಾಬಾದ್ ಸಬರಮತಿ ನದಿ ದಂಡೆ ಮೇಲೆ ಆಶ್ರಮ ಸ್ಥಾಪಿಸಿದರು.

ನಿಸ್ವಾರ್ಥ ಸೇವಾ ಮನೋಭಾವ, ಪರಸ್ಪರ ಸಹೋದರತ್ವ, ಬ್ರಹ್ಮಚರ್ಯ ಪಾಲನೆ, ಪ್ರಾರ್ಥನೆ ಇವು ಆಶ್ರಮದ ನಿಯಮಗಳು ಆಗಿದ್ದು. ಆಶ್ರಮವಾಸಿಗಳು ಇವುಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. 1919 ಏಪ್ರಿಲ್ 13 ರಂದು ಜಲಿಯನ್ ವಾಲ್ ಬಾಗ್ ನಲ್ಲಿ ನಡೆದ ಭಾರತೀಯರ ಕಗ್ಗೊಲೆ ಬ್ರಿಟೀಷರ ಪೈಶಾಚಿಕ ಕೃತ್ಯದಿಂದ ಗಾಂಧೀಜಿ ಅತಿಯಾಗಿ ನೊಂದು ಬ್ರಿಟೀಷರನ್ನು ಭಾರತ ದಿಂದ ಹೊರ ದೂಡಲೇಬೇಕೆಂಬ ಸಂಕಲ್ಪ ಮಾಡಿದರು. ಗಾಂಧೀಜಿ ತಮಗೆ ದೊರಕಿದ್ದ ಕೈಸರ್-ಇ-ಹಿಂದ್ ಪದಕವನ್ನು ಬ್ರಿಟಿಷ್ ಸರ್ಕಾರಕ್ಕೆ ಹಿಂದಿರುಗಿಸಿದರು. ಗಾಂಧೀಜಿ ಯಂಗ್ ಇಂಡಿಯಾ ಮತ್ತು ನವಜೀವನ ಎಂಬ ಇಂಗ್ಲಿಷ್ ವಾರಪತ್ರಿಕೆಯನ್ನು ಗುಜರಾತ್ ಪತ್ರಿಕೆಯಲ್ಲಿ ಪ್ರಕಟಿಸಿದರು. ಈ ಎರಡು ಪತ್ರಿಕೆಗಳಲ್ಲಿ ಗಾಂಧೀಜಿ ಬ್ರಿಟಿಷರ ಆಡಳಿತದ ಅನ್ಯಾಯಗಳನ್ನು ವಿವರಿಸಿ ಅವುಗಳನ್ನು ವಿರೋಧಿಸುವುದರ ಬಗ್ಗೆ ಜನತೆಗೆ ತಿಳುವಳಿಕೆ ನೀಡುತ್ತಿದ್ದರು. ಅಹಿಂಸಾತ್ಮಕ ಹೋರಾಟದ ಸ್ವರೂಪಗಳನ್ನು ತಿಳಿಸುತ್ತಿದ್ದರು. ಗಾಂಧೀಜಿಯವರ ವಿಚಾರ ಪೂರ್ಣ ಬರಹಗಳು ಲಕ್ಷಾಂತರ ಯುವ ಹೃದಯಗಳನ್ನು ಮುಟ್ಟಿ ಅವರಲ್ಲಿ ಸ್ವಾತಂತ್ರ್ಯ ಪ್ರೇಮ, ದೇಶಾಭಿಮಾನಗಳು ಉದಿಸಿ ರಾಷ್ಟ್ರಕ್ಕಾಗಿ ಆತ್ಮಾರ್ಪಣೆ ಮಾಡಲು ಸಿದ್ಧರಾದರು.

ಭಾರತ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಉಪ್ಪಿನ ಸತ್ಯಾಗ್ರಹ ಪ್ರಸಿದ್ಧವಾದದ್ದು. ಈ ಸತ್ಯಾಗ್ರಹದ ಮೂಲಕವಾಗಿ ರಾಷ್ಟ್ರವೇ ಕ್ರಿಯಾಶೀಲವಾಯಿತು. 1942 ಆಗಸ್ಟ್ 08 ರಂದು ಮುಂಬೈನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧೀಜಿ ಬ್ರಿಟಿಷರಿಗೆ ಭಾರತ ಬಿಟ್ಟು ತೊಲಗಿರಿ ಎಂಬ ಆದೇಶ ನೀಡಿದರು. ಈ ಚಳುವಳಿ ತೀವ್ರ ಸ್ವರೂಪ ತಾಳಿ ಇಡೀ ದೇಶದಲ್ಲಿ ಹಬ್ಬಿತು. 1947 ಆಗಸ್ಟ್ 15ರಂದು ಭಾರತ ಸ್ವಾತಂತ್ರ್ಯ ಗಳಿಸಿತು. ಆದರೆ ಭಾರತದ ವಿಭಜನೆ ಗಾಂಧೀಜಿಯವರ ಮನಸ್ಸಿಗೆ ಅಪಾರವಾದ ನೋವುಂಟು ಮಾಡಿತ್ತು. 1948 ಜನವರಿ 30 ರಂದು ಸಂಜೆ ಗಾಂಧೀಜಿ ಎಂದಿನಂತೆ ದೆಹಲಿಯಲ್ಲಿರುವ ಪ್ರಾರ್ಥನಾ ಸಭೆಗೆ ಹೊರಟಿದ್ದಾಗ ನಾಥೂರಾಮ್ ಗೂಡ್ಸೆ ಈ ಹಂತಕನೊಬ್ಬನ ಗುಂಡೇಟಿಗೆ ಬಲಿಯಾಗಿ ಹುತಾತ್ಮರಾದರು. ಆಗ ಅವರಿಗೆ 79 ವರ್ಷ ವಯಸ್ಸಾಗಿತ್ತು. ಮಹಾತ್ಮರ ಸಾವಿನ ವಾರ್ತೆಯನ್ನು ಕೇಳಿದ ಭಾರತೀಯರ ಹೃದಯ ತತ್ತರಿಸಿ ಶೋಕ ಮಡುಗಟ್ಟಿತ್ತು. ಗಾಂಧೀಜಿಯವರ ಮರಣ ವಾರ್ತೆಯನ್ನು ತಿಳಿದ ವಿಶ್ವಸಂಸ್ಥೆ ಕೂಡಲೇ ಆ ಸಮಯದಲ್ಲಿ ನಡೆಯುತ್ತಿದ್ದ ಸಭೆಯನ್ನು ಸ್ಥಗಿತಗೊಳಿಸಿ ಮನುಕುಲದ ಉದ್ಧಾರಕನಿಗೆ ಶ್ರದ್ಧಾಂಜಲಿ ಅರ್ಪಿಸಿತು. ವಿಶ್ವಸಂಸ್ಥೆ ಧ್ವಜವನ್ನು ಅರ್ಧ ಮಟ್ಟಕ್ಕೆ ಇಳಿಸಿ ಮಹಾನ್ ರಾಷ್ಟ್ರದ ಮಹಾನ್ ನಾಯಕನಿಗೆ ತನ್ನ ಗೌರವ ಸೂಚಿಸಿತು. ಆ ದಿನವನ್ನು ನಾವು ಪ್ರತಿವರ್ಷ ಸರ್ವೋದಯ ದಿನವನ್ನಾಗಿ ಆಚರಿಸುತ್ತಿದ್ದೇವೆ.

ಮಹಾನ್ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ಅವರು ಗಾಂಧೀಜಿಯವರನ್ನು ಕುರಿತು, ರಕ್ತ ಮಾಂಸಗಳಿಂದ ಕೂಡಿದ ಇಂತಹ ಮಹಾತ್ಮನೊಬ್ಬನು ಮನುಷ್ಯ ರೂಪದಲ್ಲಿ ಇದೇ ಭೂಮಿಯ ಮೇಲೆ ನಡೆದಾಡುತ್ತಿದ್ದನೆಂದರೆ ಮುಂದಿನ ಪೀಳಿಗೆಯು ನಂಬುವುದು ಕಷ್ಟ ಎಂದು ಉದ್ಗರಿಸಿದ್ದಾರೆ. ಸಂಘಟನೆಯ ಮೂಲಕ ಅನೇಕ ಸ್ವಾತಂತ್ರ್ಯ ಹೋರಾಟಗಾರರ ಜೊತೆಯಲ್ಲಿ ಗಾಂಧೀಜಿಯವರು ಮುಖಂಡತ್ವ ವಹಿಸಿಕೊಂಡು ಭಾರತ ಸ್ವಾತಂತ್ರ್ಯಗಳಿಸಲೇಬೇಕೆಂಬ ಮಹದಾಕಾಂಕ್ಷೆಯಿಂದ ಹೋರಾಡಿದರು.

ಬ್ರಿಟಿಷರಿಂದ ಗಾಂಧೀಜಿಯವರು ಅನೇಕ ಸಲ ಸೆರೆಮನೆವಾಸ ಅನುಭವಿಸಿದರು. ಕುಟುಂಬ, ಅಧಿಕಾರ, ಪದವಿ, ಅಂತಸ್ತಿನ ಮೇಲೆ ಯಾವುದೇ ಆಸೆಪಡದೇ ಸ್ವಾರ್ಥ ಮರೆತು ನಿಸ್ವಾರ್ಥ ಸೇವೆ ಮಾಡಿದ ಒಬ್ಬ ಮಹಾನ್ ವಿಶ್ವಶ್ರೇಷ್ಠ ನಾಯಕ. ಹೋರಾಟ, ಚಳುವಳಿ, ಪ್ರತಿಭಟನೆ, ಧರಣಿ, ಸತ್ಯಾಗ್ರಹ, ಉಪವಾಸದಿಂದ ಸತ್ಯ, ಧರ್ಮ ಮತ್ತು ಅಹಿಂಸೆಯಿಂದ ರಾಷ್ಟ್ರಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ವಿಭೂತಿಪುರುಷ, ನಿಷ್ಕಳಂಕ, ನಿರ್ಭಿತ, ನಿಷ್ಠಾವಂತ, ಧೀರೋಧಾತ್ತ, ದೇಶಭಕ್ತ, ಮಾನವೀಯತೆಯ ಸಾಕಾರ ರೂಪ ಇಂಥ ಅನನ್ಯ ಚೇತನ ನೆಲದ ಮೇಲೆ ಮಾನವ ದೇಹ ಧಾರಿಯಾಗಿ ಜನಿಸಿ ಜಗತ್ತಿಗೆ ವಿಸ್ಮಯ ಹುಟ್ಟಿಸಿದರು.

ಇಂತಹ ಅನನ್ಯ ಚೇತನ, ಶಾಂತಿಧೂತ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಹುತಾತ್ಮರಾಗಿ ಇಲ್ಲಿಗೆ 77 ವರ್ಷ ತುಂಬಿತು. ಅವರನ್ನು ಸ್ಮರಿಸಿ, ನೆನೆಯುತ್ತಾ ಜೀವಂತವಾಗಿರುವ ಅವರ ಆತ್ಮಕ್ಕೆ ಜೀವಂತವಾಗಿರುವ ಭಾರತೀಯರಾದ ನಾವುಗಳೆಲ್ಲರೂ ಶಾಂತಿ ಮತ್ತು ಸದ್ಗತಿ ದೊರಕಲಿ ಎಂದು ಪ್ರಾರ್ಥಿಸೋಣ., ಅವರ ಆದರ್ಶಗಳು, ಮಾರ್ಗದರ್ಶನಗಳು, ದಾರಿದೀಪಗಳು, ತತ್ವಸಿದ್ಧಾಂತಗಳು, ಮಾನವೀಯತೆಗಳು ಜೀವಂತವಾಗಿವೆ ಎಂದು ತಿಳಿದು ಅವುಗಳನ್ನು ಪಾಲಿಸುವ ಸಂಕಲ್ಪ ಮಾಡೋಣ.

**ಸತ್ಯಂ ಶಿವಂ ಸುಂದರಂ**

# ತೀವ್ರ ಮಾನಸಿಕ ಆರೋಗ್ಯ ಸಮಸ್ಯೆಗೆ ಒಳಗಾದವರು ಸ್ವಾವಲಂಬನೆ ಜೀವನ ನಡೆಸಲು ಸಶಕ್ತ: ಅಧ್ಯಯನ

• ಉದಯವಾಹಿನಿ, ಬೆಂಗಳೂರು

ತೀವ್ರ ಮಾನಸಿಕ ಆರೋಗ್ಯ ಸಮಸ್ಯೆ ಹೊಂದಿರುವವರಿಗೆ ಚಿಕಿತ್ಸೆ ನೀಡಿದರೆ ಅವರು ಸ್ವಾವಲಂಬಿಯಾಗಿ ಆರ್ಥಿಕವಾಗಿ ಸದೃಢವಾಗುವ ಸಾಮರ್ಥ್ಯ ಹೊಂದಲು ಶಕ್ತರಾಗಿರುತ್ತಾರೆ ಎಂದು ನಿಮ್ಹಾನ್ಸ್ ಹಾಗೂ ಲಿವ್ ಲವ್ ಲಾಫ್ ಫೌಂಡೇಷನ್ ನಡೆಸಿದ ಸಂಶೋಧನೆಯಲ್ಲಿ ತಿಳಿಸಿದೆ. 10 ತಿಂಗಳುಗಳ ಕಾಲ ಗ್ರಾಮೀಣ ಭಾಗದಲ್ಲಿ ತೀವ್ರ ಮಾನಸಿಕ ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದ ವ್ಯಕ್ತಿಗಳನ್ನು ಸಮೀಕ್ಷೆಗೆ ಒಳಪಡಿಸಲಾಯಿತು. ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಸೋಷಿಯಲ್ ಸೈಕಿಯಾಟ್ರಿ ಜರ್ನಲ್‌ನಲ್ಲಿ ಪ್ರಕಟವಾದ ಸಂಶೋಧನೆ ಅಧ್ಯಯನವು ಮಾನಸಿಕವಾಗಿ ಕುಗ್ಗಿದವರನ್ನು ಪುನಶ್ಚೇತನಗೊಳಿಸಿದರೆ ಅವರು ಸಹ ಎಲ್ಲರಂತೆಯೇ ಜೀವನ ನಡೆಸಲು ಸಶಸಕ್ತರು ಎಂಬುದು ಇದು ದೃಢಪಡಿಸಿದೆ.

ಅಧ್ಯಯನಕ್ಕೆ ಒಳಪಡಿಸಿದ ವ್ಯಕ್ತಿಗಳು ಹಾಗೂ ಕುಟುಂಬಗಳನ್ನು ಸಮುದಾಯ ಆಧರಿತ ಪುನಃಶ್ಚೇತನ (ಸಿಬಿಆರ್) ಕಾರ್ಯಕ್ರಮದ ಫಲಿತಾಂಶವನ್ನು ಸಂಶೋಧನೆಯು ಕೇಂದ್ರೀಕರಿಸಿತ್ತು. ಲೈವ್‌ಲವ್‌ಲಾಫ್ ಅಡಿಯಲ್ಲಿ ಒಂದು ಬಾರಿಯ ಅನುದಾನದ ಮೂಲಕ ಸ್ವಯಂ ಉದ್ಯೋಗಿ ಅವಕಾಶಗಳನ್ನು ಒದಗಿಸಲಾಗಿತ್ತು. ಇದಕ್ಕೆ ಹಣವನ್ನು ಕುಟುಂಬದ ನೇತೃತ್ವದ ಸಂಘಟನೆಯಿಂದ ಹೊಂದಿಸಲಾಗಿತ್ತು. ಈ ಯೋಜನೆಯಲ್ಲಿ ಭಾಗಿಯಾದವರು ಸ್ಥಳೀಯವಾಗಿ ಸೂಕ್ತವಾದ ಜೀವನಾವಶ್ಯಕತೆ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಕುರಿ ಕಾಯುವುದು ಮತ್ತು ಟೇಲರಿಂಗ್ ಮಾಡುವುದು ಇತ್ಯಾದಿಯಲ್ಲಿ ಅವರು ತೊಡಗಿಸಿಕೊಂಡಿದ್ದರು. ಡ್ಯೂಕ್ ಯುನಿವರ್ಸಿಟಿಯ ಸೈಕಿಯಾಟ್ರಿ ಮತ್ತು ಮೆಡಿಸಿನ್‌ನ ಪ್ರೊಫೆಸರ್ ಹಾಗೂ ದಿ ಲಿವ್ ಲವ್ ಲಾಫ್ ಫೌಂಡೇಶನ್‌ನ ಟ್ರಸ್ಟೀ ಆಗಿರುವ ಡಾ. ಮುರಳಿ ದೊರೈಸ್ವಾಮಿ, ಎಂಬಿಬಿಎಸ್, ಎಫ್‌ಆರ್‌ಸಿಪಿ ಅವರು ಹೇಳುವಂತೆ ''ತೀವ್ರ ಮಾನಸಿಕ ಅನಾರೋಗ್ಯವನ್ನು ಹೊಂದಿರುವವರ ವಿಶಿಷ್ಟ ಸವಾಲುಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಹಣಕಾಸಿನ ಮತ್ತು ಮಾನಸಿಕ ಆರೋಗ್ಯದ ನೆರವನ್ನು ಬಳಸಿಕೊಂಡು ನಡೆಸಿದ ಪ್ರಯೋಗಗಳಲ್ಲಿ ಇದು ಮಹತ್ವದ್ದಾಗಿದ್ದು, ಸಮಗ್ರ ಬೆಂಬಲ ವ್ಯವಸ್ಥೆಯ ಅನುಕೂಲವನ್ನು ಒತ್ತಿ ಹೇಳುವ ವಿಶಿಷ್ಟ ಅಧ್ಯಯನ ಇದಾಗಿದೆ. ಇದು ಬಡತನ, ನಿರುದ್ಯೋಗ ಮತ್ತು ಮಾನಸಿಕ ಅನಾರೋಗ್ಯದ ಮಧ್ಯೆ ಇರುವ ಬಹು ಆಯಾಮದ ಸಮಸ್ಯೆಯನ್ನು ಇದು ನಿವಾರಿಸುತ್ತದೆ. ಕುಟುಂಬ ಆಧರಿತ ಸಂಘಟನೆಯಿಂದ ಹಣವನ್ನು ಒದಗಿಸುವಿಕೆಯು ಸಾಮಾಜಿಕ ಸೇರ್ಪಡೆ ಮತ್ತು ಆರ್ಥಿಕ ಸಬಲೀಕರಣಕ್ಕೆ ಪ್ರಮುಖ ಪರಿಕರವಾಗಿದ್ದು, ಸಮಾಜಕ್ಕೆ ಅರ್ಥವತ್ತಾಗಿ ಕೊಡುಗೆ ನೀಡುವುದಕ್ಕೆ ಮಾನಸಿಕ ಅನಾರೋಗ್ಯ ಹೊಂದಿರುವವರಿಗೆ ಅನುಕೂಲ ಮಾಡಿಕೊಡುತ್ತದೆ ಎಂದರು.




ಉದಯವಾಹಿನಿ ಚಿತ್ರ

> **ತೀವ್ರ ಮಾನಸಿಕ ಅನಾರೋಗ್ಯವನ್ನು ಹೊಂದಿರುವವರು ಸ್ವಯಂ ಉದ್ಯೋಗವನ್ನು ನಡೆಸಬಹುದು ಎಂಬುದನ್ನು ಸಾಬೀತುಪಡಿಸುವ ಮೂಲಕ ನಾವು ಕೇವಲ ಇದರ ಕುರಿತ ಮಿಥ್ಯವನ್ನು ನಿವಾರಣೆ ಮಾಡುತ್ತಿಲ್ಲ. ಬದಲಿಗೆ, ಸುಸ್ಥಿರ ಮತ್ತು ಸಮಗ್ರ ಮಾನಸಿಕ ಆರೋಗ್ಯ ನೆರವಿಗೆ ಅಡಿಪಾಯವನ್ನೂ ಹಾಕುತ್ತಿದ್ದೇವೆ**
> -ಡಾ. ಶ್ಯಾಮ ಭಟ್ಟ, ದಿ ಲಿವ್ ಲವ್ ಲಾಫ್ ಫೌಂಡೇಶನ್‌ನ ಮುಖ್ಯಸ್ಥರು, ಅಧ್ಯಯನದ ಸಹ ಲೇಖಕ

# ದಿನಾ ಯೋಗಾಸನ ಮಾಡಲು ಪ್ರಯತ್ನಿಸಿ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ಫಿಟ್, ಆರೋಗ್ಯವಾಗಿರಲು ನಾವು ವ್ಯಾಯಾಮ, ಯೋಗ ಇನ್ನಿತರ ಅಭ್ಯಾಸಗಳನ್ನು ನಮ್ಮ ದಿನಚರಿಯಲ್ಲಿ ಅಳವಡಿಸಿಕೊಳ್ಳುತ್ತೇವೆ. ಆದರೆ ಚಳಿಗಾಲದಲ್ಲಿ ವರ್ಕೌಟ್ ಅಥವಾ ವ್ಯಾಯಾಮ ಮಾಡಲು ಸ್ವಲ್ಪ ಹಿಂದೆ ಸರಿಯುತ್ತೇವೆ. ಚಳಿಯ ಕಾರಣದಿಂದ ವ್ಯಾಯಾಮ ದಿನಚರಿಯಿಂದ ಜಾರಿಕೊಳ್ಳಲು ಕಾರಣವಾಗುತ್ತದೆ. ಹೀಗಿರವಾಗ ನಿಮ್ಮ ದೇಹಕ್ಕೆ ಚೈತನ್ಯ ನೀಡಲು ಕೇವಲ 10 ನಿಮಿಷಗಳು ಯೋಗಕ್ಕೆ ಮೀಸಲಿಡಿ. ಇದು ದಿನವಿಡೀ ಉತ್ಸಾಹದಿಂದಿರುವಂತೆ ಮಾಡುತ್ತದೆ ಅಲ್ಲದೆ ತೂಕ ಇಳಿಸಲು ಸಹಾಯ ಮಾಡುತ್ತದೆ. ಅತಿಯಾದ ತೂಕವನ್ನು ಇಳಿಸಿಕೊಳ್ಳಲು ವರ್ಕೌಟ್ ಮಾಡುತ್ತಾರೆ. ವ್ಯಾಯಾಮ ದೇಹದ ಎಲ್ಲಾ ಅಂಗಗಳಿಗೂ ಚಟುವಟಿಕೆ ನೀಡುತ್ತದೆ ಮತ್ತು ಉತ್ತಮ ಆರೋಗ್ಯ ಪಡೆಯಲು ಸಹಕಾರಿ. ಚಳಿಗಾಲದಲ್ಲಿ ಹೆಚ್ಚು ಚಳಿ ಇರುವುದರಿಂದ ನಮಗೆ ವರ್ಕೌಟ್ ಮಾಡಲು ಮನಸ್ಸಾಗುವುದಿಲ್ಲ. ಆದರೆ ನೀವು ವ್ಯಾಯಾಮದಿಂದ ಬ್ರೇಕ್ ತೆಗೆದುಕೊಂಡರೆ ನಿಮ್ಮ ದೇಹ ಸ್ಥಿತಿ ಮತ್ತೆ ಮೊದಲಿನಂತಾಗುತ್ತದೆ. ಮತ್ತೆ ನೀವು ತೂಕ ಇಳಿಸಿಕೊಳ್ಳಲು ಹೆಚ್ಚು ಶ್ರಮಪಡಬೇಕಾಗುತ್ತದೆ. ಆದರೆ ನೀವು ಕೇವಲ 10 ನಿಮಿಷ ಯೋಗ ಮಾಡಿದರೆ ಬೊಜ್ಜನ್ನು ಕರಗಿಸಬಹುದು ಅಲ್ಲದೆ ಮಾನಸಿಕ ಆರೋಗ್ಯವನ್ನೂ ಕಾಪಾಡಿಕೊಳ್ಳಬಹುದು. ಯೋಗ ನಿಮ್ಮ ದೈಹಿಕ ಮತ್ತು ಮಾನಸಿಕ ಯೋಗಕ್ಷೇಮದ ಮೇಲೆ ಪರಿಣಾಮ ಬೀರುತ್ತದೆ. ನಿಯಮಿತ ಯೋಗ ನಿಮ್ಮ ಜೀರ್ಣಕ್ರಿಯೆಯನ್ನು ಸುಧಾರಿಸುತ್ತದೆ. ಕ್ಯಾಲೊರಿಗಳನ್ನು ಸುಡುತ್ತದೆ, ತೂಕವನ್ನು ಇಳಿಸಲು ಸಹಕರಿಸುತ್ತದೆ. ತೂಕ ಇಳಿಸಲು ಮತ್ತು ದೇಹವನ್ನು ಶಕ್ತಿಯುತಗೊಳಿಸುವ ಸರಳ 10 ನಿಮಿಷಗಳ ಯೋಗ ದಿನಚರಿಯನ್ನು ಇಲ್ಲಿ ತಿಳಿಯೋಣ.

- **ಅಧೋ ಮುಖಶ್ವಾನಾಸನ - 1 ನಿಮಿಷ**
- **ಸೂರ್ಯ ನಮಸ್ಕಾರ (ಸೂರ್ಯ ನಮಸ್ಕಾರ) - 3 ನಿಮಿಷಗಳು**
- **ವೀರಭದ್ರಾಸನ - 2 ನಿಮಿಷಗಳು**
- **ಸೀಟೆಡ್ ಫಾರ್ವರ್ಡ್ ಬೆಂಡ್ (ಪಶ್ಚಿಮೋತ್ತಾನಾಸನ) - 1 ನಿಮಿಷ**
- **ಶವದ ಭಂಗಿ (ಶವಾಸನ) - 1 ನಿಮಿಷ**

**10 ನಿಮಿಷಗಳ ಚಳಿಗಾಲದ ಯೋಗ ದಿನಚರಿ:** ಈ ಯೋಗ ದಿನಚರಿಯನ್ನು ವಿವಿಧ ಸ್ನಾಯು ಗುಂಪುಗಳನ್ನು ಗುರಿಯಾಗಿಸಿ ರೂಪಿಸಲಾಗಿದೆ. ಜೀರ್ಣಕ್ರಿಯೆಗೆ ಸಹಕಾರಿಯಾಗುವ, ಬೊಜ್ಜನ್ನು ಕರಗಿಸುವ, ದೇಹದ ಫ್ಲೆಕ್ಸಿಬಿಲಿಟಿಯನ್ನು ಹೆಚ್ಚಿಸುವ ಭಂಗಿಗಳನ್ನು ಒಳಗೊಂಡಿದೆ. ಯೋಗಾಭ್ಯಾಸ ಮಾಡಲು ಶಾಂತ, ಬೆಚ್ಚಗಿನ ಸ್ಥಳವನ್ನು ಆಯ್ದುಕೊಳ್ಳಿ, ಯೋಗ ಮಾಡಲು ಅನುಕೂಲವಾಗುವಂತ ಯೋಗ ಚಾಪೆಯನ್ನು ಬಳಸಿ. ನಿಮ್ಮ ಪಾದಗಳನ್ನು ನಿಧಾನವಾಗಿ ಬೇರ್ಪಡಿಸಲು ಬಿಡಿ. ನಿಮ್ಮ ಕಾಲ್ಬೆರಳುಗಳಿಂದ ಪ್ರಾರಂಭಿಸಿ ನಿಮ್ಮ ತಲೆಯವರೆಗೆ ಚಲಿಸುವ ಮೂಲಕ ನಿಮ್ಮ ದೇಹದ ಪ್ರತಿಯೊಂದು ಭಾಗವನ್ನು ವಿಶ್ರಾಂತಿಗೊಳಿಸುವತ್ತ ಗಮನ ಹರಿಸಿ. ಯಾವುದೇ ಉದ್ವೇಗ ಅಥವಾ ಆಲೋಚನೆಗಳನ್ನು ಬಿಟ್ಟುಬಿಡಿ ಮತ್ತು ನಿಮ್ಮ ಉಸಿರಾಟವನ್ನು ಗಮನಿಸಿ. ಈ ಭಂಗಿಯಲ್ಲಿ ಒಂದು ನಿಮಿಷ ಇರಿ, ಶಾಂತತೆಯನ್ನು ಆನಂದಿಸಿ.




**ವಿಶ್ವಾಸ್.ಡಿ.ಗೌಡ**
• ಉದಯವಾಹಿನಿ, ವಿಶೇಷ

# ದೇವರಿಲ್ಲದ ಕಾಲ

ಯುಗ-ಯುಗಗಳು ಕಳೆದು ಭೂಮಿಗೆ ಲಕ್ಷಕೋಟಿ ವರ್ಷಗಳೇ ಆಗಿವೆ. ಭೂಮಿಯ ಸೃಷ್ಟಿಯೇ ವಿಚಿತ್ರ. ಪಂಚಭೂತಗಳಾದ ನೀರು, ಮಣ್ಣು, ಬೆಂಕಿ, ಭೂಮಿ, ಆಕಾಶ ಇವುಗಳಿಗೆ ಅಂತ್ಯವೇ ಇಲ್ಲ. ಎಂದು ಈ ಭೂಮಿ ಕಣ್ಮರೆಯಾಗುತ್ತದೆಯೋ ಅಂದೆ ಈ ಪಂಚಭೂತಗಳು ಕೂಡ ಮರೆಯಾಗುತ್ತವೆ. ಸೃಷ್ಟಿಯ ಬಗ್ಗೆ ಹೇಳುತ್ತಾ ಹೋದಷ್ಟು ನೂರಾರು ಪ್ರಶ್ನೆಗಳು, ಕಾರಣಗಳು ಅನುಮಾನಗಳು ಹುಟ್ಟುತ್ತಾ ಹೋಗುತ್ತವೆ. ಹಾಗೂ ಒಂದು ಸೃಷ್ಟಿಯಿದ್ದಂತೆ ಮತ್ತೊಂದಿಲ್ಲ.

ಮರ-ಗಿಡ, ಪ್ರಾಣಿ-ಪಕ್ಷಿ, ಜಲಚರಗಳು, ಮನುಷ್ಯರು, ಪರ್ವತಗಳು, ಸಾಗರಗಳು, ನದಿಗಳು, ಮರುಭೂಮಿ, ಅರಣ್ಯಗಳು, ಬಗೆ-ಬಗೆಯ ಹೂ, ಹಣ್ಣುಗಳು. ಈ ಎಲ್ಲಾ ಸೃಷ್ಟಿಯ ಹಿಂದೆ ಯಾರೋ ಒಬ್ಬ ಸೃಷ್ಟಿಕರ್ತ ಇದ್ದೇ ಇರುತ್ತಾನೆ. ಅವನನ್ನೇ ದೇವರು ಎನ್ನುತ್ತೇವೆ. ಹಾಗಾಗಿಯೇ ಭಾರತದಲ್ಲಿ ಪುರಾತನ ಕಾಲದಿಂದಲೂ ನಿತ್ಯ ಪೂಜೆಗಳನ್ನು ಮಾಡುತ್ತಾ ಮೂರ್ತಿ ರೂಪದಲ್ಲಿ ಅವನನ್ನೂ ಪೂಜಿಸುತ್ತಾ ದೇಗುಲಗಳನ್ನು ಅನೇಕ ಪ್ರಖ್ಯಾತ ರಾಜ-ಮಹಾರಾಜರು ನಿರ್ಮಿಸಿದ್ದಾರೆ.



ಉದಯವಾಹಿನಿ ಚಿತ್ರ

ಆದರೇ ಆ ದೇವರು ಈ ಕಲಿಗಾಲದಲ್ಲಿ ನಾವು ಎಷ್ಟೇ ಪೂಜೆ, ಹೋಮ, ಹವನಗಳನ್ನು ಮಾಡಿದರೂ ನಮ್ಮ ಬಳಿಗೆ ಬರುವುದಿಲ್ಲ. ಏಕೆಂದರೇ ಈ ಕಲಿಗಾಲ ಪಾಪಿಗಳ ಕಾಲ. ಪಾಪವನ್ನೇ ಮಾಡುವ, ಮಾಡಿಸುವ ಕಾಲ. ಮೊದಲು ದೇವರು, ರಾಕ್ಷಸರು ಮಾತ್ರ ಇದ್ದರೂ. ಒಳ್ಳೆಯ ಗುಣವುಳ್ಳವರನ್ನು ದೇವರು, ಕೆಟ್ಟ ಗುಣವುಳ್ಳ ವರನ್ನು ರಾಕ್ಷಸ ರೆಂದು ಕರೆಯುತಿದ್ದರು. ಆ ರಾಕ್ಷಸರ ಹೆಚ್ಚಿನ ಗುಣ ಮತ್ತು ದೇವರ ಅಲ್ಪಗುಣಗಳು ಸೇರಿ ಮನುಷ್ಯಾರಾಗಿ ಕಲಿಗಾಲದಲ್ಲಿ ಜನಿಸಿದ್ದೇವೆ. ಹೀಗಾಗಿಯೇ ನಮ್ಮ ಮನಸ್ಸು ಚಂಚಲವಾಗಿರುವುದು. ಮತ್ತು ಒಳ್ಳೆ ಕೆಲಸಗಳ ಬಿಟ್ಟು ಕೆಟ್ಟದರತ್ತಲೇ ಬೇಗ ಗಮನಕೊಡು ವುದು. ಇದಕ್ಕೆಲ್ಲಾ ಕಾರಣ ಮನುಷ್ಯರ ಅಹಂಕಾರ, ಮದ, ಮತ್ಸರಗಳು, ಈ ಹಿಂದೆ ದುಷ್ಟರಾಗಿ ಮಾಡಿದ ಪಾಪ ಕರ್ಮಗಳು.

> **ತೋರಿಕೆಗಾಗಿಯೇ ವಿನಃ ಪರಮಾತ್ಮನ ಪ್ರೀತಿಗಾಗಿ ಅಲ್ಲ**

ಹಿಂದಿನ ಜನ್ಮದ ಪಾಪ ಕರ್ಮದ ಫಲಗಳು ಈ ಜನ್ಮದಲ್ಲಿ ಹೆಚ್ಚಳವಾಗಿವೆ. ಹಾಗಾಗಿಯೇ ಮನುಷ್ಯ ಆಸೆಗಳ ದಾಸನಾಗಿ, ಕೊನೆ ಯಿಲ್ಲದೇ, ನೆಮ್ಮದಿ ಯಿಲ್ಲದೆ ಕೇವಲ ಭ್ರಮೆಯಲ್ಲಿಯೇ ಜೀವಿಸುತಿದ್ದಾನೆ. ಎಷ್ಟೇ ದೇವರ ಪೂಜೆ ಮಾಡಿದರೂ ಏನೆಲ್ಲಾ ಹೋಮ-ಹವನ ಮಾಡಿದರೂ ಕೇವಲ ಇತರರ ಮುಂದೆ ತೋರಿಕೆಗಾಗಿಯೇ ವಿನಃ ಪರಮಾತ್ಮನ ಪ್ರೀತಿಗಾಗಿ ಅಲ್ಲ. ಕಾಮ-ಕ್ರೋಧಗಳು ಎಲ್ಲೆ ಮೀರುತ್ತಿವೆ. ಅನ್ಯಾಯ ಅತ್ಯಾಚಾರಗಳು ಅಸಂಖ್ಯ ವಾಗಿವೆ.

ಭಕ್ತಿ, ಸತ್ಯ-ಧರ್ಮ, ದೇವರ ಆರಾಧನೆ ಪುಣ್ಯದ ಕೆಲಸಗಳು ಅಪ ರೂಪವಾಗಿವೆ. ಪ್ರಕೃತಿಯ ವೈಪರೀತ್ಯಗಳು ಹೆಚ್ಚಳವಾಗಿ, ವಾತಾವರಣವೇ ಕಲುಷಿತವಾಗಿದೆ.

ಹಿಂದಿನ ಯುಗಗಳಾದ ಸತ್ಯಯುಗ, ತ್ರೇತಾಯುಗ, ದ್ವಾಪರ ಯುಗಗಳಲ್ಲಿ ಭಗವಂತ ತಾನೇ ಭೂಮಿಗೆ ಬಂದು ದುಷ್ಟರನ್ನ, ದೈತ್ಯರನ್ನ ಕೊಲ್ಲುತ್ತಿದ್ದ. ಭೂಮಿಯನ್ನ ಕಾಯುತ್ತಿದ್ದ. ಮತ್ಸ್ಯನಾಗಿ, ಕೂರ್ಮನಾಗಿ, ವರಾಹ, ನರಸಿಂಹನಾಗಿ, ವಾಮನನಾಗಿ, ಪರಶುರಾಮ, ರಾಮ, ಬಲರಾಮ, ಕೃಷ್ಣನಾಗಿ ಅವತಾ ರವನ್ನೆತ್ತಿ ಬಂದು ಈ ಭೂಮಿಯನ್ನು ಉದ್ಧಾರ ಮಾಡಿದ್ದ ಹಾಗೂ ಎಲ್ಲೆಡೆಯೂ ದೇವರ ಸ್ತೋತ್ರಗಳು ಸದಾ ಕೇಳಿ ಬರುತಿದ್ದವು. ಧ್ಯಾನ, ಹೋಮಗಳು ನಿತ್ಯ ನಡೆ ಯುತಿದ್ದವು. ಅನೇಕ ಋಷಿಮುನಿಗಳು ವರ್ಷಗಟ್ಟಲೇ ಧೀರ್ಘ ತಪಸ್ಸು ಮಾಡುತಿದ್ದರು. ಹಾಗಾಗಿ ಸತ್ಯವೆಂಬುದು, ಧರ್ಮವೆಂಬುದು ಸದಾ ಜೀವಿಸುತ್ತಿತ್ತು. ಆದರೇ ಈ ಕಲಿಗಾಲದಲ್ಲಿ ಅದೆಲ್ಲವೂ ಮಣ್ಣಾಗುತ್ತಾ ಹೋಗುತ್ತಿದೆ. ಸತ್ಯಕ್ಕೆ ಕಾಲವಿಲ್ಲದಂತಾಗಿದೆ. ಮೋಸ, ವಂಚನೆ, ಸುಳ್ಳುಗಳು ರುದ್ರತಾಂಡವವಾ ಡುತ್ತಿವೆ. ಇದೆಲ್ಲದರ ಮಧ್ಯೆಯೂ ಮನುಷ್ಯ ಕಷ್ಟ ಎಂದು ದೇವಸ್ಥಾನಗಳಿಗೆ ಹೋಗಿ, ದೇವರನ್ನ ಬೇಡಿದಾಗ ಅವನು ತಾನು ಬಾರದೇ ಬೇರೆಯವರ ರೂಪದಲ್ಲಿ ಭಕ್ತರ ಕಷ್ಟವನ್ನು ತೀರಿಸುತ್ತಾನೆ. ಹಾಗಾಗಿಯೇ ನಾವು ಅವನನ್ನು ಕರುಣಾಮಯಿ ಎನ್ನುವುದು.

# ಜನರ ಋಣ ತೀರುವ ಕಾರ್ಯ ಪ್ರಾಮಾಣಿಕವಾಗಿ ಮಾಡುವೆ: ನಾಡಗೌಡ

## 1 ಕೋಟಿ ರೂ. ವೆಚ್ಚದಲ್ಲಿ ಹಾಲುಮತ ಸಮಾಜದ ಶ್ರೀ ಸಿದ್ದರಾಯ ದೇವಸ್ಥಾನದ ಹತ್ತಿರ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಚಾಲನೆ

• ಉದಯವಾಹಿನಿ ತಾಳಿಕೋಟೆ

ಅಭಿವೃದ್ಧಿ ಕಾರ್ಯಗಳಲ್ಲಿ ನಾನೆಂದು ರಾಜಕಾರಣ ಮಾಡುವದಿಲ್ಲಾ ಹಿರೂರ-ತಮದಡ್ಡಿ-ಚೊಕ್ಕಾವಿ ಗ್ರಾಮದ ಜನರು ನನಗೆ ಚುನಾವಣೆಯಲ್ಲಿ ಅಭೂತಪೂರ್ವ ಬೆಂಬಲವನ್ನು ನೀಡಿದ್ದಾರೆ ಅವರ ಋಣ ತೀರಿಸಲು ಪ್ರಾಮಾಣಿಕವಾಗಿ ಸೇವೆ ಮಾಡುತ್ತೇನೆಂದು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ ಶಾಸಕ ಸಿ.ಎಸ್.ನಾಡಗೌಡ(ಅಪ್ಪಾಜಿ) ಅವರು ಹೇಳಿದರು.

**ಋಣ ತೀರಿಸಲು ಪ್ರಾಮಾಣಿಕ ಸೇವೆ**

ತಮದಡ್ಡಿ ಗ್ರಾಮದಲ್ಲಿ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ ಬೆಂಗಳೂರ ಯೋಜನಾ ವಿಭಾಗ ವಿಜಯಪುರ 2022-23ನೇ ಸಾಲಿನ ಮುಖ್ಯಮಂತ್ರಿಗಳ ವಿಶೇಷ ಅಭಿವೃದ್ಧಿ ಯೋಜನೆಯಡಿ 2 ಕೋಟಿ 95 ಲಕ್ಷ ವೆಚ್ಚದಲ್ಲಿ ತಮದಡ್ಡಿ ಗ್ರಾಮದಿಂದ ತಾಂಡಾ ರಸ್ತೆ ಸುದಾರಣೆ ಕಾಮಗಾರಿಗೆ ಹಾಗೂ ಹಿರೂರ ಗ್ರಾಮದಲ್ಲಿ ಹಿಂದೂಳಿದ ವರ್ಗಗಳ ಕಲ್ಯಾಣ ಇಲಾಖೆ ವಿಜಯಪುರ ಸನ್ 2023-24ನೇ ಸಾಲಿನ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ 1 ಕೋಟಿ ರೂ. ವೆಚ್ಚದಲ್ಲಿ ಹಾಲುಮತ ಸಮಾಜದ ಶ್ರೀ ಸಿದ್ದರಾಯ ದೇವ ಸ್ಥಾನದ ಹತ್ತಿರ ಸಮೂದಾಯ ಭವನ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡುತ್ತಿದ್ದ ಅವರು ತಮದಡ್ಡಿ ಗ್ರಾಮದಿಂದ ತಾಂಡಾದ ವರೆಗೆ ಉತ್ತಮ ರಸ್ತೆ ನಿರ್ಮಾಣವಾಗಬೇಕೆಂಬ ಜನರ ಕನಸ್ಸನ್ನು ಇಡೇರಿಸುವಂತಹ ಕೆಲಸ ಮಾಡಿದ್ದೇನೆ ಈ ರಸ್ತೆಯಲ್ಲಿ ಸೇತುವೆಗಳು ಬರಲಿದ್ದು ಉತ್ತಮವಾಗಿ ಪೈಪುಗಳನ್ನು ಜೋಡಿಸಿ ಸಿಸಿ ಮಾಡಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ ಅದರಂತೆ ಹಿರೂರ -ತಮದಡ್ಡಿ-ಚೊಕ್ಕಾವಿ ಗ್ರಾಮಸ್ಥರ ಬಹುದಿನಗಳ ಬೇಡಿಕೆಯಂತೆ ಎಲ್ಲಾ ಜನರ ಕಾರ್ಯಕ್ರಮಗಳನ್ನು ಮಾಡಲು ಸಮೂದಾಯ ಭವನ ಬೇಕೆಂಬುದ್ದಾಗಿತ್ತು.

ಅದನ್ನು ನಿರ್ಮಿಸಲು ಸದ್ಯ 1 ಕೋಟಿ ಅನುದಾನವನ್ನು ನೀಡಿದ್ದೇನೆ ಇನ್ನೂ ಈ ಕಾಮಗಾರಿ



ಉದಯವಾಹಿನಿ ಚಿತ್ರ

ವಿಸ್ತರಿಸಲು 50 ಲಕ್ಷದ ವರೆಗೆ ಅನುದಾನವನ್ನು ನೀಡಲಿದ್ದೇನೆಂದ ಅವರು ಹಿಂದಿನ ಸರ್ಕಾರದ ಅವಧಿಯಲ್ಲಿ ಗುತ್ತಿಗೆದಾರರ ಭಾಕಿ ಹಣವನ್ನು ಹಾಗೆ ಇಟ್ಟುಕೊಂಡು ಬಂದಿದ್ದಾರೆ.

ಈಗ ಆ ಗುತ್ತಿಗೆದಾರರಿಗೆ ಹಣ ಪಾವತಿಸುವ ಕಾರ್ಯದಲ್ಲಿ ಸರ್ಕಾರ ತೊಡಗಿಕೊಂಡಿರುವದರಿಂದ ಕ್ಷೇತ್ರಗಳಿಗೆ ಅನುದಾನ ನೀಡಲು ಹಿಂದೆ ಬಿದ್ದಂತಾಗಿದೆ ಆದರೆ ಮೂಲ ಭೂತ ಸೌಕರ್ಯಗಳಿಗೆ ಅನುದಾನ ಕಡಿಮೆಯಾಗದಂತೆ ಸರಿದೂಗಿಸುವತ್ತ ಸರ್ಕಾರ ಮುಂದಾಗಿದೆ ಸಿದ್ದರಾಮಯ್ಯ ನವರು ನನ್ನ ಕ್ಷೇತ್ರಕ್ಕೆ ಸದ್ಯ 15 ಕೋಟಿ ಅನುದಾನ ನೀಡಿದ್ದು ಅದರಲ್ಲಿ ಪ್ರಥಮ ಹಂತದಲ್ಲಿ ತಮದಡ್ಡಿ- ಹಿರೂರ ಗ್ರಾಮಗಳಿಗೆ ಮೊದಲ ಆದ್ಯತೆಯ ಮೇಲೆ 4 ಕೋಟಿ ಅನುದಾನವನ್ನು ನೀಡಿದ್ದೇನೆ.

**ಕಾಯಕ ಶಿಲ್ಪಿಗಳಾಗಬೇಕು**

**ಈ ಭಾರಿ ಸರ್ಕಾರದ ಬಜೆಟ್ 4 ಲಕ್ಷ ಕೋಟಿ ರೂ. ಮಂಡಿಸುವ ಬರವಸೆಯನ್ನು ಸಿದ್ದರಾಮಯ್ಯನವರು ನೀಡಿದ್ದಾರೆಂದ ಅವರು ರಾಜಕೀಯ ಲೇಪನದಿಂದ ಬಡ ಜನರು ಉದ್ದಾರವಾಗಲು ಸಾಧ್ಯವಿಲ್ಲಾ ನಾವು ಕಾಯಕ ಶಿಲ್ಪಿಗಳಾಗಬೇಕು ಅಂದಾಗ ಅಭಿವೃದ್ಧಿ ಯಾಗಲು ಸಾಧ್ಯವೆಂದರು. ಕಾರ್ಯಕ್ರಮದಲ್ಲಿ ಹಿರೂರ-ತಮದಡ್ಡಿ -ಚೊಕ್ಕಾವಿ ಗ್ರಾಮಗಳ ಗ್ರಾಮಸ್ಥರು ಶಾಸಕ ಸಿ.ಎಸ್.ನಾಡಗೌಡ ಅವರನ್ನು ಸನ್ಮಾನಿಸಿ ಗೌರವಿಸಿದರು.**

**ಇನ್ನೋರ್ವ ಕರ್ನಾಟಕ ಮೂಲಭೂತ ಸೌಕರ್ಯ ಅಭಿವೃದ್ದಿ ನಿಗಮ(ಭೂಸೇನಾ ನಿಗಮ)ದ ಕಾರ್ಯನಿರ್ವಾಹಕ ಅಭಿಯಂತರ ಆನಂದಸ್ವಾಮಿ ಅವರು ಹಿರೂರ ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ಸಮೂದಾಯ ಭವನದ ನೀಲ ನಕ್ಷೆಯನ್ನು ವಿಸ್ತರಿಸಿದ ಅವರು ಮುಂದುವರೆದ ಕಾಮಗಾರಿಗೆ ಶಾಸಕ ನಾಡಗೌಡರು ಅನುದಾನ ಒದಗಿಸುವದಾಗಿ ಹೇಳಿದ್ದಾರೆ ಇದೊಂದು ಸುಂದರ ಸಮೂದಾಯ ಭವನ ನಿರ್ಮಾಣವಾಗಲಿದೆ -ಆನಂದಸ್ವಾಮಿ**

ಇದರ ಜೊತೆಗೆ ಹಿರೂರ ಗ್ರಾಮದ ಅಗಸಿ ನಿರ್ಮಾಣದ ಕಾರ್ಯಕ್ಕೆ 25 ಲಕ್ಷ ಸೀಘ್ರದಲ್ಲಿ ಬಿಡುಗಡೆ ಮಾಡುತ್ತೇನೆಂದ ಅವರು ನಮ್ಮ ಕಾಂಗ್ರೇಸ್ ಸರ್ಕಾರ 5 ಗ್ಯಾರೆಂಟಿ ಪೂರ್ಣಗೊಳಿಸಿದೆ ರೈತರ ಬೀಜ ಗೊಬ್ಬರಕ್ಕಾಗಿ ಶೇ.80 ರಷ್ಟು ಸಬ್ಸಿಡಿ ಕೊಡುತ್ತಿದ್ದೇವೆ.

# ವೈದ್ಯರ ನಿರ್ಲಕ್ಷ್ಯದಿಂದ ಬಾಣಂತಿ ಸಾವು: ಕ್ರಮಕ್ಕೆ ಆಗ್ರಹ

## ಬೀದರ-ಚಿಂಚೋಳಿ-ತಾಂಡೂರ ರೈಲ್ವೆ ಮಾರ್ಗ ಸ್ಥಾಪಿಸಲು ಸಂಸದರಿಗೆ ಸಚಿನ್ ಚವ್ಹಾಣ ಮನವಿ

• ಉದಯವಾಹಿನಿ, ಚಿಂಚೋಳಿ

ತಾಲೂಕಿಗೆ ರೈಲ್ವೇ ತಾಂಡುರು-ಚಿಂಚೋಳಿ-ಬೀದರ ಮಾರ್ಗವಾಗಿ ರೈಲ್ವೇ ಸಂಪರ್ಕ ವಿಸ್ತರಿಸಿ,ಕೋಡ್ಲಿ ವ್ಯಾಪ್ತಿಯ ರಾಮನಗರ ತಾಂಡಾದ ಬಾಣಂತಿ ವೈದ್ಯರ ನಿರ್ಲಕ್ಷ್ಯದಿಂದ ಸಾವನೋಪ್ಪಿದ್ದು ಸೂಕ್ತ ತನಿಖೆ ನಡೆಸಿ ತಪ್ಪಿಸ್ಥರ ವಿರುದ್ಧ ಕಠಿಣ ಕ್ರಮಕೈಗೊಳ್ಳುವಂತೆ ಯುವ ಕರ್ನಾಟಕ ವೇದಿಕೆ ಜಿಲ್ಲಾಧ್ಯಕ್ಷ ಸಚಿನ್ ಚವ್ಹಾಣರವರು ಬೀದರ ಸಂಸದ ಸಾಗರ ಈಶ್ವರ ಖಂಡ್ರೆಯವರಿಗೆ ಮನವಿಪತ್ರ ಸಲ್ಲಿಸಿದರು.

ತಾಲ್ಲೂಕಿನ ಚಿಮ್ಮಾನಚೋಡ ಗ್ರಾಮಕ್ಕೆ ಬೀದರ ಸಂಸದ ಸಾಗರ ಖಂಡ್ರೆ ಬಂದಾಗ ಯುವ ಕರ್ನಾಟಕ ವೇದಿಕೆ ವತಿಯಿಂದ ವಿವಿಧ ಸಮಸ್ಯೆಗಳ ಪರಿಹಾರಕ್ಕೆ ಮನವಿ ಸಲ್ಲಿಸಿ ಮಾತನಾಡಿದ ಅವರು,ತಾಲ್ಲೂಕಿನಿಂದ ಕಲಬುರಗಿ ರೈಲ್ವೇ ಮತ್ತು ಬೀದರ ರೈಲ್ವೇ ಸಂಪರ್ಕ 100 ಕಿಮೀ ದೂರದಲ್ಲಿದ್ದು ದಿನ ನಿತ್ಯ ಪ್ರಯಾಣಿಕರು ರಸ್ತೆ ಮೂಲಕ ಪ್ರಯಾಣ ಮಾಡಬೇಕಾದರೆ ಬಹಳಷ್ಟು ಸಮಯ ಗತಿಸಿಹೋಗುತ್ತಿದೆ ಹಾಗೂ ಆಸ್ಪತ್ರೆ,ತುರ್ತು ಸೇವೆ,ಉದ್ಯೋಗಕ್ಕೆ,ಉನ್ನತ ಶಿಕ್ಷಣದ ಕಾಲೇಜಿನ



ಉದಯವಾಹಿನಿ ಚಿತ್ರ

ವಿದ್ಯಾರ್ಥಿಗಳಿಗೆ ಮತ್ತು ಬೆಂಗಳೂರಿಗೆ ಪ್ರಯಾಣ ಮಾಡಬೇಕಾದರೆ ರೈಲ್ವೇ ಸಂಪರ್ಕ ಅತೀ ಅವಶ್ಯಕವಿದ್ದು ಕ್ಷೇತ್ರದ ಜನತೆಗೆ ರೈಲ್ವೇ ಸಂಪರ್ಕ ಕಲ್ಪಿಸಿ ಜನ ಜೀವನ ಕಲಬುರಗಿ ಬೀದರ ಹೋಗಲು ಸುಗಮ ಸಂಪರ್ಕ ವ್ಯವಸ್ಥೆ ಬಗ್ಗೆ ಮುಂದಿನ ಸಂಸದ ಅಧಿವೇಶನದಲ್ಲಿ ತಾವು ಧ್ವನಿ ಎತ್ತುವ ಮೂಲಕ ಹೊಸ ರೈಲ್ವೆ ಮಾರ್ಗ ನಿರ್ಮಿಸಿಕೊಡಬೇಕು.

ಈ ಸಂದರ್ಭದಲ್ಲಿ ಹೀರಾ ಪವ್ಹಾರ,ಸಚಿನ್ ಸಿ.ರಾಠೋಡ್,ರಾಹುಲ್ ರಾಠೋಡ್, ಅರುಣ ರಾಠೋಡ್, ಸದಾನಂದ ರಾಠೋಡ್, ಆಕಾಶ ಪವ್ಹಾರ,ಸೇರಿದಂತೆ ಅನೇಕರಿದ್ದರು.

**ಕ್ರಮಕೈಗೊಳ್ಳುವಂತೆ ಸಂಸದರು ಡಿಹೆಚ್‌ಓಗೆ ಸೂಚನೆ**

**ರಾಮನಗರ ತಾಂಡಾದ ಬಾಣಂತಿ ಲಕ್ಷ್ಮಿ ರಾಠೋಡ್ ಕೋಡ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರ ನಿರ್ಲಕ್ಷ್ಯದಿಂದ ಸಾವನೋಪ್ಪಿದ್ದು ತಪ್ಪಿಸ್ಥರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸಚಿನ್ ಚವ್ಹಾಣ ಹೇಳುತ್ತಿದಂಗೆ ಬೀದರ ಸಂಸದ ಸಾಗರ್ ಖಂಡ್ರೆ ತತಕ್ಷಣವೇ ಡಿಹೆಚ್‌ಓಗೆ ಕರೆ ಮಾಡಿ ಕೋಡ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ರಾಮನಗರ ತಾಂಡಾದ ಬಾಣಂತಿ ಬಗ್ಗೆ ಸ್ವವಿಸ್ತಾರವಾಗಿ ತನಿಖೆ ನಡೆಸಿ ತಕ್ಷಣವೇ ತಪ್ಪಿಸ್ಥರ ವಿರುದ್ಧ ಕ್ರಮಕೈಗೊಳ್ಳುವಂತೆ ಸಂಸದರು ಡಿಹೆಚ್ ಓಗೆ ಸೂಚಿಸಿದರು. ತಕ್ಷಣವೇ ಡಿಹೆಚ್‌ಓ ಸ್ವಂದಿಸಿ ಗುರುವಾರವೇ ಭೇಟಿನೀಡಿ ವರದಿ ಸಿದ್ಧಪಡಿಸಿ ಕ್ರಮಕೈಗೊಳ್ಳಲಾಗುವುದು ಎಂದರು.**

# ಶೇಂಗಾ ಖರೀದಿ ಬಂದ್: ರೈತ ಕಂಗಾಲು

• ಉದಯವಾಹಿನಿ, ಲಕ್ಷ್ಮೇಶ್ವರ

ರೈತರಿಂದ ಬೆಂಬಲ ಬೆಲೆಯಲ್ಲಿ ಬಳ್ಳಿ ಶೇಂಗಾ ಖರೀದಿಗೆ ಸರ್ಕಾರ 6,793 ಬೆಲೆ ಘೋಷಣೆ ಮಾಡಿತ್ತು. ಅದರಂತೆ ತಾಲ್ಲೂಕಿನ ಶಿ ಗ್ರಾಮದ ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಸಂಘಕ್ಕೆ ಶೇಂಗಾ ಖರೀದಿಗೆ ಅವಕಾಶ ನೀಡಿತ್ತು. ಆದರೆ ಕೇವಲ ಎರಡೇ ದಿನಗಳಲ್ಲಿ ನೋಂದಣಿ ಮಾಡಿಸಲು ಬೆಳಗಾರರಿಂದ ಆಗಿರಲಿಲ್ಲ. ಅಷ್ಟರಲ್ಲಿ ಸರ್ಕಾರ ನೋಂದಣಿಯನ್ನು ಬಂದ್ ಮಾಡಿದ್ದರಿಂದಾಗಿ ಶೇಂಗಾ ಬೆಳೆಗಾರರು ಕಂಗಾಲಾಗಿದ್ದಾರೆ.

**ನೋಂದಣಿ ಪ್ರಕ್ರಿಯೆ ಬಂದ್**

ತಾಲ್ಲೂಕಿನಲ್ಲಿ ಈ ವರ್ಷ ಐದು ಸಾವಿರ ಹೆಕ್ಟೇರ್‌ನಲ್ಲಿ ಶೇಂಗಾ ಬೆಳೆಯಲಾಗಿದ್ದು ಒಕ್ಕಣಿ ಮುಗಿಸಿದ ರೈತರು ಫಸಲು ಮಾರಾಟಕ್ಕಾಗಿ ಕಾಯುತ್ತಿದ್ದರು. ಇದೇ ಸಂದರ್ಭದಲ್ಲಿ ಸರ್ಕಾರ ಬೆಂಬಲ ಬೆಲೆ ಖರೀದಿ ಜಿಲ್ಲೆ ಕೇಂದ್ರ ತೆರೆದಿದ್ದು ಅವರಿಗೆ ದೊಡ್ಡ ಅನುಕೂಲವಾಗಿತ್ತು ಆದರೆ ಕೇವಲ ಎರಡು ದಿನಗಳಲ್ಲಿ ನೂರಾರು ರೈತರಿಗೆ ಹೆಸರು ನೋಂದಣಿ ಮಾಡಿಸಿಕೊಳ್ಳಲು ಸಾಧ್ಯವಾಗಿಲ್ಲ. ಸದ್ಯ ನೋಂದಣಿ ಪ್ರಕ್ರಿಯೆ ಬಂದ್ ಆಗಿದೆ. ಶಿಗ್ಲಿ, ಖರೀದಿ ಕೇಂದ್ರದಲ್ಲಿ ಈವರೆಗೆ ಕೇವಲ 93 ರೈತರ ನೋಂದಣಿಯಾಗಿದ್ದು ಇನ್ನೂ ಸಾಕಷ್ಟು ನೋಂದಣಿ ಬಾಕಿ ಇದೆ. ಶಿಗ್ಲಿ, ಖರೀದಿ ಕೇಂದ್ರದಲ್ಲಿ ಈವರೆಗೆ ಖರೀದಿಸಿದ 93 ರೈತರ ಪೈಕಿ ಕೇವಲ 30 ಬೆಳೆಗಾರರ ಶೇಂಗಾವನ್ನು ನಾಪೆಡ್ ಗೆ ಕಳುಹಿಸಿ ಕೊಡಲಾಗಿದೆ. ಇನ್ನು ಬಾಕಿ ಉಳಿದಿರುವ ಉತ್ಪನ್ನಕ್ಕೆ ಲಾಟ್ ನಂಬರಿನ ಅಗತ್ಯ ಇದ್ದು ಅದನ್ನು ನಾಪೆಡ್ ನೀಡಬೇಕು.



ಉದಯವಾಹಿನಿ ಚಿತ್ರ

ಆದರೆ ಎಂಟು ದಿನ ಕಳೆದರೂ ಲಾಟ್ ನಂಬರ್ ಸಿಕ್ಕಿಲ್ಲ. ಹೀಗಾಗಿ ಸಂಘದ ಸದಸ್ಯರು ರೈತರಿಂದ ಖರೀದಿಸಿದ ಶೇಂಗಾವನ್ನು ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೇಂದ್ರದಲ್ಲಿ ಇನ್ನೂ 350 ಚೀಲ ಶೇಂಗಾ ಫಸಲನ್ನು ನಾಪೆಡ್ ಕಳುಹಿಸಿ ಕೊಡಬೇಕಾಗಿದೆ.

# ಸಾಹಿತ್ಯ ವೇದಿಕೆ: ಫೆ.7ರಿಂದ ರಾಷ್ಟ್ರೀಯ ಅಕ್ಷರ ಹಬ್ಬ

• ಉದಯವಾಹಿನಿ, ದಾವಣಗೆರೆ

ಸೃಜನಶೀಲ ಸಾಹಿತ್ಯವನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಇದೇ ಮೊದಲ ಬಾರಿಗೆ 'ದಾವಣಗೆರೆ ರಾಷ್ಟ್ರೀಯ ಅಕ್ಷರ ಹಬ್ಬವನ್ನು ಫೆ.7ರಿಂದ 9 ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ದಾವಣಗೆರೆ ಸಾಹಿತ್ಯ ವೇದಿಕೆ ಸಂಚಾಲಕ ಶ್ರೀಹರ್ಷ ಸಾಲಿ ಮಠ ತಿಳಿಸಿದರು.

ಬೆಂಗಳೂರು, ಮೈಸೂರು, ಧಾರವಾಡದಲ್ಲಿ ನಡೆಯುತ್ತಿದ್ದ ಸಾಹಿತ್ಯ ಹಬ್ಬವನ್ನು ಅರಸಿ ಸಾಂಸ್ಕೃತಿಕ ವೇದಿಕೆ ಸಹಯೋಗದಲ್ಲಿ ಮಧ್ಯ ಕರ್ನಾಟಕದಲ್ಲಿ ಆಯೋಜಿಸಲಾಗಿದೆ.

ಸಾಹಿತ್ಯ ಚಟುವಟಿಕೆಗಳಿಗೆ ಉತ್ತೇಜನ ನೀಡುವ ಪ್ರಯತ್ನದ ಭಾಗವಾಗಿ ಈ ಹಬ್ಬ ರೂಪು ತಳೆದಿದೆ. ಕಥೆ, ಕಾವ್ಯ, ಕಾದಂಬರಿ ಮತ್ತು ರಂಗ ಭೂಮಿ ಕೇಂದ್ರೀಕರಿಸಿ ಉತ್ಸವ ಏರ್ಪಡಿಸಲಾಗಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು. ಕನ್ನಡ, ಕಾಶ್ಮೀರಿ, ಬಂಗಾಳಿ, ತೆಲುಗು, ತಮಿಳು, ಗುಜರಾತಿ, ಒರಿಯಾ, ಅಸ್ಸಾಮಿ, ಮರಾಠಿ ಸೇರಿ 15 ಭಾಷೆಯ ಸಾಹಿತಿ ಗಳು ಹಬ್ಬದಲ್ಲಿ ಪಾಲ್ಗೊಳ್ಳಲಿದ್ದಾರೆ. ನಗರದ ಎಂಬಿಎ ಕಾಲೇಜು ಸಭಾಂಗಣದಲ್ಲಿ ಹಬ್ಬ ಏರ್ಪಡಿಸಲಾಗಿದ್ದು, 300ಕ್ಕೂ ಹೆಚ್ಚು ಆಸಕ್ತರು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಎಲ್ಲರಿಗೂ ಊಟ ಮತ್ತು ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ. ಹಬ್ಬದ ಅಂಗವಾಗಿ ಕಥಾ ಸ್ಪರ್ಧೆ ನಡೆಸಲಾಗುತ್ತಿದೆ' ಎಂದು ವಿವರಿಸಿದರು.

ಫೆ.7ರಂದು ಬೆಳಿಗ್ಗೆ 10.30ಕ್ಕೆ ಸಾಹಿತಿ ಎಲ್. ಹನುಮಂತಯ್ಯ ಅಕ್ಷರ ಹಬ್ಬವನ್ನು ಉದ್ಘಾಟಿಸಲಿದ್ದಾರೆ. ಸಾಹಿತಿಗಳಾದ ಎಚ್.ಟಿ.ಪೋತೆ, ಎಲ್.ಎನ್.ಮುಕುಂದರಾಜ್, ಎಚ್.ಎನ್. ಆರತಿ, ಚಾಂದನಿ ಸೇರಿ ಅನೇಕರು ಪಾಲ್ಗೊಳ್ಳಲಿದ್ದಾರೆ. ಕಥಾ ಸಮಯ'ವನ್ನು ಕಥೆಗಾರ ಕೇಶವರೆಡ್ಡಿ ಹಂದ್ರಾಳ, ರಂಗ ಸಮಯ'ವನ್ನು ರಂಗಕರ್ಮಿ ಜಯಲಕ್ಷ್ಮಿ ಪಾಟೀಲ ಹಾಗೂ ಕವಿಗೋಷ್ಠಿಯನ್ನು ಕವಿ ಸತೀಶ್ ಕುಲಕರ್ಣಿ ನಡೆಸಿಕೊಡಲಿದ್ದಾರೆ' ಎಂದರು. ಫೆ.8ರಂದು ನಡೆಯುವ ಕವಿಗೋಷ್ಠಿಯಲ್ಲಿ ಗುಜರಾತಿ, ಒರಿಯಾ ಭಾಷೆಯ ಕವಿಗಳು ಪಾಲ್ಗೊಳ್ಳಲಿದ್ದಾರೆ.

# ಜನತೆ ನೆಮ್ಮದಿಯಿಂದ ಬದುಕುವಂತಾಗಲಿ: ಶಾಸಕ ಪ್ರಭು ಚವ್ಹಾಣ

• ಉದಯವಾಹಿನಿ, ಕಮಲನಗರ

ಗ್ರಾಮಸ್ಥರ ಸಮಸ್ಯೆಗಳನ್ನು ಆಲಿಸಿ ಅಗತ್ಯ ಪರಿಹಾರ ಕಲ್ಪಿಸಿ ಜನರು ನೆಮ್ಮದಿಯಿಂದ ಬದುಕುವಂತಾಗಬೇಕು ಎಂಬುದೇ ನನ್ನ ಪರಮ ಉದ್ದೇಶವಾಗಿದ್ದು, ಈ ದಿಶೆಯಲ್ಲಿ ಕ್ಷೇತ್ರಾದ್ಯಂತ ಗ್ರಾಮ ಸಂಚಾರ ನಡೆಸುತ್ತಿದ್ದೇನೆ ಎಂದು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು.ಬಿ ಚವ್ಹಾಣ ಅವರು ತಿಳಿಸಿದರು.

ಕಲನಗರ ತಾಲ್ಲೂಕಿನ ಮುತಖೇಡ, ದಾಬಕಾ (ಸಿಹೆಚ್), ಗಂಗನಬೀಡ, ಗಣೇಶಪೂರ(ಯು), ವಾಗನಗೇರಾ, ಶಿವಪುರ, ಮುರ್ಕಿ, ಮುರ್ಕಿ ವಾಡಿ, ಕುರುಬುರವಾಡಿಯಲ್ಲಿ ಜ.28ರಂದು ಗ್ರಾಮ ಸಂಚಾರ ನಡೆಸಿ ಅವರು ಮಾತನಾಡಿದರು.

ಜನರ ಸಂಕಷ್ಟಗಳಿಗೆ ಸ್ಪಂದಿಸಬೇಕೆಂಬ ಉದ್ದೇಶದಿಂದ ಶಾಸಕನಾದ ನಂತರ ಪ್ರತಿ ವರ್ಷ ಕ್ಷೇತ್ರದ ಎಲ್ಲಾ ಗ್ರಾಮಗಳಿಗೆ ಬೇಟಿ ನೀಡುತ್ತಾ ಬರುತ್ತಿದ್ದೇನೆ. ಅದರಂತೆ ಈ ವರ್ಷವೂ ಕೂಡ ಗ್ರಾಮ ಸಂಚಾರ ನಡೆಸುತ್ತಿದ್ದು, ಗ್ರಾಮ ಮಟ್ಟದಲ್ಲಿ ಕೆಲಸ ಮಾಡುವ ಗ್ರಾಮ ಪಂಚಾಯಿತಿ, ಶಾಲೆ, ಅಂಗನವಾಡಿ, ಆಸ್ಪತ್ರೆ, ಪಶು ಆಸ್ಪತ್ರೆಗಳು, ರೈತ ಸಂಪರ್ಕ ಕೇಂದ್ರ, ನಾಡ



ಉದಯವಾಹಿನಿ ಚಿತ್ರ

**ರೈತರ ಸಮಸ್ಯೆಗೆ ಸ್ಪಂದನೆ**

**ಬೆಂಬಲ ಬೆಲೆ ಯೋಜನೆಯಡಿ ಸೋಯಾ ಬೆಳೆ ಮಾರಾಟ ಮಾಡಲು ರೈತ ಸಂಪರ್ಕ ಕೇಂದ್ರದಲ್ಲಿ ಹೆಸರು ನೋಂದಾಯಿಸಲಾಗಿದೆ. ಆದರೂ ನಮ್ಮ ಬೆಳೆಯನ್ನು ತೆಗೆದುಕೊಳ್ಳುತ್ತಿಲ್ಲವೆಂದು ದಾಬಕಾ(ಸಿಹೆಚ್) ಗ್ರಾಮಸ್ಥರು ದೂರು ನೀಡಿದರು.**

ಕಛೇರಿಗಳಿಗೆ ಭೇಟಿ ನೀಡುತ್ತಿದ್ದೇನೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಲೆಕ್ಕಾಧಿಕಾರಿಗಳು, ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಮತ್ತಿತರೆ ಸಿಬ್ಬಂದಿ ಹೇಗೆ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ತಿಳಿದುಕೊಂಡು ಕೊರತೆಗಳಿದಲ್ಲಿ ಸರಿಪಡಿಸುವ ಕೆಲಸ ಮಾಡುತ್ತಿದ್ದೇನೆ ಎಂದರು. ರೈತರ ಅಭಿವೃದ್ಧಿಗೆ ವಿವಿಧ ಇಲಾಖೆಗಳಲ್ಲಿ ನಾನಾ ರೀತಿಯ ಯೋಜನೆಗಳಿವೆ. ಇವುಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು. ಸರ್ಕಾರದ ಎಲ್ಲಾ ಸೌಲಭ್ಯಗಳು ಅರ್ಹರಿಗೆ ತಲುಪಿಸಬೇಕಿದೆ.

ಜನರಲ್ಲಿಯೂ ಕೂಡ ತಮ್ಮ ಗ್ರಾಮದ ಅಭಿವೃದ್ಧಿಯ ಬಗ್ಗೆ ಕಾಳಜಿ ಮೂಡಬೇಕು. ತಮ್ಮ ಊರಿನಲ್ಲಿ ಸರ್ಕಾರದ ಯೋಜನೆಗಳನ್ನು ತರಲು ಪ್ರಯತ್ನಿಸಬೇಕು. ಅಭಿವೃದ್ಧಿ ಕಲಸಗಳಿಗೆ ಸಹಕರಿಸಬೇಕು ಮತ್ತು ಅವುಗಳು ಸರಿಯಾಗಿ ಆಗುವಂತೆ ಮುತುವರ್ಜಿ ವಹಿಸಬೇಕು ಎಂದು ತಿಳಿಸಿದರು.

ಸರ್ಕಾರದಿಂದಲೇ ಸೋಯಾ ಖರೀದಿಯನ್ನು ನಿಲ್ಲಿಸಲಾಗಿದೆ ಎಂದು ಅಧಿಕಾರಿಗಳು ಸಮಜಾಯಿಸಿ ನೀಡಿದಾಗ, ಶಾಸಕರು ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳನ್ನು ದೂರವಾಣಿ ಮುಖಾಂತರ ಸಂಪರ್ಕಿಸಿ ಮಾಹಿತಿ ಪಡೆದರು. ಬೆಂಬಲ ಬೆಲೆ ಯೋಜನೆಯಡಿ ರೈತರ ಸೋಯಾ ಖರೀದಿಗೆ ಅವಕಾಶ ಮಾಡಿಕೊಡಲು ವ್ಯವಸ್ಥೆ ಮಾಡಿಕೊಡೇಕೆಂದು ಹೇಳಿದರು.

# ಸರ್ಕಾರಿ ವೈದ್ಯಕೀಯ ಕಾಲೇಜು ಗೊಂದಲದ ಗೂಡು

• ಉದಯವಾಹಿನಿ, ಬಾಗಲಕೋಟೆ

ಘೋಷಣೆಯಾಗಿ ದಶಕವೇ ಕಳೆದಿದ್ದರೂ ಬಾಗಲಕೋಟೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ ಗೊಂದಲದ ಗೂಡಾಗಿದೆ. 2014-15ನೇ ಸಾಲಿನ ಬಜೆಟ್‌ನಲ್ಲಿ ಆಗ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಘೋಷಣೆ ಮಾಡಿದ್ದರು.

ಆ ನಂತರ ಆಡಳಿತ ನಡೆಸಿದ ಸಮ್ಮಿಶ್ರ ಸರ್ಕಾರದಲ್ಲಾಗಲೀ, ಬಿಜೆಪಿ ಸರ್ಕಾರದಲ್ಲಾಗಲೀ ಅನುದಾನ ದೊರೆಯಲಿಲ್ಲ.ಬಾಗಲಕೋಟೆಯ ಜೊತೆಗೆ ಗದಗ, ಹಾವೇರಿ, ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ ವೈದ್ಯಕೀಯ ಕಾಲೇಜು ಆರಂಭದ ಘೋಷಣೆ ಮಾಡಲಾಗಿತ್ತು.ಆ ಜಿಲ್ಲೆಗಳಲ್ಲಿ ಕಾಲೇಜು ಆರಂಭಗೊಂಡಿವೆ.

ವಿಧಾನಸಭಾ ಚುನಾವಣೆ ವೇಳೆ ಬಾಗಲಕೋಟೆಯಲ್ಲಿ ಭಾಷಣ ಮಾಡಿದ್ದ ಸಿದ್ದರಾಮಯ್ಯ, ಬಿಜೆಪಿ ಸರ್ಕಾರ ಸರ್ಕಾರಿ ವೈದ್ಯಕೀಯ ಕಾಲೇಜು ಆರಂಭಿಸಿಲ್ಲ. ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದರೆ, ಕಾಲೇಜು ಆರಂಭಿಸಲಿದೆ ಎಂದಿದ್ದರು.

ಇತ್ತೀಚೆಗೆ ಇಲ್ಲಿಗೆ ಬಂದಿದ್ದಾಗ, ಅನುದಾನ ನೀಡುವ



ಉದಯವಾಹಿನಿ ಚಿತ್ರ

ಗ್ಯಾರಂಟಿಯನ್ನು ನೀಡಲಿಲ್ಲ.ಬಾಗಲಕೋಟೆ ಜಿಲ್ಲೆಯಾಗಿ ಎರಡೂವರೆ ದಶಕಗಳು ಕಳೆದಿವೆ.

ಕೈಗಾರಿಕೆ, ಶಿಕ್ಷಣ ಸಂಸ್ಥೆ ಆರಂಭಕ್ಕೆ ಯಾವುದೇ ಕ್ರಮಗಳಾಗದ್ದರಿಂದ ಉದ್ಯೋಗ ಅರಸಿಕೊಂಡು ರಾಜ್ಯ, ಹೊರ ರಾಜ್ಯಗಳಿಗೆ ಗುಳೆ ಹೋಗಬೇಕಾದ ಸ್ಥಿತಿ ಇದೆ. ವೈದ್ಯಕೀಯ ಕಾಲೇಜು ಆರಂಭಿಸಬೇಕು ಎಂದು ಹಲವು ಸಂಸ್ಥೆಗಳು ವರ್ಷಗಳಗಟ್ಟಲೇ ಹೋರಾಟ ಮಾಡಿವೆ. ಅದು ಜಿಲ್ಲೆಯ ಜನಪ್ರತಿನಿಧಿಗಳನ್ನು ತಲುಪದಿರುವುದು ದುರ್ದೈವದ ಸಂಗತಿಯಾಗಿದೆ. ಜಿಲ್ಲೆಗೆ ಬರಬೇಕಾದ ಯೋಜನೆಗಳು ಬಾರದಿರುವುದಕ್ಕೆ ಜಿಲ್ಲೆಯ ಜನಪ್ರತಿನಿಧಿಗಳು ಗಟ್ಟಿ ಹಾಗೂ ಒಗ್ಗಟ್ಟಿನ ಬೇಡಿಕೆ ಮಂಡಿಸದಿರುವುದೇ ಆಗಿದೆ ಎನ್ನುತ್ತಾರೆ ಜಿಲ್ಲೆಯ ಜನತೆ.

**ಅಭಿವೃದ್ಧಿಗಾದರೂ ಅನುದಾನ ನೀಡುವರೇ**

**ರಾಜಕೀಯ ಸಂಕಷ್ಟದಲ್ಲಿದ್ದಾಗ ಸಿದ್ದರಾಮಯ್ಯ ಅವರನ್ನು ಬಾದಾಮಿ ವಿಧಾನಸಭಾ ಕ್ಷೇತ್ರದಿಂದ ಗೆಲ್ಲಿಸುವ ಮೂಲಕ ಬಾದಾಮಿ ಜನರು ರಾಜಕೀಯ ಪುನರ್‌ಜನ್ಮ ನೀಡಿದ್ದರು. ಚುನಾವಣೆ ಸಮಯದಲ್ಲಿ ಗೆದ್ದರೆ, ಬಾದಾಮಿ ಕ್ಷೇತ್ರದ ಅಭಿವೃದ್ಧಿಯ ಹೊಣೆ ನನ್ನದು ಎಂದು ಭರವಸೆ ನೀಡಿದ್ದರು. ಆದರೆ, ಮುಖ್ಯಮಂತ್ರಿಯಾದ ನಂತರ ಒಂದು ಬಾರಿಯೂ ಬಾದಾಮಿಗೆ ಬಂದಿಲ್ಲ. ಅಭಿವೃದ್ಧಿಗಾದರೂ ಅನುದಾನ ನೀಡುವರೇ ಕಾದು ನೋಡಬೇಕಿದೆ.**

ದಶಕದ ಹಿಂದೆ ಬಾಗಲಕೋಟೆಯ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಖ್ಯಾಡ ಗ್ರಾಮದಲ್ಲಿ ಲಲಿತಕಲಾ ವಿಶ್ವವಿದ್ಯಾಲಯ ಆರಂಭಿಸಲು ಆಗಿನ ಬಿಜೆಪಿ ಸರ್ಕಾರ ನಿರ್ಧರಿಸಿತ್ತು. ಆದರೆ, ಇನ್ನೂ ವಿಶ್ವವಿದ್ಯಾಲಯ ಆರಂಭವಾಗಿಲ್ಲ.

2012-13ರಲ್ಲಿ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಸರ್ಕಾರವು ವಿಶ್ವವಿದ್ಯಾಲಯವನ್ನು ಇಲ್ಲಿ ಆರಂಭಿಸಲು ನಿರ್ಧರಿಸಿತ್ತು. 1.23 ಕೋಟಿ ಬಿಡುಗಡೆ ಮಾಡಲಾಗಿತ್ತು.

ಅದಕ್ಕಾಗಿಯೇ ಖ್ಯಾಡ ಗ್ರಾಮದಲ್ಲಿ 430 ಎಕರೆ ಭೂಮಿ ಕಾಯ್ದಿರಿಸಲಾಗಿದೆ. ಈ ಬಾರಿಯಾದರೂ ಚಾಲನೆ ಸಿಗಲಿದೆ ಎಂಬುದು ಜನರ ನಿರೀಕ್ಷೆಯಾಗಿದೆ.

# ಲೈಂಗಿಕ ಅಪರಾಧಗಳ ವಿರುದ್ಧ ಮಕ್ಕಳ ರಕ್ಷಣಾ ಮಸೂದೆ 2012 ಪರಿಣಾಮಕಾರಿ

## ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳಿಗೆ ಮಾಹಿತಿ ಶಿಕ್ಷಣ ಸಂವಹನ ತರಬೇತಿ ಕಾರ್ಯಗಾರ

• ಉದಯವಾಹಿನಿ, ಚಿತ್ರದುರ್ಗ

29.01.2025ರಂದು ಚಿತ್ರದುರ್ಗ ನಗರದ ಐಎಂಎ ಹಾಲಿನಲ್ಲಿ ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳವರ ಸಹಯೋಗದೊಂದಿಗೆ ಲೈಂಗಿಕ ಅಪರಾಧಗಳ ವಿರುದ್ಧ ಮಕ್ಕಳ ರಕ್ಷಣಾ ಮಸೂದೆ 2012 ಚಿತ್ರದುರ್ಗ ಜಿಲ್ಲೆಯ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಮುದಾಯ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳವರಿಗೆ ಮಾಹಿತಿ ಶಿಕ್ಷಣ ಸಂವಹನ ತರಬೇತಿ ಕಾರ್ಯಗಾರ ಜರಗಿತು.

ಜಿಲ್ಲಾ ತಾಯಿ ಮಕ್ಕಳ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ. ಡಿಎಂ ಅಭಿನವ ಮಾತನಾಡಿ 2011 ರ ಜನಗಣತಿಯ ಅಂಕಿ ಅಂಶಗಳ ಪ್ರಕಾರ ಭಾರತವು ಹದಿನೆಂಟು ವರ್ಷಕ್ಕಿಂತ ಕಡಿಮೆ ವಯಸ್ಸಿನ 472 ಮಿಲಿಯನ್ ಮಕ್ಕಳನ್ನು ಹೊಂದಿದೆ, ಅದರಲ್ಲಿ 225 ಮಿಲಿಯನ್ ಬಾಲಕಿಯರು. ದೇಶದಲ್ಲಿ ಮಕ್ಕಳ ರಕ್ಷಣೆಯನ್ನು ಭಾರತೀಯ ಸಂವಿಧಾನದ 21 ನೇ ಪರಿಚ್ಛೇದದಲ್ಲಿ ಭಾರತೀಯ ನಾಗರಿಕರಿಗೆ ಖಾತರಿಪಡಿಸಲಾಗಿದೆ. ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ವೈದ್ಯಾಧಿಕಾರಿಗಳ ಜವಾಬ್ದಾರಿ ಪಾತ್ರ ಬಹಳ ಪ್ರಮುಖವಾಗಿರುತ್ತದೆ. ಪ್ರಕರಣಗಳನ್ನು



ಉದಯವಾಹಿನಿ ಚಿತ್ರ

ದಾಖಲಿಸುವುದು ದಾಖಲಾತಿಗಳನ್ನು ಸರಿಯಾಗಿ ನಿರ್ವಹಣೆ ಸಂಬಂಧಿಸಿದ ಇಲಾಖೆಗೆ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿಗಳಿಗೆ ಮಾಹಿತಿ ಒದಗಿಸುವುದು ಅಪರಾಧ ಕೋಳಗಾದ ಮಕ್ಕಳಿಗೆ ಸೂಕ್ತ ಚಿಕಿತ್ಸೆ ಒದಗಿಸುವುದರ ಬಗ್ಗೆ ತಿಳಿಸುತ್ತಾ ಲೈಂಗಿಕ ಅಪರಾಧಗಳ ವಿರುದ್ಧ ಮಕ್ಕಳ ರಕ್ಷಣಾ ಮಸೂದೆ 2012 ಪರಿಣಾಮಕಾರಿ ಅಡ್ವಕೇಟ್ ಉಮೇಶ್ ಕಾನೂನು ಸಲಹೆಗಾರರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಚಿತ್ರದುರ್ಗ ಮಾತನಾಡಿ ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ, ಅಥವಾ POCSO, (ತಿದ್ದುಪಡಿ) ಮಸೂದೆ, 2019, ಮಕ್ಕಳ ವಿರುದ್ಧ ಲೈಂಗಿಕ ಅಪರಾಧಗಳಲ್ಲಿ ತೊಡಗಿರುವವರಿಗೆ ಕಠಿಣ ಶಿಕ್ಷೆ, ಉಲ್ಬಣಗೊಂಡ ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ಮರಣದಂಡನೆ, ದಂಡ ಮತ್ತು ಜೈಲು ಶಿಕ್ಷೆಯನ್ನು ವಿಧಿಸುವುದರ ಜೊತೆಗೆ ತಡೆಯಲು ಪ್ರಯತ್ನಿಸುತ್ತದೆ. ಮಕ್ಕಳ ಅಶ್ಲೀಲತೆ ಲೈಂಗಿಕ ದೌರ್ಜನ್ಯಗಳನ್ನು ತಡೆಗಟ್ಟುವಲ್ಲಿ ಇರುವ ಕಾನೂನಿನ ಕಾಯ್ದೆಗಳನ್ನ ಎಲ್ಲಾ ವೈದ್ಯಾಧಿಕಾರಿಗಳಿಗೂ ತಿಳಿಸಿ ಹೇಳಿದರು.

**ವೈದ್ಯಾಧಿಕಾರಿಗಳ ಜವಾಬ್ದಾರಿ ಪಾತ್ರ ಬಹಳ ಪ್ರಮುಖ**

ಡಾಕ್ಟರ್ ವೇಣು ತಜ್ಞರು ಫಾರಾನ್ಸಿಕ್ ಮೆಡಿಸಿನ್ ವಿಭಾಗ ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗರವರು ಮಾತನಾಡಿ ಅಪರಾಧ ವ್ಯಸಗಿದವರ ವೈದ್ಯಕೀಯ ಪರೀಕ್ಷೆಗಳನ್ನ ಹೇಗೆ ಮಾಡಬೇಕು ಕಾಯ್ದೆ ಸಿ ಆರ್ ಪಿ ಸಿ 52 ಮತ್ತು ಐಪಿಸಿ ಕಾಯ್ದೆಗಳ ಬಗ್ಗೆ ನಿರ್ವಹಿಸಬೇಕಾದ ದಾಖಲಾತಿಗಳ ಬಗ್ಗೆ ಮಾಹಿತಿ ಶಿಕ್ಷಣ ನೀಡಿದರು ನಂತರ ಅಂಕಣ ಚರ್ಚೆ ನಡೆಸಿ ಪ್ರಶ್ನೋತ್ತರಗಳಿಗೆ ಉತ್ತರನೀಡುತ್ತಾ ಮಾಹಿತಿ ಶಿಕ್ಷಣವನ್ನ ಒದಗಿಸಿದರು

**ಡಾಕ್ಟರ್ ರೂಪಶ್ರೀ ಸ್ತ್ರೀ ರೋಗ ತಜ್ಞರು ಜಿಲ್ಲಾ ಆಸ್ಪತ್ರೆ ಮಾತನಾಡಿ ದೌರ್ಜನ್ಯ ಕೊಳಗಾದ ಮಕ್ಕಳ ವೈದ್ಯಕೀಯ ಪರೀಕ್ಷೆ ನಡೆಸುವಲ್ಲಿ ಅನುಸರಿಸಬೇಕಾದ ನಿಯಮಗಳನ್ನು ಇಲಾಖೆಯ ಮಾರ್ಗದರ್ಶನದಂತೆ ಪರೀಕ್ಷಾ ವರದಿಗಳನ್ನು ಭರ್ತಿ ಮಾಡುವ ನಮೂನೆಗಳನ್ನು ವಿವರಿಸಿದರು -ಡಾ.ರೂಪಶ್ರೀ**

ತರಬೇತುದಾರರಾಗಿ ಆಗಮಿಸಿದ ಜಿಲ್ಲೆಯ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಆಗಮಿಸಿದ ವೈದ್ಯಾಧಿಕಾರಿಗಳು ತಮ್ಮ ಅನುಮಾನಗಳನ್ನ ಪ್ರಶ್ನೆ ಮಾಡಿ ಮಾಹಿತಿ ಪಡೆದುಕೊಂಡರು ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳಾದ ಡಾ. ರೇಖಾ ಡಾ. ನಾಗರಾಜ್ ತಾಲ್ಲೂಕ ಆರೋಗ್ಯ ಅಧಿಕಾರಿಗಳಾದ ಡಾ. ಬಿವಿ ಗಿರೀಶ್ ಡಾಕ್ಟರ್ ವೆಂಕಟೇಶ್ ಡಾ. ರಾಘವೇಂದ್ರ ಪ್ರಸಾದ್ ಡಾಕ್ಟರ್ ಮಧುಕುಮಾರ್ ತಾಲ್ಲೂಕ ಆರೋಗ್ಯ ಶಿಕ್ಷಣಾಧಿಕಾರಿ ಎನ್‌ಎಸ್ ಮಂಜುನಾಥ್ ಜಿಲ್ಲಾ ವ್ಯವಸ್ಥಾಪಕ ಪ್ರಫುಲ್ಲ ಚಂದ್ರ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಹನುಮಂತ ಗೌಡ ಪೂಜಾರ್ ಇತರರು ಉಪಸ್ಥಿತರಿದ್ದರು

# ಮಿನಿ ನ್ಯೂಸ್

## ಮೈಕ್ರೋ ಫೈನಾನ್ಸ್ : ಮಹಿಳೆಗೆ ವಂಚಿಸಿದ ಆರೋಪಿ ಬಂಧನ

• ಉದಯವಾಹಿನಿ, ಚಿಕ್ಕಮಗಳೂರು

ಮೈಕ್ರೋ ಫೈನಾನ್ಸ್ ಕಂಪನಿಯ ವ್ಯವಸ್ಥಾಪಕ ಎಂದು ಹೇಳಿ ಮಹಿಳೆಗೆ ವಂಚಿಸಿದ ಆರೋಪದಲ್ಲಿ ಮೂವರ ವಿರುದ್ಧ ನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಪೊಲೀಸರು ಒಬ್ಬನನ್ನು ಬಂಧಿಸಿದ್ದಾರೆ. ಇಕ್ವಿಟಾಸ್ ಫೈನಾನ್ಸ್ ಕಂಪನಿಯಲ್ಲಿ ಮ್ಯಾನೇಜರ್ ಆಗಿದ್ದ ಸಂತೋಷ್ ಅಲ್ಲೂರು ಬಂಧಿತ ಆರೋಪಿ. ಹಳೆಯ ಸಾಲ ತೀರಿಸಿದರೆ 10 ಲಕ್ಷ ಸಾಲ ಸಿಗಲಿದೆ ಎಂದು ಮಂಜುಳಾ ಎಂಬ ಮಹಿಳೆಯನ್ನು ನಂಬಿಸಿದ್ದಾರೆ.

ಬ್ಯಾಂಕ್‌ನಲ್ಲಿ ಸಾಲ ತೆಗೆದು ಮಹಿಳೆ ಅವರಿಗೆ ಕೊಟ್ಟಿದ್ದು, ಅದನ್ನು ಫೈನಾನ್ಸ್ ಗೆ ಕಟ್ಟದೆ ಸಂತೋಷ್ ವಂಚಿಸಿದ್ದಾನೆ ಎಂದು ಮಂಜುಳಾ ದೂರು ನೀಡಿದ್ದಾರೆ.ಮತ್ತಿಬ್ಬರು ಆರೋಪಿಗಳಾದ ಆಶಾರಾಣಿ ಹಾಗೂ ಜಾನ್ ಎಂಬುವರ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ. ವಂಚನೆಗೆ ಒಳಗಾಗಿರುವ ಮಹಿಳೆ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದಾರೆ. ಇದರ ನಡುವೆಯೂ ಸಾಲ ಮರುಪಾವತಿಗೆ ಫೈನಾನ್ಸ್ ಕಂಪನಿ ಸಿಬ್ಬಂದಿ ಒತ್ತಡ ಹಾಕುತ್ತಿದ್ದಾರೆ ಎಂದು ಮಂಜುಳಾ ಆರೋಪಿಸಿದ್ದಾರೆ.

## ನಡುರಸ್ತೆಯಲ್ಲೇ ಹೊತ್ತಿ ಉರಿದ ಲಾರಿ : 30 ಟನ್ ಅಕ್ಕಿ ಭಸ್ಮ

• ಉದಯವಾಹಿನಿ, ಬಾಗಲಕೋಟೆ

ನಡು ರಸ್ತೆಯಲ್ಲೇ ಅಕ್ಕಿ ಲಾರಿ ಹೊತ್ತಿ ಉರಿದ ಘಟನೆ ಮುಧೋಳ ತಾಲ್ಲೂಕಿನ ಲೋಕಾಪುರ ಸಮೀಪದ ದಿ ವಿಲೇಜ್ ಹೋಟೆಲ್ ಬಳಿ ನಡೆದಿದೆ. ಗಂಗಾವತಿಯಿಂದ ಕೊಲ್ಲಾಪುರಕ್ಕೆ ಸುಮಾರು 30 ಟನ್ ಅಕ್ಕಿ ತುಂಬಿಕೊಂಡು ಹೊರಟಿದ್ದ ಲಾರಿ ರಾಜ್ಯ ಹೆದ್ದಾರಿ ಮಧ್ಯದಲ್ಲೇ ಬೆಂಕಿಗಾಹುತಿಯಾಗಿದೆ. ಟಯರ್ ಬ್ಲಾಸ್ಟ್ ಹಿನ್ನೆಲೆ ಲಾರಿಗೆ ಬೆಂಕಿ ತಗುಲಿರುವ ಶಂಕೆ ವ್ಯಕ್ತವಾಗಿದ್ದು, ಬೆಂಕಿ ಹತ್ತಿದ ಕೂಡಲೇ ಲಾರಿಯಿಂದ ಕೆಳಗಿಳಿದ ಚಾಲಕ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಸ್ಥಳಕ್ಕೆ ಅಗ್ನಿಶಾಮಕ ದಳದ ಸಿಬ್ಬಂದಿ ಆಗಮಿಸಿ, ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು. ಮುಧೋಳ ತಾಲ್ಲೂಕಿನ ಲೋಕಾಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

## ವ್ಯಕ್ತಿ ಸಾವು: ಮರಕ್ಕೆ ಕಟ್ಟಿ ಮಹಿಳೆ ಮೇಲೆ ಹಲ್ಲೆ

• ಉದಯವಾಹಿನಿ, ರಾಯಚೂರು

ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಜಾಲಹಳ್ಳಿಯಲ್ಲಿ ವ್ಯಕ್ತಿ ಯೊಬ್ಬರು ಅನುಮಾನಸ್ಪದವಾಗಿ ಮೃತಪಟ್ಟ ಕಾರಣ ಮೃತನ ಸಂಬಂಧಿಕರು ಮಹಿಳೆಯೊಬ್ಬಳನ್ನು ಗ್ರಾಮದಲ್ಲಿ ಮರಕ್ಕೆ ಕಟ್ಟಿಹಾಕಿ ಹಲ್ಲೆ ಮಾಡಿದ್ದಾರೆ. ಜಾಲಹಳ್ಳಿಯಲ್ಲಿ 20 ದಿನಗಳ ಹಿಂದೆ ರಂಗಪ್ಪ (45) ಮೂರ್ಛೆ ರೋಗದಿಂದ ಬಿದ್ದು ಮೃತಪಟ್ಟಿದ್ದರು. ಇದೇ ಗ್ರಾಮದ ಸಲುಗೆಯಿಂದ ಇದ್ದ ದಂಡಮ್ಮ ಅವಳೊಂದಿಗೆ ರಂಗಪ್ಪ ಹೋಗಿದ್ದ ಸಂದರ್ಭದಲ್ಲಿ ಸಾವಿಗೀಡಾಗಿದ್ದಾರೆ ಎಂದು ಆರೋಪಿಸಿ ಸಂಜೆ ರಂಗಪ್ಪನ ಸಂಬಂಧಿಕರು ಹಾಗೂ ಗ್ರಾಮದ ಕೆಲವರು ದಂಡಮ್ಮನ್ನು ಮರಕ್ಕೆ ಕಟ್ಟಿ ಹಾಕಿ ಹಲ್ಲೆ ಮಾಡಿದರು. ಗ್ರಾಮದಲ್ಲಿ ನೂರಾರು ಸಂಖ್ಯೆಯಲ್ಲಿ ಜನ ಸೇರಿದ್ದರೂ ಅವಳ ರಕ್ಷಣೆಗೆ ಯಾರು ಮುಂದಾಗಿರಲಿಲ್ಲ. ಮಹಿಳೆಯ ಮೇಲೆ ಹಲ್ಲೆ ನಡೆಸುತ್ತಿರುವ ಮಾಹಿತಿ ದೊರೆತ ತಕ್ಷಣ ಜಾಲಹಳ್ಳಿ ಠಾಣೆಯ ಪೊಲೀಸರು ಸ್ಥಳಕ್ಕೆ ತೆರಳಿ ಮಹಿಳೆಯ ರಕ್ಷಣೆ ಮಾಡಿದ್ದಾರೆ. ಮಹಿಳೆಯ ಮೇಲೆ ನಡೆಸಿದ ಆರೋಪಿಗಳ ಶೋಧ ನಡೆಸಿದ್ದಾರೆ.

## ಎರಡು ಜವಳಿ ಪಾರ್ಕ್‌ಗೆ ಅನುಮೋದನೆ

• ಉದಯವಾಹಿನಿ, ಚಿಕ್ಕಮಗಳೂರು

ಜಿಲ್ಲೆಯಲ್ಲಿ ಎರಡೂ ಜವಳಿ ಪಾರ್ಕ್ ತಲೆ ಎತ್ತುವ ಕಾಲ ಹತ್ತಿರವಾಗಿದೆ. ಕಡೂರು ಮತ್ತು ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಜಾಗ ಗುರುತಿಸಿದ್ದು, ಸರ್ಕಾರದಿಂದ ಅನುಮೋದನೆ ಕೂಡ ದೊರೆತಿದೆ. ಚಿಕ್ಕಮಗಳೂರು ತಾಲ್ಲೂಕಿನ ಲಕ್ಯಾ ಹೋಬಳಿಯ ಹಿರೇಗೌಜ ಮತ್ತು ಕಡೂರು ತಾಲ್ಲೂಕಿನ ಚೀಲನಹಳ್ಳಿ ಗ್ರಾಮದ ಬಳಿ ಜವಳಿ ಪಾರ್ಕ್ ಸ್ಥಾಪನೆಯಾಗಲಿವೆ. ಎರಡೂ ಕಡೆ ಜಾಗ ಗುರುತಿಸಿ ಸರ್ಕಾರಕ್ಕೆ ಜಿಲ್ಲಾಡಳಿತ ಪ್ರಸ್ತಾವನೆ ಸಲ್ಲಿಸಿತ್ತು. ಮಾರ್ಗಸೂಚಿಗಳ ಪ್ರಕಾರ ಪಿಪಿಪಿ ಮಾದರಿಯಲ್ಲಿ ಎರಡೂ ಕಡೆ ಏಕ ಕಾಲಕ್ಕೆ ಜವಳಿ ಪಾರ್ಕ್ ಸ್ಥಾಪಿಸಲು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಅನುಮೋದನೆ ನೀಡಿದೆ. ಈ ಯೋಜನೆಯ ಮುಂದಿನ ಪ್ರಕ್ರಿಯೆ ಆರಂಭಿಸುವಂತೆ ಕೈಮಗ್ಗ ಮತ್ತು ಜವಳಿ ಇಲಾಖೆಯ ಅಭಿವೃದ್ಧಿ ಆಯುಕ್ತರಿಗೆ ಕೈಗಾರಿಕೆ ಇಲಾಖೆ ಕಾರ್ಯದರ್ಶಿ ನಿರ್ದೇಶನ ನೀಡಿದ್ದಾರೆ. ಚಿಕ್ಕಮಗಳೂರು ತಾಲ್ಲೂಕಿನ ಹಿರೇಗೌಜ ಸರ್ವೆ ನಂಬರ್‌ನಲ್ಲಿ 15 ಎಕರೆ, ಕಡೂರು ತಾಲ್ಲೂಕಿನ ಚೀಲನಹಳ್ಳಿ ಬಳಿ 25 ಎಕರೆಯ ಸರ್ಕಾರಿ ಜಾಗವನ್ನು ಕೈಮಗ್ಗ ಮತ್ತು ಜವಳಿ ಇಲಾಖೆಗೆ ಜಿಲ್ಲಾಧಿಕಾರಿ ವರ್ಗಾಯಿಸಿದ್ದರು.

# ಮುಳವಾಡ ಏತ ನೀರಾವರಿ ಯೋಜನೆ

## ಬಾಕಿ ಕಾಮಗಾರಿಗೆ ಶೀಘ್ರ ಚಾಲನೆ: ಎಂ.ಬಿ. ಪಾಟೀಲ

• ಉದಯವಾಹಿನಿ, ವಿಜಯಪುರ

ಬಬಲೇಶ್ವರ ತಾಲ್ಲೂಕಿನ ನಿಡೋಣಿ, ಶೇಗುಣಸಿ ಸೇರಿದಂತೆ ನಾನಾ ಗ್ರಾಮಗಳ ಬಾಕಿ ಜಮೀನಿಗೆ ಮುಳವಾಡ ಏತ ನೀರಾವರಿ ಯೋಜನೆಯ 5ಎ ಮತ್ತು 5ಬಿ ಲಿಫ್ಟ್ ಮೂಲಕ ನೀರು ಒದಗಿಸುವ ಹಾಗೂ 15ನೇ ವಿತರಣೆ ಕಾಲುವೆ ಕಾಮಗಾರಿಗೆ ಅತೀ ಶೀಘ್ರದಲ್ಲಿ ಚಾಲನೆ ನೀಡಲಾಗುವುದು ಎಂದು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ.

ಜಲ ಸಂಪನ್ಮೂಲ ಸಚಿವನಾಗಿದ್ದಾಗ ಕೈಗೊಂಡ ನೀರಾವರಿ ಯೋಜನೆಗಳಿಂದಾಗಿ ಈ ಹಿಂದೆ ಕೃಷಿಗಾಗಿ ಹಿರಿಯರು ಪಡುತ್ತಿದ್ದ ಕಷ್ಟ ಈಗ ಇಲ್ಲ. ಬೇಸಿಗೆಯಲ್ಲಿ ತೋಟಗಾರಿಕೆ ಬೆಳೆ ರಕ್ಷಣೆಗಾಗಿ ರೈತರು ವ್ಯಯಿಸುತ್ತಿದ್ದ ಹಣ ಈಗ ಉಳಿತಾಯವಾಗಿದೆ. ಸಿಎಂ ಸಿದ್ಧರಾಮಯ್ಯ ಅವರ ಸಹಕಾರದಿಂದ ಈ ಕೆಲಸ ಸಾಧ್ಯವಾಗಿದೆ. ಜಲಸಂಪನ್ಮೂಲ ಸಚಿವನಾಗಿದ್ದಾಗ ನೀರಾವರಿಗಾಗಿ ರೂ. 58000 ಕೋ. ಖರ್ಚು ಮಾಡಿದ್ದೇವೆ. ಅಂದು ಮಾಡಿದ ಕೆಲಸ ಒಂದು ಫಲ ನೀಡುತ್ತಿದೆ. ಅಂತರ್ಜಲ ಹೆಚ್ಚಿ ಕೊಳವೆ ಭಾವಿಗಳು ಪುನಶ್ಚೇತನಗೊಂಡಿವೆ. ಈಗ ನಾನು ಕೈಗಾರಿಕೆ ಸಚಿವನಾಗಿ ಮಾಡಿರುವ ಕೆಲಸ ಗುರುತಿಸಿ ಬೆಂಗಳೂರು ಪ್ರೆಸ್‌ಕ್ಲಬ್ ಪ್ರಶಸ್ತಿ ನೀಡಿ ಗೌರವಿಸಿದೆ. ಈ ಗೌರವ ಬಬಲೇಶ್ವರ ಮತಕ್ಷೇತ್ರದ ಎಲ್ಲರಿಗೂ ಸಲ್ಲುತ್ತದೆ ಎಂದು ಅವರು ಹೇಳಿದರು.

**ಹೊಸ ಸಾಹಸಕ್ಕೆ ಸ್ಫೂರ್ತಿ**



ಉದಯವಾಹಿನಿ ಚಿತ್ರ

ಇಲ್ಲಿನ ಕಮರಿಮಠದ ಬಾಕಿ ಕೆಲಸಕ್ಕೆ ಕ್ರಮ ಕೈಗೊಳ್ಳಲಾಗುವುದು. ಸಂಗಾಪುರ ಎಸ್. ಎಚ್. ಗ್ರಾಮಕ್ಕೆ ರೂ. 2.20 ಕೋ. ವೆಚ್ಚದಲ್ಲಿ ಜಿನುಗು ಕೆರೆ ಮಂಜೂರು ಮಾಡಲಾಗಿದೆ. ಶೀಘ್ರದಲ್ಲಿ ಟೆಂಡರ್ ಕರೆದು ಕೆಲಸ ಪ್ರಾರಂಭಿಸಲಾಗುವುದು.

ನೀರಾವರಿ ಕೆಲಸದಿಂದ ರೈತರು ಪ್ರಗತಿ ಹೊಂದಿ ಹಣ ಕೂಡಿಸಿ ಗ್ರಾಮದಲ್ಲಿ ನನ್ನ ಮೂರ್ತಿ ಮಾಡಿದ್ದು ತಮ್ಮೆಲ್ಲರ ಅಭಿಮಾನಕ್ಕೆ ಸಾಕ್ಷಿ. ತಮಗೆ ನಾನು ಚಿರಋಣಿ. ತಮ್ಮ ಪ್ರೋತ್ಸಾಹ ಹೊಸ ಸಾಹಸಕ್ಕೆ ಸ್ಫೂರ್ತಿ ನೀಡುತ್ತಿದೆ ಎಂದು ಸಚಿವರು ಹೇಳಿದರು.

ಇದೇ ವೇಳೆ ಗ್ರಾಮದ ನಾನಾ ರೈತರು ತಾವು ಬೆಳೆದ ಬಾಳೆ, ಪಪ್ಪಾಯಿ, ಎಳನೀರು ಮತ್ತು ಬೆಂಗಳೂರಿನಲ್ಲಿ ಸನ್ಮಾನ ಮಾಡಲಾದ ಭಾವಚಿತ್ರ ನೀಡಿ ಸಚಿವರನ್ನು ಗೌರವಿಸಿದರು.

ಅಮರೇಶ ಸಾಲಿಮಠ ಪ್ರಾರ್ಥಿಸಿದರು. ಗೌಡಪ್ಪ ಗಲಗಲಿ ನಿರೂಪಿಸಿದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 01:30 ರಿಂದ 03:00 |
| ಗುಳಿಕ ಕಾಲ | ಬೆಳಿಗ್ಗೆ | 09:00 ರಿಂದ 10:30 |
| ಯಮಗಂಡ ಕಾಲ | ಬೆಳಿಗ್ಗೆ | 06:00 ರಿಂದ 07:30 |

**ಮೇಷ** ನಿಮ್ಮ ಕಚೇರಿಯನ್ನು ಬೇಗನೆ ಬಿಡಲು ಮತ್ತು ನೀವು ನಿಜವಾಗಿಯೂ ಆನಂದಿಸುವದನ್ನು ಮಾಡಲು ಪ್ರಯತ್ನಿಸಿ. ತಾತ್ಕಾಲಿಕ ಸಾಲಕ್ಕಾಗಿ ನಿಮ್ಮ ಬಳಿ ಬರುವವರನ್ನು ನಿರ್ಲಕ್ಷಿಸಿ.

**ವೃಷಭ** ನಿಮ್ಮ ದೈಹಿಕ ಬಲವನ್ನು ನಿರ್ವಹಿಸಲು ನೀವು ಕ್ರೀಡೆಯಲ್ಲಿ ಸಮಯ ಕಳೆಯುವ ಸಾಧ್ಯತೆಗಳಿವೆ. ಆಶೀರ್ವಾದ ಹಾಗೂ ಅದೃಷ್ಟ ನಿಮ್ಮ ಬಳಿ ಬರುತ್ತಿದ್ದ ಹಾಗೆ ನಿಮ್ಮ ಬಯಕೆಗಳು ಪೂರೈಸಲ್ಪಡುತ್ತವೆ.

**ಮಿಥುನ** ಒಬ್ಬ ಸ್ನೇಹಿತ ನಿಮ್ಮ ಮುಕ್ತ ಮನಸ್ಸನ್ನು ಪರೀಕ್ಷಿಸಬಹುದು. ನೀವು ನಿಮ್ಮ ಮೌಲ್ಯಗಳೊಂದಿಗೆ ರಾಜಿಯಾಗದಿರುವಂತೆ ಮತ್ತು ಸಕಾರಣವಾದ ನಿರ್ಧಾರಗಳನ್ನು ಕೈಗೊಳ್ಳುವಂತೆ ಎಚ್ಚರಿಕೆ ವಹಿಸಬೇಕು.

**ಕರ್ಕಾಟಕ** ನಿಮ್ಮ ಸಾಮಾನ್ಯ ಜ್ಞಾನದ ಜೊತೆಗೆ ನಿರಂತರ ಪ್ರಯತ್ನ ಖಂಡಿತವಾಗಿಯೂ ಯಶಸ್ಸು ತರುವುದರಿಂದ ತಾಳ್ಮೆಯಿಂದಿರಿ. ವ್ಯಾಪರದಲ್ಲಿ ಪ್ರಯೋಜನ ಅನೇಕ ವ್ಯಾಪಾರಿಗಳ ಮುಖದ ಮೇಲೆ ಸಂತೋಷವನ್ನು ತರಬಹುದು.

**ಸಿಂಹ** ಸಣ್ಣ ಸಣ್ಣ ವಿಷಯಗಳು ನಿಮ್ಮ ಮನಸ್ಸು ಕೆಡಿಸಲು ಬಿಡಬೇಡಿ. ಹಣ ನಿಮಗೆ ಅಗತ್ಯವಾಗಿದೆ ಆದರೆ ನಿಮ್ಮ ಸಂಬಂಧಗಳನ್ನು ಹಾಳು ಮಾಡುವಷ್ಟು ಹಣದ ಬಗ್ಗೆ ಗಂಭೀರವಾಗಬೇಡಿ.

**ಕನ್ಯಾ** ಇಂದು ನಿಮ್ಮ ಕೆಲಸದಲ್ಲಿ ಒಂದು ಪ್ರಗತಿಯನ್ನು ನೋಡಬಹುದು. ಸಮಾಜ ಸೇವೆ ಇಂದು ನಿಮ್ಮನ್ನು ಸೆಳೆಯುತ್ತವೆ. ಧರ್ಮಾರ್ಥ ಕಾರಣಕ್ಕಾಗಿ ನಿಮ್ಮ ಸಮಯ ವ್ಯಯಿಸಿದಲ್ಲಿ ಅಗಾಧವಾದ ವ್ಯತ್ಯಾಸ ಉಂಟುಮಾಡಬಹುದು.

**ತುಲಾ** ದಿನ ಸ್ನೇಹಿತರಿಂದ ಉತ್ತಮ ಸುದ್ದಿಯೊಡನೆ ಆರಂಭವಾಗುತ್ತದೆ. ಅನಿರೀಕ್ಷಿತ ಪ್ರಣಯ ಪ್ರಸಂಗಗಳು ನಿಮ್ಮ ಚೈತನ್ಯವನ್ನು ವೃದ್ಧಿಸುತ್ತದೆ. ನೀವು ಸ್ವಲ್ಪ ಪ್ರೀತಿ ಹಂಚಿಕೊಂಡಲ್ಲಿ ನಿಮ್ಮ ಪ್ರಿಯತಮೆ ನಿಮ್ಮ ದೇವತೆಯಾಗುತ್ತಾಳೆ.

**ವೃಶ್ಚಿಕ** ಕುಡಿಯುವ ಅಭ್ಯಾಸವನ್ನು ತೊಡೆದುಹಾಕಲು ಇದೊಂದು ಅತ್ಯಂತ ಪವಿತ್ರವಾದ ದಿನ. ನೀವು ವೈನ್ ಕುಡಿಯುವುದು ಆರೋಗ್ಯದ ಪ್ರಾಣಾಂತಿಕ ಶತ್ರು ಎಂದು ನೀವು ಅರ್ಥ ಮಾಡಿಕೊಳ್ಳಬೇಕು.

**ಧನಸ್ಸು** ನಿಮ್ಮ ಜ್ಞಾನ ಮತ್ತು ಒಳ್ಳೆಯ ಹಾಸ್ಯ ನಿಮ್ಮ ಬಳಿಯಿರುವ ಜನರನ್ನು ಆಕರ್ಷಿಸಬಹುದು. ನೀವು ಪ್ರಣಯದ ಆಲೋಚನೆಗಳು ಮತ್ತು ಹಿಂದಿನ ಕನಸುಗಳಲ್ಲಿ ಕಳೆದುಹೋಗುತ್ತೀರಿ.

**ಮಕರ** ಸ್ವಾನುಕಂಪದಲ್ಲಿ ಸಮಯ ವ್ಯರ್ಥ ಮಾಡದೇ ಜೀವನದ ಪಾಠಗಳನ್ನು ಕಲಿಯಲು ಪ್ರಯತ್ನಿಸಿ. ಒಬ್ಬ ಆಸಕ್ತಿದಾಯಕ ವ್ಯಕ್ತಿಯನ್ನು ಭೇಟಿ ಮಾಡುವ ಸಾಧ್ಯತೆಗಳಿವೆ.

**ಕುಂಭ** ಸಂಬಂಧಿಗಳು ನಿಮಗೆ ಅನಿರೀಕ್ಷಿತ ಉಡುಗೊರೆ ತಂದರೂ ನೀವೂ ಅವರಿಗೆ ಸಹಾಯ ಮಾಡಬೇಕೆಂದು ನಿರೀಕ್ಷಿಸಬಹುದು. ನಿಮ್ಮ ಪ್ರಿಯತಮೆ ಇಡೀ ದಿನ ನಿಮಗಾಗಿ ಪರಿತಪಿಸುತ್ತಾಳೆ.

**ಮೀನ** ನಿಮ್ಮ ಅಪಾರ ವಿಶ್ವಾಸ ಮತ್ತು ಸುಲಭದ ಕೆಲಸದ ವೇಳಾಪಟ್ಟಿ ಇಂದು ವಿಶ್ರಾಂತಿಗೆ ಸಾಕಷ್ಟು ಸಮಯ ನೀಡುತ್ತದೆ. ಆರ್ಥಿಕ ಭಾಗವು ಬಲಗೊಳ್ಳುವ ಪೂರ್ಣ ಸಾಧ್ಯತೆ ಇದೆ.

## ಒಂದೇ ದಿನ ಇಬ್ಬರು ರೈತರ ಆತ್ಮಹತ್ಯೆ

• **ಉದಯವಾಹಿನಿ ಬೀದರ್**

ಸಾಲ ತೀರಿಸಲಾಗದೆ ಮನನೊಂದು ಒಂದೇ ದಿನ ಜಿಲ್ಲೆಯ ಇಬ್ಬರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಭಾಲ್ಕಿ ತಾಲ್ಲೂಕಿನ ಖಾನಾಪೂರದ ಯುವ ರೈತ ಕಾರ್ತಿಕ್ (21) ಹಾಗೂ ಬಸವಕಲ್ಯಾಣ ತಾಲ್ಲೂಕಿನ ಇಲ್ಲಾಳ ಗ್ರಾಮದ ರೈತ ಜಗದೀಶ ರೆಡ್ಡಿ ಪಲ್ಲಾದ ರೆಡ್ಡಿ (49) ಮೃತ ರೈತರು.

ಕಾರ್ತಿಕ್ ಅವರು ಖಾನಾಪೂರದ ಅರಣ್ಯ ಪ್ರದೇಶದಲ್ಲಿ ಮರಕ್ಕೆ ನೇಣು ಹಾಕಿಕೊಂಡು ಜೀವ ತ್ಯಜಿಸಿದ್ದಾರೆ. ಜಮೀನು ಗುತ್ತಿಗೆ ಪಡೆದು ಬೇಸಾಯಕ್ಕಾಗಿ ಖಾಸಗಿ ಹಾಗೂ ಬ್ಯಾಂಕಿನಿಂದ ಒಟ್ಟು 4 ಲಕ್ಷ ಸಾಲ ಮಾಡಿಕೊಂಡಿದ್ದರು. ನಿರೀಕ್ಷಿಸಿದಷ್ಟು ಆದಾಯ ಬರದ ಕಾರಣ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಧನ್ನೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇನ್ನು, ಜಗದೀಶ ರೆಡ್ಡಿ ಅವರು ಬಾವಿಗೆ ಹಾರಿ ಜೀವ ಬಿಟ್ಟಿದ್ದಾರೆ. ಬ್ಯಾಂಕಿನಲ್ಲಿ 1.25 ಲಕ್ಷ ಹಾಗೂ ಕೈಸಾಲ ಮಾಡಿಕೊಂಡಿದ್ದರು. ರೇಷ್ಮೆ ಕೃಷಿಯಲ್ಲಿ ನಷ್ಟ ಉಂಟಾಗಿದ್ದರಿಂದ ಮನನೊಂದು ಆತ್ಮಹತ್ಯೆಗೆ ಶರಣಾಗಿದ್ದಾರೆ. ಮೃತರಿಗೆ ಪತ್ನಿ, ಮಗ, ಮಗಳು ಇದ್ದಾರೆ. ಮಂಠಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಎರಡೂ ಘಟನೆ ಮಂಗಳವಾರ ನಡೆದಿವೆ.

## ಭೀಕರ ಅಪಘಾತ : ಖಾಸಗಿ ಬಸ್ ಪಲ್ಟಿ ಬಾಲಕ ಸಾವು, ಐವರಿಗೆ ಗಾಯ

• **ಉದಯವಾಹಿನಿ ಕೊಪ್ಪಳ**

ಕೊಪ್ಪಳದಲ್ಲಿ ಭೀಕರವಾದ ಅಪಘಾತ ಸಂಭವಿಸಿದ್ದು ಬಸ್ ಒಂದು ನಿಯಂತ್ರಣ ಕಳೆದುಕೊಂಡು ಪಾರ್ಟಿಯಾದ ಪರಿಣಾಮ ಏಳು ವರ್ಷದ ಬಾಲಕ ನೊಬ್ಬ ಸಾವನ್ನಪ್ಪಿದ್ದು ಬಸ್ ನಲ್ಲಿದ್ದ ಐವರು ಪ್ರಯಾಣಿಕರು ಗಂಭೀರವಾಗಿ ಗಾಯಗೊಂಡಿರುವ ಘಟನೆ, ಯಲಬುರ್ಗಾ ತಾಲ್ಲೂಕಿನ ಹೊಸಳ್ಳಿ ಕ್ರಾಸ್ ಬಳಿ ನಡೆದಿದೆ. ಮೃತ ಬಾಲಕನನ್ನು ಬಾನಾಪುರದ ವಿವೇಕ್ (9) ಎಂದು ತಿಳಿದುಬಂದಿದ್ದು, ಬೆಂಗಳೂರಿನಿಂದ ಗಜೇಂದ್ರಗಡಕ್ಕೆ ತೆರಳುತ್ತಿದ್ದ ಬಾಲಾಜಿ ಟ್ರಾವೆಲ್ಸ್ ನ ಬಸ್ ಅಪಘಾತಕ್ಕೊಳಗಾಗಿದ್ದು, ಚಾಲಕನ ನಿರ್ಲಕ್ಷ್ಯವೇ ಈ ಘಟನೆಗೆ ಕಾರಣ ಎಂದು ತಿಳಿದುಬಂದಿದೆ.

ಬಸ್ಸಿನಲ್ಲಿ ಒಟ್ಟು 15 ಜನ ಪ್ರಯಾಣ ಮಾಡುತ್ತಿದ್ದರು, ಕೆಲವರಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದು, ಐದು ಜನರಿಗೆ ಗಂಭೀರ ಗಾಯಗಳಾಗಿವೆ. ಗಾಯಾಳುಗಳನ್ನು ಯಲಬುರ್ಗಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಬಸ್ ಚಾಲಕ ಪರಾರಿ ಪರಾರಿಯಾಗಿದ್ದು, ಯಲಬುರ್ಗಾ ಪೊಲೀಸ್ ಠಾಣೆ ಯಲ್ಲಿ ಪ್ರಕರಣ ದಾಖಲಾಗಿದೆ.

## ಕಾರಿನಲ್ಲಿ 1.15 ಕೋಟಿ ಹಣ ಪತ್ತೆ

• **ಉದಯವಾಹಿನಿ ಕಾರವಾರ**

ನಿರ್ಜನ ಪ್ರದೇಶದಲ್ಲಿ ನಿಲ್ಲಿಸಿದ್ದ ಕಾರಿನಲ್ಲಿ 1.15 ಕೋಟಿ ರೂ. ಪತ್ತೆಯಾದ ಘಟನೆ ಅಂಕೋಲದ ರಾಮನಗುಳಿ ಬಳಿಯ ರಾಷ್ಟ್ರೀಯ ಹೆದ್ದಾರಿ 66ರ ಪಕ್ಕದ ನಿರ್ಜನ ಪ್ರದೇಶದಲ್ಲಿ ನಡೆದಿದೆ. ನಿರ್ಜನ ಪ್ರದೇಶದಲ್ಲಿ ಕಾರನ್ನು ಪಾರ್ಕ್ ಮಾಡಲಾಗಿತ್ತು. ಈ ಬಗ್ಗೆ ಅಂಕೋಲಾ ಪೊಲೀಸರಿಗೆ ಸಾರ್ವಜನಿಕರಿಂದ ಮಾಹಿತಿ ಸಿಗುತ್ತಿದ್ದಂತೆ ಪರಿಶೀಲನೆಗೆ ಬಂದ ಪೊಲೀಸರು ಕಾರಿನ ಬಾಗಿಲು ಓಪನ್ ಮಾಡಿ ಪರಿಶೀಲನೆ ನಡೆಸಿದ ವೇಳೆ ಕಾರಿನಲ್ಲಿ ಕಬ್ಬಿಣದ ಬಾಕ್ಸ್ ಸಿಕ್ಕಿದ್ದು, ಅದನ್ನು ತೆರೆದು ನೋಡಿದಾಗ ಅದರಲ್ಲಿ 1.15 ಕೋಟಿ ಹಣ ಇರುವುದು ಕಂಡುಬಂದಿದೆ.

ಕೆಎ 51 ಎಮ್‌ಬಿ 9634 ನಂಬರ್ ಪ್ಲೇಟಿನ ಕಾರು ಇದಾಗಿದೆ. ಕಾರಿನ ರಿಜಿಸ್ಟ್ರೇಷನ್ ನಂಬರ್ ಅನ್ನು ಪರಿಶೀಲಿಸಿದಾಗ ಆಲ್ಟ್ರೋಜ್ ಕಾರು ಎಂದು ತೋರಿಸಿದ್ದು, ಮಡಿಕೇರಿ ಆರ್‌ಟಿಓ ಪಾಸಿಂಗ್ ಹೊಂದಿದೆ. ಅಸಲಿಗೆ ಇದು ಕ್ರೇಟಾ ಕಾರಾಗಿದ್ದು, ಈ ಕಾರಿನ ಬಾನೆಟ್, ಡಿಕ್ಕಿ ತೆರೆದ ಸ್ಥಿತಿಯಲ್ಲಿದ್ದು, ಕಾರಿನ ಸೀಟ್ ಕಿತ್ತು ಹೊರಗೆ ಬಿದ್ದಿರುವ ಸ್ಥಿತಿಯಲ್ಲಿ ಹಾಗೂ ಕಿಟಕಿ ಗಾಜುಗಳು ಒಡೆದ ಸ್ಥಿತಿಯಲ್ಲಿರುವುದು ಕಂಡುಬಂದಿದೆ. ಸದ್ಯ ಅಂಕೋಲ ಪೊಲೀಸರು ವಾಹನವನ್ನು ವಶಕ್ಕೆ ಪಡೆದು ಠಾಣೆಯಲ್ಲಿ ಇರಿಸಿದ್ದು ,ಯಾವುದೋ ದರೋಡೆ ಮಾಡಿ ಹಣ ಸಾಗಿಸುತ್ತಿರುವ ಅನುಮಾನ ವ್ಯಕ್ತಪಡಿಸಿದ್ದಾರೆ. ಅಂಕೋಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಎಂ.ಕಾಮ್ ಕನಸು ನನಸಾಗಿಸಲು ಸಂಜೆ ಕಾಲೇಜು

### ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ 44 ಕಾಲೇಜುಗಳಿದ್ದು, ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಯಲ್ಲಿ 16,201 ವಿದ್ಯಾರ್ಥಿಗಳಿದ್ದಾರೆ

• **ಉದಯವಾಹಿನಿ ಹಾವೇರಿ**

ಧಾರವಾಡದಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯದಿಂದ ಬೇರ್ಪಟ್ಟು ನೂತನವಾಗಿ ಶುರುವಾಗಿರುವ ಹಾವೇರಿ ವಿಶ್ವವಿದ್ಯಾಲಯ, ಉದ್ಯೋಗ ಹಾಗೂ ಇತರೆ ಕಾರಣಗಳಿಂದ ಉನ್ನತ ಶಿಕ್ಷಣದಿಂದ ದೂರವುಳಿದಿದ್ದ ವಿದ್ಯಾರ್ಥಿಗಳ ಕನಸು ನನಸಾಗಿಸಲು ಸಂಜೆ ಕಾಲೇಜು ಆರಂಭಿಸಿದೆ.

ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿರುವ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಸೌಲಭ್ಯ ಒದಗಿಸುವ ಉದ್ದೇಶ ದಿಂದ 2022ರಲ್ಲಿ ನೂತನ ವಿಶ್ವವಿದ್ಯಾಲಯ ಆರಂಭವಾಗಿದೆ. ಮೊದಲ ದಿನದಿಂದಲೂ ಸಾಕಷ್ಟು ಮೂಲ ಸೌಕರ್ಯಗಳ ಕೊರತೆ ಎದುರಿಸುತ್ತಿರುವ ವಿಶ್ವವಿದ್ಯಾಲಯ, ಸಂಕಷ್ಟದ ನಡುವೆಯೂ ವಿದ್ಯಾರ್ಥಿಗಳ ಭವಿಷ್ಯವನ್ನು ಗಟ್ಟಿಗೊಳಿಸಲು ಪ್ರಯತ್ನಿಸುತ್ತಿದೆ.

ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಜಿಲ್ಲೆಯಾದ್ಯಂತ 44 ಕಾಲೇಜುಗಳಿದ್ದು, ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಯಲ್ಲಿ 16,201 ವಿದ್ಯಾರ್ಥಿಗಳಿದ್ದಾರೆ. ಕೆರಿಮತ್ತಿಹಳ್ಳಿಯಲ್ಲಿರುವ ಮುಖ್ಯ ಕ್ಯಾಂಪಸ್‌ನಲ್ಲಿ 733 ವಿದ್ಯಾರ್ಥಿಗಳು, ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿದ್ದಾರೆ. 'ನಿರಂತರವಾಗಿ ಕಲಿಕೆ ಮುಂದುವರಿಸಿರುವ ವಿದ್ಯಾರ್ಥಿಗಳಿಗೆ ಮಾತ್ರ ವಿಶ್ವವಿದ್ಯಾಲಯದಿಂದ ಉಪಯೋಗವಾಗುತ್ತಿದೆ. ಕುಟುಂಬದ ಜವಾಬ್ದಾರಿ ಹೊತ್ತುಕೊಂಡಿರುವ ಹಲವರು, ಶಿಕ್ಷಣವನ್ನು ಅರ್ಧಕ್ಕೆ ಮೊಟಕೊಗೊಳಿಸಿ ನಾನಾ ಕೆಲಸ ಮಾಡುತ್ತಿದ್ದಾರೆ. 'ಸಂಜೆ ಕಾಲೇಜು ಆಗಿರುವುದರಿಂದ ವಿದ್ಯಾರ್ಥಿಗಳು, ಕೆರಿಮತ್ತಿಹಳ್ಳಿಯಲ್ಲಿರುವ ಕ್ಯಾಂಪಸ್‌ಗೆ ಬಂದು ಹೋಗಲು ತೊಂದರೆ ಆಗುತ್ತದೆ. ಹೀಗಾಗಿ, ಹಾವೇರಿ ನಗರದಲ್ಲಿರುವ ಗುದ್ದೆಪ್ಪ ಹಳ್ಳಿಕೇರಿ ಕಾಲೇಜಿನ ಕೊಠಡಿಯಲ್ಲಿಯೇ ತರಗತಿಗಳನ್ನು ಆರಂಭಿಸಲಾಗಿದೆ' ಎಂದರು.

**ಕನಸು ನನಸು**

**ಮಹಿಳೆಯರು, ಮದುವೆಯಾಗಿ ಕುಟುಂಬ ನಿರ್ವಹಣೆ ಮಾಡುತ್ತಿದ್ದಾರೆ. ಆದರೆ, ಇವರೆಲ್ಲರೂ ಉನ್ನತ ಶಿಕ್ಷಣ ಪಡೆಯಬೇಕೆಂಬ ಕನಸು ಕಾಣುತ್ತಿದ್ದಾರೆ ಇದಕ್ಕಾಗಿ, ದೂರ ಶಿಕ್ಷಣದ ವ್ಯವಸ್ಥೆ ಆರಂಭಿಸಿ' ಎಂದು ವಿದ್ಯಾರ್ಥಿಗಳು ಒತ್ತಾಯಿಸಿದ್ದರು. 'ದೂರ ಶಿಕ್ಷಣ ವ್ಯವಸ್ಥೆ ಸದ್ಯಕ್ಕೆ ಸಾಧ್ಯವಿಲ್ಲ' ಎಂದು ಹೇಳಿದ್ದ ವಿಶ್ವವಿದ್ಯಾಲಯ, ಉದ್ಯೋಗಸ್ಥರು ಹಾಗೂ ಗೃಹಿಣಿಯರ ಅನುಕೂಲಕ್ಕಾಗಿ ಇದೇ ಮೊದಲ ಬಾರಿಗೆ 'ಎಂ. ಕಾಮ್' ಕೋರ್ಸ್‌ಗಾಗಿ ಸಂಜೆ ಕಾಲೇಜು ಆರಂಭಿಸಿದೆ.**


ಉದಯವಾಹಿನಿ ಚಿತ್ರ

**ಪದವಿ ಮುಗಿಸಿರುವ ಹಲವು ವಿದ್ಯಾರ್ಥಿಗಳು, ವಿವಿಧ ಕಡೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರ ಬಡ್ತಿ ಹಾಗೂ ಇತರೆ ಸೌಲಭ್ಯಕ್ಕಾಗಿ ಎಂ.ಕಾಮ್ ಶಿಕ್ಷಣದ ಅಗತ್ಯವಿರುವುದು ಗಮನಕ್ಕೆ ಬಂದಿತ್ತು ಇದೇ ಕಾರಣಕ್ಕೆ ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಎಂ.ಕಾಮ್ ಸಂಜೆ ಕಾಲೇಜು ಶುರು ಮಾಡಲಾಗಿದೆ'**
**-ಪ್ರೊ. ಸುರೇಶ ಜಂಗಮಶೆಟ್ಟಿ, ಕುಲಪತಿ**

33 ವಿದ್ಯಾರ್ಥಿಗಳಿಗೆ ಪ್ರವೇಶಾತಿ 'ಎಂ.ಕಾಮ್ ಸಂಜೆ ಕಾಲೇಜು ಆರಂಭವಾಗುತ್ತಿದ್ದಂತೆ, 33 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದುಕೊಂಡಿದ್ದಾರೆ. ಉದ್ಯೋಗಸ್ಥರು, ಗೃಹಿಣಿಯರು, ಸ್ಪರ್ಧಾತ್ಮಕ ಪರೀಕ್ಷೆ ತಯಾರಿ ನಡೆಸುತ್ತಿರುವವರು ಇವರಾಗಿದ್ದಾರೆ. ಇವರಲ್ಲಿ 28 ವಿದ್ಯಾರ್ಥಿನಿಯರು ಇರುವುದು ವಿಶೇಷ' ಎಂದು ಕುಲಸಚಿವ ಎಸ್.ಟಿ.ಬಾಗಲಕೋಟೆ ಹೇಳಿದರು.

**ವಿದ್ಯಾರ್ಥಿಗಳ ಭವಿಷ್ಯವನ್ನು ಗಟ್ಟಿಗೊಳಿಸಲು ಪ್ರಯತ್ನ**

2024ರ ಅಕ್ಟೋಬರ್‌ನಿಂದಲೇ ತರಗತಿಗಳು ಆರಂಭವಾಗಿವೆ. ಸಂಜೆ 5.30 ಗಂಟೆಯಿಂದ ರಾತ್ರಿ 8.30 ಗಂಟೆಯವರೆಗೆ ತರಗತಿಗಳು ನಡೆಯಲಿವೆ. ನಿವೃತ್ತ ಪ್ರಾಧ್ಯಾಪಕ ಆರ್.ಎಂ. ತೆಂಬದ ಅವರನ್ನು ಸಂಯೋಜಕರನ್ನಾಗಿ ನಿಯೋಜಿಸಲಾಗಿದೆ. ಅವರ ಜೊತೆಯಲ್ಲಿ ಇಬ್ಬರು ಪ್ರಾಧ್ಯಾಪಕರಿಗೆ ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಾರೆ' ಎಂದು ತಿಳಿಸಿದರು.

ವಿಶ್ವವಿದ್ಯಾಲಯದಲ್ಲಿ ಹಗಲಿನಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಕಲಿಕೆಗೂ, ಸಂಜೆ ಕಾಲೇಜು ವಿದ್ಯಾರ್ಥಿಗಳ ಕಲಿಕೆಗೂ ಯಾವುದೇ ವ್ಯತ್ಯಾಸವಿಲ್ಲ. ಇಬ್ಬರಿಗೂ ಒಂದೇ ಪಠ್ಯಕ್ರಮವಿದೆ. ಪರೀಕ್ಷೆಯೂ ಏಕಕಾಲದಲ್ಲಿ ನಡೆಯಲಿದೆ. ಹೀಗಾಗಿ, ಸಂಜೆ ಕಾಲೇಜು ಎಂಬ ತಾರತಮ್ಯ ಇರುವುದಿಲ್ಲ. ಇದೇ ಕಾರಣಕ್ಕೆ ಸಂಜೆ ಕಾಲೇಜಿಗೆ ವಿದ್ಯಾರ್ಥಿಗಳಿಂದ ಉತ್ತಮ ಸ್ಪಂದನೆ ಸಿಕ್ಕಿದೆ' ಎಂದು ಹೇಳಿದರು.

ಪ್ರೊ. ಸುರೇಶ ಜಂಗಮಶೆಟ್ಟಿ ಪ್ರೊ. ಸುರೇಶ ಜಂಗಮಶೆಟ್ಟಿ ಕುಲಪತಿ ಹಾವೇರಿ ವಿಶ್ವವಿದ್ಯಾಲಯ ಪ್ರಾಯೋಗಿಕವಾಗಿ ಮೊದಲ ಬಾರಿ ಸಂಜೆ ಕಾಲೇಜು ಆರಂಭಿಸಲಾಗಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಕೋರ್ಸ್‌ಗಳಿಗಾಗಿ ಸಂಜೆ ಕಾಲೇಜು ಆರಂಭಿಸಲು ಚಿಂತನೆ ನಡೆಸಲಾಗುವುದು ಆರ್. ಎಂ. ತೆಂಬದ ಸಂಯೋಜಕ ಎಂ.ಕಾಮ್ ಸಂಜೆ ಕಾಲೇಜು ಸಂಜೆ ಕಾಲೇಜಿಗೆ ಉತ್ತಮ ಸ್ಪಂದನೆಯಿದ್ದು ವಿಷಯಗಳನ್ನು ಕಲಿಯಲು ವಿದ್ಯಾರ್ಥಿಗಳು ಹೆಚ್ಚಿನ ಆಸಕ್ತಿ ತೋರುತ್ತಿದ್ದಾರೆ.

ಉದ್ಯೋಗಿಗಳು ಗೃಹಿಣಿಯರಿಗೆ ಈ ಕೋರ್ಸ್ ಅನುಕೂಲವಾಗಿದೆ ಭಾವನಾ ಪಾವಲಿ ವಿದ್ಯಾರ್ಥಿನಿಹಗಲಿನಲ್ಲಿ ಕಾಲೇಜಿಗೆ ಹೋಗಿ ಕಲಿಯಲು ಸಾಧ್ಯವಿರಲಿಲ್ಲ. ಸಂಜೆ ಕಾಲೇಜು ಆರಂಭಿಸಿದಕ್ಕೆ ಖುಷಿಯಾಯಿತು. ಸಂಜೆ ನನ್ನ ಬಿಡುವಿನ ಅವಧಿಯಲ್ಲಿ ಕಾಲೇಜಿಗೆ ಬಂದು ಹೋಗುತ್ತಿದ್ದೇನೆ.

## ಸ್ವಾಮಿ ವಿವೇಕಾನಂದರ ಜಯಂತಿ ಆಚರಣೆ

• **ಉದಯವಾಹಿನಿ ಚಿತ್ರದುರ್ಗ**

ತಾಲ್ಲೂಕಿನ ಗುಡ್ಡದ ರಂಗವ್ವನಹಳ್ಳಿಯ ದಾವಣಗೆರೆ ವಿಶ್ವವಿದ್ಯಾನಿಲಯ ಜ್ಞಾನ ಗಂಗೋತ್ರಿ ಸ್ನಾತಕೋತ್ತರ ಕೇಂದ್ರದ ಸಭಾಂಗಣದಲ್ಲಿ ಈಚೆಗೆ ಸ್ವಾಮಿ ವಿವೇಕಾನಂದರ 162ನೇ ಜಯಂತಿ ಆಚರಿಸಲಾಯಿತು. ದಾವಣಗೆರೆ ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ ಜ್ಞಾನ ಗಂಗೋತ್ರಿ, ರಾಷ್ಟ್ರೀಯ ಸೇವಾ ಯೋಜನೆ 1 ಮತ್ತು 2 ಘಟಕ, ಚಿತ್ರದುರ್ಗ ವೈದ್ಯಕೀಯ ಕಾಲೇಜು ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ಸ್ವಾಮಿ ವಿವೇಕಾನಂದರ 162ನೇ ಜಯಂತಿ ಕಾರ್ಯಕ್ರಮದಲ್ಲಿ ಸ್ವಾಮಿ ವಿವೇಕಾನಂದರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ನಂತರ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಸ್ನಾತಕೋತ್ತರ ಕೇಂದ್ರಕ್ಕೆ ಕ್ರೀಡಾ ಸಾಮಾಗ್ರಿಗಳನ್ನು ಪಡೆಯಲಾಯಿತು.

ದಾವಣಗೆರೆ ವಿಶ್ವವಿದ್ಯಾನಿಲಯ ಪ್ರಾಧ್ಯಾಪಕ ಡಾ.ಸ್ವಾಮಿ ಸ್ವಾಮಿ ವಿವೇಕಾನಂದರ ಕುರಿತು ಉಪನ್ಯಾಸ ನೀಡಿ, ಸ್ವಾಮಿ ವಿವೇಕಾನಂದರ 162ನೇ ಜಯಂತಿಯನ್ನು ಆಚರಿಸುತ್ತಿದ್ದೇವೆ. ವಿವೇಕಾನಂದರು ವಿಶ್ವದ ಯೂತ್ ಐಕಾನ್ ಆಗಿದ್ದು, ಅವರ ಚಿಂತನೆಗಳನ್ನು ಆಳವಡಿಸಿಕೊಳ್ಳಬೇಕು ಎಂದು ಹೇಳಿದರು.


ಉದಯವಾಹಿನಿ ಚಿತ್ರ

ಕಾರ್ಯಕ್ರಮದ ಅಂಗವಾಗಿ ನಡೆಸಲಾದ ಕ್ರೀಡೆಗಳಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣಾ ಕಾರ್ಯಕ್ರಮವನ್ನು ಎನ್‌ಎಸ್‌ಎಸ್ ಘಟಕ-1ರ ಕಾರ್ಯಕ್ರಮಾಧಿಕಾರಿ ಡಾ.ಎಂ.ಸುಂದರಂ ನಿರ್ವಹಿಸಿದರು. ಎನ್‌ಎಸ್‌ಎಸ್ ಘಟಕ-2ರ ಕಾರ್ಯಕ್ರಮಾಧಿಕಾರಿ ಬಿ.ಟಿ.ನಿವೇದಿತಾ ನಿರೂಪಿಸಿದರು.

**ನಮ್ಮ ದೇಶದ ಶಕ್ತಿ ಯುವಕರು. ಇಂದಿನ ಯುವಕರಿಗೆ ವಿದ್ಯೆ ಕಲಿಸುವ ಬಗ್ಗೆ ಉತ್ತಮ ಮಾರ್ಗದರ್ಶಕರು ಸಿಗುತ್ತಿಲ್ಲ**
**-ಡಾ.ಯುವರಾಜ್, ವೈದ್ಯಕೀಯ ಕಾಲೇಜು ನಿರ್ದೇಶಕ**

ಕಾರ್ಯಕ್ರಮದಲ್ಲಿ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಡಾ.ಸತ್ಯನಾರಾಯಣ, ಸ್ನಾತಕೋತ್ತರ ಕೇಂದ್ರದ ಡಾ.ರಾಜೇಂದ್ರ ಪ್ರಸಾದ್, ಎಸ್, ಡಾ. ಭೀಮಾಶಂಕರ ಜೋಶಿ, ಡಾ.ರೂಪೇಶ್ ಕುಮಾರ್.ಆರ್, ಡಾ. ಮಂಜುನಾಥ್, ಡಾ. ಉಷಾ ಹಾಗೂ ಕಛೇರಿ ಅಧೀಕ್ಷಕರಾದ ಗಿರಿಜಮ್ಮ, ಅಧ್ಯಾಪಕ ಮತ್ತು ಅಧ್ಯಾಪಕೇತರ ಸಿಬ್ಬಂದಿ ಮತ್ತು ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಬಾರ ಎತ್ತುವ ಸ್ಪರ್ಧೆಗೆ ಚಾಲನೆ ನೀಡಿದ ಉಮೇಶ್ ಮುದ್ನಾಳ್

• **ಉದಯವಾಹಿನಿ ಯಾದಗಿರಿ**

ನಿಜಶರಣ ಅಂಬಿಗರ ಜಯಂತಿ, ಗಣರಾಜ್ಯೋತ್ಸವ ಪ್ರಯುಕ್ತ ಯಾದಗಿರಿ ಸಮೀಪದ ಬಲ್ಕಲ್ ಗ್ರಾಮದಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ ಗ್ರಾಮ ಘಟಕದಿಂದ ಆಯೋಜಿಸಿದ ಬಾರ ಎತ್ತುವ ಸ್ಪರ್ಧೆಯನ್ನ ಅಖಿಲ ಭಾರತ ಕರ್ನಾಟಕ ಸಮಿತಿಯ ರಾಜ್ಯ ಸಂಘಟನಾ ಕಾರ್ಯದರ್ಶಿ ಉಮೇಶ್ ಮುದ್ನಾಳ್ ಅವರು ಉದ್ಘಾಟಿಸಿದರು.

ಇದೇ ವೇಳೆ ಮಾತನಾಡಿದ ಉಮೇಶ್ ಅವರು ಇತ್ತೀಚಿನ ದಿನಗಳಲ್ಲಿ ಯುವಕರು ಹೆಚ್ಚಾಗಿ ದುಶ್ಚಟಗಳ ದಾಸರಾಗ್ತಿದ್ದಾರೆ. ಆದರೆ ಬಲು ಕಷ್ಟದ ಬಾರ ಎತ್ತುವ ಸ್ಪರ್ಧೆ ಆಯೋಜನೆ ಮಾಡಲಾಗಿತ್ತು. ಸಾಕಷ್ಟು ಯುವಕರು ಬಾರ ಎತ್ತುವ ಸ್ಪರ್ಧೆಯಲ್ಲಿ ಭಾಗಿಯಾಗಿದ್ರು. ಇಂತಹ ಗ್ರಾಮೀಣ ಕ್ರೀಡೆ ಗುರುತಿಸಿ ಜಿಲ್ಲಾಡಳಿತದಿಂದ ಸನ್ಮಾನಿಸಬೇಕು ಅಂತ ಜಿಲ್ಲಾಡಳಿತಕ್ಕೆ ಒತ್ತಾಯಿಸಿದ್ದರು. ಇನ್ನೂ ಗ್ರಾಮೀಣ ಕ್ರೀಡೆ ಬಾರ ಎತ್ತುವ ಸ್ಪರ್ಧೆಯಲ್ಲಿ ನಿಜಶರಣ ಅಂಬಿಗರ ಚೌಡಯ್ಯ ಗ್ರಾಮ ಘಟಕ ವಿಶೇಷ ಬಹುಮಾನ ನೀಡಿ ಸನ್ಮಾನಿಸಿತ್ತು. 235 ಕೆಜಿ ಬಾರ ಎತ್ತಿರುವ ಮರೆಪ್ಪ ಶಾರದಳ್ಳಿ ಇತನಿಗೆ ಪ್ರಥಮ ಬಹುಮಾನ ಐದು ತೊಲೆ ಬೆಳ್ಳಿ ಖಡ್ಗ, ಒಂದು ಸಾವಿರ ನಗದು ಬಹುಮಾನ ನೀಡಲಾಯ್ತು. 180 ಕೆ ಜಿ ಬಾರ ಎತ್ತಿರುವ ವೆಂಕಟೇಶ ಶಾರದಳ್ಳಿ ಇತನಿಗೆ ದ್ವಿತೀಯ ಬಹುಮಾನ ಒಂದು ತೊಲೆ ಬೆಳ್ಳಿ ಉಂಗುರ, ಎರಡು ಸಾವಿರ ನಗದು ಬಹುಮಾನ ನೀಡಲಾಯ್ತು. ಮೂರನೇ ಬಹುಮಾನ ಪಡೆದ ಸುಭಾಷ್ ಬಲ್ಕಲ್ ಇತನಿಗೆ ಒಂದು ಸಾವಿರ ನಗದು ಬಹುಮಾನ ನೀಡ ಗೌರವಿಸಲಾಯ್ತು. ಇದೇ ರೀತಿ ಗ್ರಾಮೀಣ ಕ್ರೀಡೆಗೆ ಪ್ರೋತ್ಸಾಹಿಸಿದಾಗ ಮಾತ್ರ ಗ್ರಾಮೀಣ ಕ್ರೀಡೆ ಉಳಿಯಲು ಸಾಧ್ಯವೆಂದು ಹೇಳಿದ್ದರು.


ಉದಯವಾಹಿನಿ ಚಿತ್ರ

## ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕೆ ಭೂಮಿಪೂಜೆ

• **ಉದಯವಾಹಿನಿ, ಅಥಣಿ**

ಗ್ರಾಮೀಣ (ಸಂಕೋನಟ್ಟಿ) ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಬಾಸಿಂಗಿ ತೋಟ, ಹೊಸಟ್ಟಿ, ಮಸರಗುಪ್ಪಿ, ದೇವರಡ್ಡೇರಹಟ್ಟಿ, ತಂಗಡಿ ರಸ್ತೆ ಗಣೇಶನಗರ ಸೇರಿದಂತೆ ಸುಮಾರು 1 ಕೋಟಿ ವೆಚ್ಚದಲ್ಲಿ 5 ನೂತನ ಅಂಗನವಾಡಿ ಕಟ್ಟಡಗಳ ಕಾಮಗಾರಿಗಳಿಗೆ ಕಾಂಗ್ರೆಸ್ ಯುವ ನಾಯಕ ಚಿದಾನಂದ ಸವದಿ ಅವರ ನೇತೃತ್ವದಲ್ಲಿ ಅಥಣಿ ಗ್ರಾಮೀಣ (ಸಂಕೋನಟ್ಟಿ) ಗ್ರಾ ಪಂ ಅಧ್ಯಕ್ಷ ಶಂಕರ ಗಡದೆ ಅವರು ಉಪಾಧ್ಯಕ್ಷ ಸದಸ್ಯರು ಹಾಗೂ ಮುಖಂಡರ ಸಮ್ಮುಖದಲ್ಲಿ ಭೂಮಿ ಪೂಜೆ ನೆರವೇರಿಸಿದರು.

**1 ಕೋಟಿ ವೆಚ್ಚದಲ್ಲಿ 5 ನೂತನ ಅಂಗನವಾಡಿ**

ಕಾಂಗ್ರೆಸ್ ಯುವ ನಾಯಕ ಚಿದಾನಂದ ಸವದಿ ಮಾತನಾಡಿ ನಮ್ಮ ತಂದೆ ಶಾಸಕರಾದ ಲಕ್ಷ್ಮಣ ಸವದಿ ಅವರ ವಿಶೇಷ ಪ್ರಯತ್ನದಿಂದ ತಲಾ 20 ಲಕ್ಷ ರೂಗಳ ವೆಚ್ಚದಲ್ಲಿ ಅಥಣಿ ಗ್ರಾಮೀಣ (ಸಂಕೋನಟ್ಟಿ) ಗ್ರಾಪಂ ವ್ಯಾಪ್ತಿಯಲ್ಲಿ ಸುಸಜ್ಜಿತವಾದ 5 ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಚಾಲನೆ ನೀಡಲಾಗಿದೆ.

ಈ ಕ್ಷೇತ್ರದ ಸವಾರ್ಂಗೀಣ ಅಭಿವೃದ್ಧಿಗೆ ಕಂಕಣ ಬದ್ಧರಾಗಿದ್ದು ಮುಂದಿನ ದಿನಗಳಲ್ಲಿ ಸರ್ಕಾರದಿಂದ ಹೆಚ್ಚಿನ ಅನುದಾನ ತರುವ ಮೂಲಕ ರಾಜ್ಯದಲ್ಲಿಯೇ ಮಾದರಿ ಮತಕ್ಷೇತ್ರವನ್ನಾಗಿಸುವ ಗುರಿ ಹೊಂದಿದ್ದಾರೆ ಎಂದು ತಿಳಿಸಿದರು.


ಉದಯವಾಹಿನಿ ಚಿತ್ರ

ಈ ವೇಳೆ ಅಥಣಿ ಗ್ರಾಮೀಣ ಗ್ರಾಪಂ ಅಧ್ಯಕ್ಷ ಶಂಕರ ಗಡದೆ ಮಾತನಾಡಿ ನಮ್ಮ ಶಾಸಕರಾದ ಲಕ್ಷ್ಮಣ ಸವದಿ ಅವರು ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರದಿಂದ ಸಾಕಷ್ಟು ಅನುದಾನ ಬಿಡುಗಡೆ ಮಾಡಿಸಲು ವಿಶೇಷ ಪ್ರಯತ್ನ ಮಾಡುತ್ತಿದ್ದಾರೆ.


ಅವರ ವಿಶೇಷ ಪ್ರಯತ್ನದಿಂದ ಮತಕ್ಷೇತ್ರಕ್ಕೆ ಸಾಕಷ್ಟು ಅನುದಾನ ಬಿಡುಗಡೆ ಆಗುತ್ತಿದೆ. ಮುಂದಿನ ದಿನಮಾನಗಳಲ್ಲಿ ಅಥಣಿ ಮತಕ್ಷೇತ್ರವು ನಂದನವನ ಆಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

## ಗೃಹ ಬಳಕೆ ಅಡುಗೆ ಅನಿಲಗಳು, ವಾಣಿಜ್ಯ ಉಪಯೋಗಕ್ಕೆ ಆಕ್ರಮ ಸಾಗಾಟ

• **ಉದಯವಾಹಿನಿ, ಚಿಂಚೋಳಿ**

ತಾಲ್ಲೂಕು ಸೇರಿದಂತೆ ಗ್ರಾಮೀಣ ಪ್ರದೇಶಗಳಲ್ಲಿಯು ಸಹ ಗೃಹ ಬಳಕೆಗೆ ಉಪಯೋಗಿಸುವ ಅಡುಗೆ ಅನಿಲ ಸಿಲಿಂಡರ್ ಗಳು ಆಕ್ರಮವಾಗಿ ವಾಣಿಜ್ಯ ಉಪಯೋಗಕ್ಕೆ ಮಾರಾಟ ಮಾಡುತ್ತಿರುವುದರಿಂದ ಗೃಹ ಬಳಕೆ ಗ್ರಾಹಕರಿಗೆ ಅಡುಗೆ ಅನಿಲ ಸಿಗದೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ತಕ್ಷಣವೇ ಸೂಕ್ತ ತನಿಖೆ ನಡೆಸಿ ತಪ್ಪಿಸ್ಥರ ವಿರುದ್ಧ ಕ್ರಮಕ್ಕೈಗೊಳ್ಳುವಂತೆ ರಾಜ್ಯ ಮಾಹಿತಿ ಹಕ್ಕು ಸಾಮಾಜಿಕ ಕಾರ್ಯಕರ್ತರ ವೇದಿಕೆಯ ತಾಲ್ಲೂಕಾಧ್ಯಕ್ಷ ಅನೀಲಕುಮಾರ ಬೀರಾದಾರ ಒತ್ತಾಯಿಸಿದರು.

ಪಟ್ಟಣದ ತಹಸೀಲ್ ಕಛೇರಿಯಲ್ಲಿ ರಾಜ್ಯ ಮಾಹಿತಿ ಹಕ್ಕು ಮತ್ತು ಸಾಮಾಜಿಕ ಕಾರ್ಯಕರ್ತರ ವೇದಿಕೆ ವತಿಯಿಂದ ಆಕ್ರಮ ಗೃಹ ಬಳಕೆ ಅನಿಲಗಳು ಆಕ್ರಮವಾಗಿ ಮಾರಾಟ ಸಾಗಾಣಿಕೆಗೆ ಕಡಿವಾಣ ಹಾಕಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ತಹಸೀಲ್ದಾರ್ ಅವರಿಗೆ ಮನವಿಪತ್ರ ಸಲ್ಲಿಸಿ ಮಾತನಾಡಿದ ಅವರು, ತಾಲ್ಲೂಕಿನಲ್ಲಿ ಅಹಲ್ಯ ಇಂಡಿಯನ್ ಗ್ಯಾಸ್ ಮಾತ್ರ ಅನುಮತಿ ಪಡೆದುಕೊಂಡಿದ್ದೆ ಆದರೆ ತಾಲ್ಲೂಕಿನಾದ್ಯಂತ ಆಕ್ರಮವಾಗಿ ವಾಣಿಜ್ಯಕ್ಕಾಗಿ ಸಾಗಾಟ ಮಾಡುವವರು ಯಾರು ಇದರ ಹಿಂದೆ ಯಾರ ಕೈವಾಡವಿದೆ ಎಂಬುವುದು ಸೂಕ್ತ ತನಿಖೆ ನಡೆಸಿ ಕ್ರಮಕೇಗೊಳ್ಳಬೇಕು.


ಉದಯವಾಹಿನಿ ಚಿತ್ರ

ಗೃಹ ಬಳಕೆ ಅಡುಗೆ ಅನಿಲಗಳು ವಾಣಿಜ್ಯಕ್ಕೆ ಆಕ್ರಮವಾಗಿ ಮಾರಾಟ ಮಾಡುತ್ತಿರುವುದರಿಂದ ಗೃಹ ಬಳಕೆ ಗ್ರಾಹಕರಿಗೆ ಸಿಗದೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಆದರೆ ವಾಣಿಜ್ಯಕ್ಕಾಗಿಯೇ ಬಳಕೆ ಮಾಡುವ ಅನಿಲಗಳು ಬೇರೆ ಇರುತ್ತವೆ ಆದರೆ ಅಂಥಹ ಅನಿಲಗಳು ಮಾರಾಟ ಮಾಡದೆ ಜನಸಾಮಾನ್ಯರ ಮೇಲೆ ಹೊರೆಹಾಕಿ ಜನರ ರಕ್ತ ಹೀರುವ ಕೆಲಸ ಅಹಲ್ಯ ಗ್ಯಾಸ್ ಸಿಲಿಂಡರ್ ಅಂಗಡಿಯವರು ಮಾಡುತ್ತಿದ್ದಾರೆ ಇದಕ್ಕೆ ಅಧಿಕಾರಿಗಳ ಬೆಂಬಲ ಕೂಡ ಇರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ ಯಾವ ಅಧಿಕಾರಿಗಳು ಇಲ್ಲಿಯವರೆಗೆ ತಡೆಗಟ್ಟುವ ಕೆಲಸ ಮಾಡದಿರುವುದು ಮತ್ತು ಮನವಿಗಳು ನೀಡಿದರೂ ಕ್ಯಾರೆ ಅನ್ನದೆ ಇರುವ ಅಧಿಕಾರಿಗಳು ಕೆಲಸ ನಿರ್ವಹಿಸುತ್ತಿರುವುದು ತಾಲ್ಲೂಕಿನ ಅಭಿವೃದ್ಧಿಗೆ ಮತ್ತು ಬಡವರಿಗೆ ನ್ಯಾಯ ಸಿಗದೆ ಇರುವುದು ಹಿನ್ನಡೆಯಾಗಿದೆ. ಗೃಹ ಬಳಕೆ ಅಡುಗೆ ಅನಿಲ ವಿತರಣೆ ಮಾಡುವ ಸಂದರ್ಭ ಕೂಡ 10ರಿಂದ 20 ರೂ.ಹೆಚ್ಚುವರಿಯಾಗಿ ಗ್ರಾಹಕರಿಂದ ಪಡೆದುಕೊಂಡು ಜನರಿಗೆ ಮೋಸ ಮಾಡುತ್ತಿದ್ದಾರೆ ಒಟ್ಟಾರೆ ಹೇಳುವುದಾದರೆ ತಾಲ್ಲೂಕಿನಾದ್ಯಂತ ವಿತರಿಸುವ ಗೃಹ ಬಳಕೆ ಅಡುಗೆ ಅನಿಲಗಳು ನಿಯಮದಂತೆ ವಿತರಿಸಿ ಜನರಿಗೆ ಅನುಕೂಲ ಕಲ್ಪಿಸಿಕೊಡಬೇಕು ಹಾಗೂ ಆಕ್ರಮವಾಗಿ ಮಾರಾಟ ಮಾಡುವವರ ವಿರುದ್ಧ ಹಾಗೂ ತಪ್ಪಿಸ್ಥರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದರು. ವಕೀಲರು ಸೂರ್ಯಾಕಾಂತ ಗಾರಂಪಳ್ಳಿ, ಗೌತಮ್ ಮೌರ್ಯ ಇದ್ದರು.

**ಅಧಿಕಾರಿಗಳ ಜಾಣ ಕುರುಡು**

**ಗ್ಯಾಸ್ ಸಿಲಿಂಡರ್ ನಿಯಮವಳಿ ಪ್ರಕಾರ ವ್ಯಾಪಾರ ವಹಿವಾಟು ಹೋಟೆಲ್ ಡಾಭಾ ಇನ್ನಿತರ ವಾಣಿಜ್ಯಕ್ಕಾಗಿ ಗೃಹ ಬಳಕೆ ಅನಿಲ ವಿತರಿಸುವ ಪರವಾನಿಗೆ ಇಲ್ಲದಿದ್ದರು,ಗೃಹ ಬಳಕೆ ಅಡುಗೆ ಅನಿಲ ಅಕ್ರಮವಾಗಿ ಪ್ರತಿಯೊಂದರಲ್ಲಿ ವಾಣಿಜ್ಯಕ್ಕಾಗಿ ಬಳಕೆ ಮಾಡುವುದು ಅಧಿಕಾರಿಗಳು ನೋಡಿದರೂ ನೋಡದಂತೆ ಕುರುಡರಾಗಿ ಬಿಟ್ಟಿದ್ದಾರೆ.**

## ಕೃಷಿ ಡ್ರೋನ್ ಸಿಂಪಡಣೆ ಕೇಂದ್ರ ಸ್ಥಾಪನೆ

• **ಉದಯವಾಹಿನಿ, ಕಲಬುರಗಿ**

ಕರ್ನಾಟಕದಲ್ಲಿ ಇದೇ ಮೊದಲ ಬಾರಿಗೆ, ಕಲಬುರಗಿ ಜಿಲ್ಲೆಯ ರೇವೂರ್ ಬಿ, ಉಡಗಿ, ನಾಲವಾರ ಮತ್ತು ಕಮಲಾಪುರ ಹೋಬಳಿ ಮಟ್ಟದಲ್ಲಿ ನಾಲ್ಕು ಕೃಷಿ ಡ್ರೋನ್ ಸಿಂಪಡಣೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಕುರಿತು ಸಚಿವ ಪ್ರಿಯಾಂಕ್ ಖರ್ಗೆ ಅವರು ಮಾಹಿತಿ ನೀಡಿದ್ದು, ಈ ಯೋಜನೆಗೆ ನೆರವಾಗಲು 16 ಕೃಷಿ ಡ್ರೋನ್‌ಗಳು, 15 ಬ್ಯಾಟರಿ ಚಾಲಿತ ತ್ರಿಚಕ್ರ ವಾಹನಗಳು ಮತ್ತು ಮೂರು ಜನರೇಟರ್‌ಗಳು ಸೇರಿದಂತೆ 34 ಅತ್ಯಾಧುನಿಕ ಯಂತ್ರಗಳನ್ನು ಖರೀದಿಸಲಾಗಿದೆ. ಬಾಡಿಗೆ ಆಧಾರದ ಮೇಲೆ ಕೈಗೆಟುಕುವ ಡೋನ್ ಸೇವೆಗಳನ್ನು ಒದಗಿಸುವ ಮೂಲಕ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಬೆಂಬಲ ನೀಡುವುದು, ಕೀಟಗಳು ಹಾಗೂ ರೋಗ ಬಾಧೆಗಳನ್ನು ನಿರ್ವಹಿಸಲು ಸಹಾಯ ಮಾಡುವುದು, ಬೆಳೆ ನಷ್ಟ ತಗ್ಗಿಸುವುದು, ಇಳುವರಿ ಸುಧಾರಿಸುವುದು ಮತ್ತು ಕೀಟನಾಶಕಗಳು ಹಾಗೂ ರಸಗೊಬ್ಬರಗಳ ಅತ್ಯುತ್ತಮ ಬಳಕೆಯ ಮೂಲಕ ನಿಖರ ಕೃಷಿಯನ್ನು ಉತ್ತೇಜಿಸುವುದು ಈ ಯೋಜನೆಯ ಗುರಿಯಾಗಿದೆ ಎಂದರು. ಇದು ಕೃಷಿಯಲ್ಲಿನ ಕಾರ್ಮಿಕರ ಕೊರತೆಯಂತಹ ಪ್ರಮುಖ ಸಮಸ್ಯೆಗೆ ಕೂಡ ಪರಿಹಾರ ನೀಡುತ್ತದೆ. ಅಲ್ಲದೆ, ರೈತರು ಕೀಟನಾಶಕಗಳಿಗೆ ಒಡ್ಡಿಕೊಳ್ಳುವಂತಹ ಅಪಾಯವನ್ನು ಕಡಿಮೆ ಮಾಡುತ್ತದೆ ಮತ್ತು ಉತ್ತಮ ಸುರಕ್ಷತೆ ಹಾಗೂ ದಕ್ಷತೆಯನ್ನು ಖಾತರಿಪಡಿಸುತ್ತದೆ. ರೈತರು ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳು ಅಥವಾ ಕ್ಯೂಆರ್ ಕೋಡ್ ಗಳ ಮೂಲಕ ಈ ಸೇವೆಗಳನ್ನು ಸುಲಭವಾಗಿ ಪಡೆದುಕೊಳ್ಳಬಹುದು. ಈ ಕಾರ್ಯಕ್ರಮವನ್ನು ಜಿಲ್ಲೆಯ ಎಲ್ಲಾ 32 ಹೋಬಳಿಗಳಿಗೆ ವಿಸ್ತರಿಸುವ ಗುರಿ ಇದೆ ಎಂದು ಹೇಳಿದ್ದಾರೆ.

# ಕರ್ನಾಟಕ ವಿವಿಗೆ ತಟ್ಟಿದ ಪಠ್ಯ ಪುಸ್ತಕ ವಿವಾದದ ಬಿಸಿ

### • ಅರಿವೇ ಗುರು ಪ್ರಶಸ್ತಿ ಪ್ರದಾನ ಕಾರ್ಯಕ್ರಮ ರದ್ದು, ಅರ್ಧದಿಂದಲೇ ಹಿಂದಿರುಗಿದ ಗಣ್ಯರು

• **ಉದಯವಾಹಿನಿ ಧಾರವಾಡ**

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಏರ್ಪಡಿಸಿದ್ದ 'ಅರಿವೇ ಗುರು ಪ್ರಶಸ್ತಿ' ಪ್ರದಾನ ಸಮಾರಂಭಕ್ಕೆ ಬಿಎ ಪಠ್ಯ ವಿವಾದದ ಬಿಸಿ ತಟ್ಟಿದೆ. ವಿದ್ಯಾರ್ಥಿಗಳು ಪ್ರತಿಭಟನೆ ನಡೆಸುವುದಾಗಿ ಹೇಳಿದ್ದರಿಂದ ಕರ್ನಾಟಕ ವಿಶ್ವವಿದ್ಯಾಲಯ ಕಾರ್ಯಕ್ರಮ ರದ್ದುಗೊಳಿಸಿತು.

ಹೀಗಾಗಿ ಪ್ರಶಸ್ತಿ ಸ್ವೀಕರಿಸಲು ಆಗಮಿಸಿದ್ದ ಡಾ.ಚಂದ್ರಶೇಖರ ಕಂಬಾರ, ಪ್ರೊ.ಎನ್.ಎಂ.ಬುಜುರ್ಕೆ ಮತ್ತು ಡಾ.ವಿ.ಜಿ.ತಳವಾರ ಪ್ರಶಸ್ತಿ ಪಡೆಯದೇ ಹಿಂದಿರುಗಿದರು.ಪೊಲೀಸ್ ಬಂದೋಬಸ್ತ್‌ನಲ್ಲಿ ಕಾರ್ಯಕ್ರಮ ನಡೆಸಲು ಕವಿವಿ ನಿರ್ಧರಿಸಿತ್ತು.

ಆದರೆ ಕಾರ್ಯಕ್ರಮದಲ್ಲಿ ಗಲಾಟೆಗಳಾದರೆ ಸಮಸ್ಯೆ ಎಂದು ಕೊನೆ ಗಳಿಗೆಯಲ್ಲಿ ಕಾರ್ಯಕ್ರಮ ಮುಂದೂಡಿತು. ಪ್ರಶಸ್ತಿ ಸ್ವೀಕರಿಸಲು ಆಗಮಿಸಿದ್ದ ಅತಿಥಿಗಳು ಮಾತ್ರ ಪ್ರಶಸ್ತಿ ಪಡೆಯದೇ ಮರಳಿದ್ದು ಕವಿವಿ ಗೌರವಕ್ಕೆ ಧಕ್ಕೆ ಬಂದಂತಾಗಿದೆ.

**ಕವಿವಿ ಗೌರವಕ್ಕೆ ಧಕ್ಕೆ**

ಕರ್ನಾಟಕ ವಿಶ್ವವಿದ್ಯಾಲಯ ಸುವರ್ಣ ಮಹೋತ್ಸವ ಸಭಾಭವನದಲ್ಲಿ ಅರಿವೇ ಗುರು ಪ್ರಶಸ್ತಿ' ಪ್ರದಾನ ಸಮಾರಂಭ ಬುಧವಾರ (ಜ.29) ಆಯೋಜಿಸಿತ್ತು. ಆದರೆ ಕವಿವಿ ಬಿಎ ಪ್ರಥಮ ವರ್ಷದ ಪಠ್ಯದಲ್ಲಿ ದೇಶ ವಿರೋಧಿ ಲೇಖನ ಅಳವಡಿಸಿರುವ ಬಿಒಎಸ್ ಸಮಿತಿಯ ಅಧ್ಯಕ್ಷ ಪ್ರೊ. ಕೃಷ್ಣ ನಾಯಕ ಅವರು ವೇದಿಕೆ ಮೇಲೆ ಇರಬಾರದು ಎಂದು ಆಕ್ಷೇಪ ವ್ಯಕ್ತಪಡಿಸಿ ಕೆಲ ವಿದ್ಯಾರ್ಥಿ ಸಂಘಟನೆಗಳು ಕುಲಸಚಿವರಿಗೆ ಮನವಿ ಸಲ್ಲಿಸಿದ್ದರು.

ಪೊಲೀಸ್ ಬಂದೋಬಸ್ತ್‌ನಲ್ಲಿ ಕಾರ್ಯಕ್ರಮ ನಡೆಸಲು ಕವಿವಿ ನಿರ್ಧರಿಸಿತ್ತು. ಆದರೆ ಕಾರ್ಯಕ್ರಮದಲ್ಲಿ ಗಲಾಟೆಗಳಾದರೆ ಸಮಸ್ಯೆ ಎಂದು ಕೊನೆಗಳಿಗೆಯಲ್ಲಿ ಕಾರ್ಯಕ್ರಮ ಮುಂದೂಡಿತು. ಪ್ರಶಸ್ತಿ ಸ್ವೀಕರಿಸಲು ಆಗಮಿಸಿದ್ದ ಅತಿಥಿಗಳು ಮಾತ್ರ ಪ್ರಶಸ್ತಿ ಪಡೆಯದೇ ಮರಳಿದ್ದು ಕವಿವಿ ಗೌರವಕ್ಕೆ ಧಕ್ಕೆ ಬಂದಂತಾಗಿದೆ.


ಉದಯವಾಹಿನಿ ಚಿತ್ರ

ಕರ್ನಾಟಕ ವಿವಿ ವಿವಾದಾತ್ಮಕ ಪಠ್ಯ ಹಿಂದಕ್ಕೆ ಕರ್ನಾಟಕ ವಿಶ್ವವಿದ್ಯಾಲಯದ 2024-25ನೇ ಸಾಲಿನ ಬಿ.ಎ.ಪ್ರಥಮ ಸೆಮಿಸ್ಟರ್‌ನ ಬೆಳಗು ಕನ್ನಡ' ಪಠ್ಯ ಪುಸ್ತಕದಲ್ಲಿನ ವಿವಾದಾತ್ಮಕ ಲೇಖನವನ್ನು ಕರ್ನಾಟಕ ವಿವಿ ಹಿಂಪಡೆದು ಆದೇಶ ಹೊರಡಿಸಿದೆ.

ಈ ಕುರಿತು ಅಧಿಕೃತವಾಗಿ ಮಾಧ್ಯಮಗಳಿಗೆ ಹೇಳಿಕೆ ಬಿಡುಗಡೆ ಮಾಡಿರುವ ವಿವಿ ಕುಲಸಚಿವರು, ರಾಷ್ಟ್ರೀಯತೆ ಆಚರಣೆ ಕುರಿತು ರಾಮಲಿಂಗಪ್ಪ ಟಿ. ಬೇಗೂರ ಅವರು ಬರೆದ ಲೇಖನದಲ್ಲಿ ಕೆಲವು ಆಕ್ಷೇಪನಾರ್ಹ ಅಂಶಗಳಿವೆ ಎಂದು ಮಾಧ್ಯಮದವರು ಹಾಗೂ ಗಣ್ಯರು ಆಕ್ಷೇಪ ವ್ಯಕ್ತಪಡಿಸಿದ್ದರು. ಹೀಗಾಗಿ ವಿವಿಯ ವಿವಿಧ ಪ್ರಾಧಿಕಾರಗಳ ಸಭೆ ನಡೆಸಿ ತಕ್ಷಣದಿಂದಲೇ ಈ ಲೇಖನ ಹಿಂಪಡೆಯಲಾಗಿದೆ,' ಎಂದು ಸ್ಪಷ್ಟಪಡಿಸಿದ್ದಾರೆ.

**ಮೂವರಿಗೆ ಪ್ರಶಸ್ತಿ**

**ಕಲಾ ಕ್ಷೇತ್ರದಿಂದ ಡಾ.ಚಂದ್ರಶೇಖರ ಕಂಬಾರ ಅವರಿಗೆ, ಸಮಾಜ ವಿಜ್ಞಾನ ಕ್ಷೇತ್ರದಿಂದ ಡಾ.ವಿ.ಜಿ. ತಳವಾರ ಹಾಗೂ ವಿಜ್ಞಾನ ಕ್ಷೇತ್ರದಿಂದ ಕವಿವಿಯ ಗಣಿತ ವಿಜ್ಞಾನಿ ಪ್ರೊ.ಎನ್.ಎಂ. ಬುಜುರ್ಕೆ ಅವರಿಗೆ ಅರಿವೇ ಗುರು ಪ್ರಶಸ್ತಿ ನೀಡಿ ಸನ್ಮಾನಿಸಲು ಕರ್ನಾಟಕ ವಿಶ್ವವಿದ್ಯಾಲಯ ಮುಂದಾಗಿತ್ತು.**


- **ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ 'ಅರಿವೇ ಗುರು ಪ್ರಶಸ್ತಿ' ಪ್ರದಾನ ಸಮಾರಂಭ ರದ್ದು**
- **ವಿದ್ಯಾರ್ಥಿಗಳು ಪ್ರತಿಭಟನೆ ನಡೆಸುವುದಾಗಿ ಹೇಳಿದ್ದರಿಂದ ಕಾರ್ಯಕ್ರಮ ರದ್ದುಗೊಳಿಸಿದ ಕವಿವಿ**
- **ಪ್ರಶಸ್ತಿ ಪಡೆಯದೇ ಹಿಂದಿರುಗಿದ ಡಾ.ಚಂದ್ರಶೇಖರ ಕಂಬಾರ, ಪ್ರೊ.ಎನ್.ಎಂ.ಬುಜುರ್ಕೆ, ಡಾ.ವಿ.ಜಿ.ತಳವಾರ**

ಘಟಕ-1ರ ನಾಲ್ಕನೇ ಅಧ್ಯಾಯದ ಈ ಲೇಖನ ಕೈಬಿಟ್ಟು ಉಳಿದಂತೆ ಬೆಳಗು-1 ಪಠ್ಯಪುಸ್ತಕ ಮುಂದುವರಿಸಲು ವಿವಿ ನಿರ್ಧರಿಸಿದೆ. ಅಲ್ಲದೆ, ವಿದ್ಯಾರ್ಥಿಗಳ ಪರೀಕ್ಷೆ ಹಾಗೂ ತತ್ಸಂಬಂಧಿತ ಪೂರಕ ಕ್ರಮಗಳನ್ನು ಜಾರಿ ಮಾಡಲಾಗುತ್ತಿದೆ,' ಎಂದು ಕುಲಸಚಿವರು ತಿಳಿಸಿದ್ದಾರೆ.

# ಭಾರತ, ಚೀನಾಗೆ ಸುಂಕ ಬೆದರಿಕೆ ಹಾಕಿದ ಡೊನಾಲ್ಡ್ ಟ್ರಂಪ್

## ಅಮೆರಿಕಕ್ಕೆ ಹಾನಿ ಮಾಡುವ ಯಾವುದೇ ದೇಶಗಳ ಮೇಲೆ ಅಧಿಕ ಸುಂಕ ವಿಧಿಸುವುದಾಗಿ ನೂತನ ಅಧ್ಯಕ್ಷ ಡೊನಾಲ್ಡ್ ಟ್ರಂಪ್

**ವಾಷಿಂಗ್ಟನ್:** ಅಮೆರಿಕಕ್ಕೆ ಹಾನಿ ಮಾಡುವ ಯಾವುದೇ ದೇಶಗಳ ಮೇಲೆ ಅಧಿಕ ಸುಂಕ ವಿಧಿಸುವುದಾಗಿ ನೂತನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಅಮೆರಿಕದ ಸರಕುಗಳಿಗೆ ಭಾರತ, ಚೀನಾ, ಬ್ರೆಜಿಲ್ ಅಧಿಕ ಸುಂಕ ವಿಧಿಸುತ್ತಿರುವ ದೇಶಗಳೆಂದು ಗುರುತಿಸಿರುವ ಟ್ರಂಪ್, ಅಮೆರಿಕನ್ನರ ಹಿತ ಕಾಯಲು ನಮ್ಮ ದೇಶದ ಹಿತಸಾಕ್ತಿಗೆ ವಿರುದ್ಧ ನಿಲುವು ಹೊಂದಿರುವ, ಹಾನಿ ಮಾಡುವ ದೇಶಗಳ ಮೇಲೆ ಅಧಿಕ ಸುಂಕ ವಿಧಿಸಲಾಗುವುದು.. ಎಂದು ಎಚ್ಚರಿಕೆ ನೀಡಿದ್ದಾರೆ. ಅಮೆರಿಕ ಅಧ್ಯಕ್ಷರಾಗಿ ಎರಡನೇ ಬಾರಿಗೆ ಅಧಿಕಾರ ವಹಿಸಿಕೊಂಡ ಬಳಿಕ ಮೊದಲ ಬಾರಿಗೆ ಫ್ಲೋರಿಡಾದಲ್ಲಿ ರಿಪಬ್ಲಿಕನ್ನರನ್ನು ಉದ್ದೇಶಿಸಿ ಮಾತನಾಡಿದ ಡೊನಾಲ್ಡ್ ಟ್ರಂಪ್, ''ನಮ್ಮ ದೇಶದ ಉತ್ಪನ್ನಗಳಿಗೆ ಚೀನಾ ಅತ್ಯಧಿಕ ಆಮದು ಸುಂಕ ವಿಧಿಸುತ್ತಿದೆ. ಭಾರತ, ಬ್ರೆಝಿಲ್ ಸಹ ಇದೇ ಹಾದಿಯಲ್ಲಿವೆ. ಪರಿಸ್ಥಿತಿಯನ್ನು ಹೀಗೆ ಮುಂದುವರಿಯಲು ನಾವು ಬಿಡುವುದಿಲ್ಲ.. ಎಂದು ಗುಡುಗಿದರು.



ನಮಗೆ ನಮ್ಮ ರಾಷ್ಟ್ರ, ನಮ್ಮ ಜನರು ಮುಖ್ಯ. ಅಮೆರಿಕ ನಮ್ಮ ಮೊದಲ ಆದ್ಯತೆ. ಅಮೆರಿಕದ ಆರ್ಥಿಕ ಸ್ಥಿತಿ ಮೊದಲಿನಂತಾಗಬೇಕು. ನಮ್ಮ ದೇಶದ ಬೊಕ್ಕಸ ತುಂಬಬೇಕು. ಶ್ರೀಮಂತ ರಾಷ್ಟ್ರವನ್ನಾಗಿ ರೂಪಿಸಲು ನ್ಯಾಯಯುತ ಮಾರ್ಗವನ್ನು ಅನುಸರಿಸಲಾಗುವುದು.. ಎಂದು ಡೊನಾಲ್ಡ್ ಟ್ರಂಪ್ ತಮ್ಮ ಭಾಷಣದಲ್ಲಿ ಹೇಳಿದರು.

ಹಿಂದೆಂದಿಗಿಂತಲೂ ಅಮೆರಿಕವನ್ನು ಬಲಿಷ್ಠವಾಗಿಸಲು ಇದು ಸರಿಯಾದ ಸಮಯವಾಗಿದೆ. ನಮಗೆ ನಮ್ಮ ರಾಷ್ಟ್ರೀಯ ಹಿತಾಸಕ್ತಿಯನ್ನು ಬಲಿಕೊಟ್ಟು ಜಾಗತಿಕ ಸಂಬಂಧಗಳನ್ನು ಸುಧಾರಿಸುವ ಅನಿವಾರ್ಯತೆ ಇಲ್ಲ. ನ್ಯಾಯಯುತ ಮಾರ್ಗದಲ್ಲಿ ನಮ್ಮೊಂದಿಗೆ ವ್ಯವಹರಿಸುವ ರಾಷ್ಟ್ರದೊಂದಿಗೆ ನಾವೂ ಕೂಡ ನ್ಯಾಯಯುತವಾಗಿಯೇ ವ್ಯವಹರಿಸುತ್ತೇವೆ.. ಎಂದು ಡೊನಾಲ್ಡ್ ಟ್ರಂಪ್ ನುಡಿದರು.

**ನೂತನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ**

- ಭಾರತ, ಚೀನಾಗೆ ಸುಂಕ ಬೆದರಿಕೆ ಹಾಕಿದ ಡೊನಾಲ್ಡ್ ಟ್ರಂಪ್
- ನ್ಯಾಯಯುತ ವ್ಯಾಪಾರಕ್ಕೆ ಆದ್ಯತೆ ಎಂದ ಅಮೆರಿಕದ ಅಧ್ಯಕ್ಷ
- ರಾಷ್ಟ್ರೀಯ ಹಿತ ಬಲಿಕೊಡುವ ಪ್ರಶ್ನೆ ಇಲ್ಲ ಎಂದ ಡೊನಾಲ್ಡ್ ಟ್ರಂಪ್
- ಫ್ಲೋರಿಡಾ ಭಾಷಣದಲ್ಲಿ ಸುಂಕ ಬೆದರಿಕೆ ಪುನರುಚ್ಚಿಸಿದ ಅಮೆರಿಕ ಅಧ್ಯಕ್ಷ

ಸುಂಕದ ವಿಚಾರದಲ್ಲಿ ನಾವು ಯಾವುದೇ ರಾಷ್ಟ್ರವನ್ನು ಬೆದರಿಸುವ ಕೆಲಸ ಮಾಡುತ್ತಿದ್ದೇವೆ ಎಂದು ಯಾರಾದರೂ ಊಹಿಸಿದರೆ ನಾವೇನೂ ಮಾಡಲಾಗುವುದಿಲ್ಲ. ನಮ್ಮದು ಬೆದರಿಕೆ ತಂತ್ರವಲ್ಲ, ಬದಲಿಗೆ ನ್ಯಾಯಯುತ ವ್ಯಾಪಾರಕ್ಕಾಗಿ ಆಗ್ರಹವಷ್ಟೇ ಎಂದು ಡೊನಾಲ್ಡ್ ಟ್ರಂಪ್ ಇದೇ ವೇಳೆ ಸ್ಪಷ್ಟಪಡಿಸಿದರು. ಬ್ರಿಕ್ಸ್ ದೇಶಗಳಿಗೆ ಟ್ರಂಪ್ ತೆರಿಗೆ: ಡಾಲರ್ ಬದಲು ಪರ್ಯಾಯ ಕರೆನ್ಸಿ ಬಳಸಿದರೆ 100% ಆಮದು ಸುಂಕ ಅಲ್ಲದೇ ಅಮೆರಿಕದ ಡಾಲರ್‌ಗೆ ಪರ್ಯಾಯ ಕರೆನ್ಸಿ ರೂಪಿಸಿದರೆ, ಬ್ರಿಕ್ಸ್ ದೇಶಗಳ ಮೇಲೆ ಶೆ.100ರಷ್ಟು ಸುಂಕ ವಿಧಿಸುವ ಎಚ್ಚರಿಕೆಯನ್ನೂ ಕೂಡ ಡೊನಾಲ್ಡ್ ಟ್ರಂಪ್ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು. ಒಟ್ಟಿನಲ್ಲಿ ಭಾರತ ಮತ್ತು ಚೀನಾಗೆ ಸುಂಕ ಬೆದರಿಕೆ ಹಾಕಿರುವ ಅಮೆರಿಕದ ನೂತನ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ತಮಗೆ ಒಪ್ಪಿತ ವ್ಯಾಪಾರ ನೀತಿಯನ್ನು ಇತರ ದೇಶಗಳು ಅನುಸರಿಸಬೇಕು ಎಂಬ ಹಠಮಾರಿ ಧೋರಣೆಯನ್ನು ಪ್ರದರ್ಶಿಸುತ್ತಿದ್ದಾರೆ ಎಂದು ಹೇಳಬಹುದು.

### ಮೊದಲ ದಿನವೇ ಎಚ್ಚರಿಕೆ

ಜ.20 ರಂದು ಅಧಿಕಾರ ವಹಿಸಿಕೊಂಡ ಮೊದಲ ದಿನವೇ ವಿದೇಶಗಳಿಗೆ ಅಧಿಕ ತೆರಿಗೆ ವಿಧಿಸುವ ಕುರಿತು ಡೊನಾಲ್ಡ್ ಟ್ರಂಪ್ ಪ್ರಸ್ತಾಪ ಮಾಡಿದ್ದರು. ಬೇರೆ ರಾಷ್ಟ್ರಗಳನ್ನು ಶ್ರೀಮಂತಗೊಳಿಸಲು ನಮ್ಮ ದೇಶದ ಜನರಿಗೆ ತೆರಿಗೆ ವಿಧಿಸುವ ಬದಲು, ನಮ್ಮ ನಾಗರಿಕರನ್ನು ಸಿರಿವಂತರನ್ನಾಗಿ ಮಾಡಲು ಹೊರ ದೇಶಗಳ ಮೇಲೆ ಅಧಿಕ ಸುಂಕ ವಿಧಿಸಲಾಗುವುದು. ಎಂದು ಟ್ರಂಪ್ ಹೇಳಿದ್ದರು.

# ರಾಷ್ಟ್ರೀಯ ಖನಿಜ ಮಿಷನ್‌ಗೆ ಮೋದಿ ಸಂಪುಟ ಅನುಮೋದನೆ

**ನವದೆಹಲಿ:** ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಇಂದು ಹಲವಾರು ಯೋಜನೆಗಳ ಕುರಿತು ಸಚಿವ ಸಂಪುಟ ತೆಗೆದುಕೊಂಡ ಪ್ರಮುಖ ನಿರ್ಧಾರಗಳ ಕುರಿತು ಮಾಧ್ಯಮ ಪ್ರತಿನಿಧಿಗಳಿಗೆ ಮಾಹಿತಿ ನೀಡಿದರು. ರಾಷ್ಟ್ರೀಯ ಕ್ರಿಟಿಕಲ್ ಖನಿಜ ಮಿಷನ್‌ಗೆ 16,300 ಕೋಟಿ ರೂ.ಗಳನ್ನು ನೀಡಲು ಸಂಪುಟ ಅನುಮೋದನೆ ನೀಡಿದೆ ಎಂದು ಅವರು ಹೇಳಿದರು.

ಕ್ರಿಟಿಕಲ್ ಖನಿಜ ವಲಯದಲ್ಲಿ ಭಾರತದ ಸ್ವಾವಲಂಬನೆಗಾಗಿ ಪರಿಣಾಮಕಾರಿ ಚೌಕಟ್ಟನ್ನು ಸ್ಥಾಪಿಸುವ ಅವಶ್ಯಕತೆಯಿದೆ. ಈ ದೃಷ್ಟಿಕೋನಕ್ಕೆ ಅನುಗುಣವಾಗಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ 2024ರ ಜುಲೈ 23ರಂದು 2024-25ರ ಕೇಂದ್ರ ಬಜೆಟ್‌ನಲ್ಲಿ ಕ್ರಿಟಿಕಲ್ ಖನಿಜ ಮಿಷನ್ ಸ್ಥಾಪನೆಯನ್ನು ಘೋಷಿಸಿದರು. ಇದರ ಭಾಗವಾಗಿ, 24 ಅಮೂಲ್ಯ ಖನಿಜಗಳ ಗಣಿಗಾರಿಕೆಯನ್ನು ಪ್ರೋತ್ಸಾಹಿಸಲು ನಿರ್ಧರಿಸಲಾಗಿದೆ.

ಕೇಂದ್ರ ಸಚಿವ ಸಂಪುಟವು ಅನುಮೋದಿಸಿದ ರಾಷ್ಟ್ರೀಯ ಕ್ರಿಟಿಕಲ್ ಖನಿಜ ಮಿಷನ್ ಖನಿಜ ಪರಿಶೋಧನೆ, ಗಣಿಗಾರಿಕೆ, ಪ್ರಯೋಜನಕಾರಿಕರಣ, ಸಂಸ್ಕರಣೆ ಮತ್ತು ಜೀವಿತಾವಧಿಯ ಉತ್ಪನ್ನಗಳಿಂದ ಚೇತರಿಕೆ ಸೇರಿದಂತೆ ಮೌಲ್ಯ ಸರಪಳಿಯ ಎಲ್ಲಾ ಹಂತಗಳನ್ನು ಒಳಗೊಳ್ಳುತ್ತದೆ. ಈ ಮಿಷನ್ ನಿರ್ಣಾಯಕ ಖನಿಜ ಪರಿಶೋಧನೆಗೆ ಆರ್ಥಿಕ ಪ್ರೋತ್ಸಾಹವನ್ನು ನೀಡುತ್ತದೆ.



**ಇದರ ಜೊತೆಗೆ ಇಂದಿನ ಸಚಿವ ಸಂಪುಟ ಸಭೆಯಲ್ಲಿ ಎಥೆನಾಲ್ ಮಿಶ್ರಿತ ಪೆಟ್ರೋಲ್ ಕಾರ್ಯಕ್ರಮದ ಅಡಿಯಲ್ಲಿ ಸಾರ್ವಜನಿಕ ವಲಯದ ತೈಲ ಮಾರುಕಟ್ಟೆ ಕಂಪನಿಗಳು ಎಥೆನಾಲ್ ಸಂಗ್ರಹಣೆಗಾಗಿ ಕಾರ್ಯವಿಧಾನವನ್ನು ಅನುಮೋದಿಸಲಾಗಿದೆ. ಈ ಅನುಮೋದನೆಯು ಎಥೆನಾಲ್ ಪೂರೈಕೆದಾರರಿಗೆ ಬೆಲೆ ಸ್ಥಿರತೆ ಮತ್ತು ಲಾಭದಾಯಕ ಬೆಲೆಗಳನ್ನು ಒದಗಿಸುವಲ್ಲಿ ಸರ್ಕಾರಕ್ಕೆ ನಿರಂತರ ನೀತಿಯನ್ನು ಸುಗಮಗೊಳಿಸುತ್ತದೆ. ಹಾಗೇ, ಕಚ್ಚಾ ತೈಲದ ಆಮದಿನ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ವಿದೇಶಿ ವಿನಿಮಯದಲ್ಲಿ ಉಳಿತಾಯ ತರಲು ಸಹಾಯ ಮಾಡುತ್ತದೆ.**

# ಇಸ್ರೋ ಯಶಸ್ವಿ 100ನೇ ರಾಕೆಟ್ ಉಡಾವಣೆಗೆ ದುಸ್ರಾ ಮಾತನಾಡದೇ ಸೆಲ್ಯೂಟ್ ಹೊಡೆದ ಜಗತ್ತು

**ಶ್ರೀಹರಿಕೋಟಾ:** 'ಆಡು ಮುಟ್ಟದ ಸೊಪ್ಪಿಲ್ಲ..' ಎಂಬಗಾದೆ ಮಾತಿನಂತೆ, ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಮಾಡುತ್ತಿರುವ ಸಾಧನೆಗಳಿಗೆ ಪರ್ಯಾಯವಿಲ್ಲ. ಬಾಹ್ಯಾಕಾಶಕ್ಕೆ ಯಶಸ್ವಿ 100ನೇ ರಾಕೆಟ್ ಉಡಾವಣೆ ಮಾಡುವ ಮೂಲಕ, ಜಾಗತಿಕ 'ಸ್ಪೇಸ್ ರೇಸ್'ನಲ್ಲಿ ತನ್ನ ಇರುವಿಕೆಯನ್ನು ಇಸ್ರೋ ದೃಢಪಡಿಸಿದೆ.

ಹೌದು, ಆಂಧ್ರಪ್ರದೇಶದ ಶ್ರೀಹರಿಕೋಟಾದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ, ಇಂದು (ಜ.29-ಬುಧವಾರ) ಬೆಳಗ್ಗೆ ನ್ಯಾವಿಗೇಷನ್ ಉಪಗ್ರಹ ಎನ್‌ವಿಎಸ್-02ವನ್ನು ಜಿಎಸ್‌ಎಲ್‌ವಿ- ಎಫ್15 ರಾಕೆಟ್ ಮೂಲಕ ಯಶಸ್ವಿಯಾಗಿ ಉಡಾವಣೆ ಮಾಡಲಾಯಿತು. ಇದು ಇಸ್ರೋದ 100ನೇ ಯಶಸ್ವಿ ಉಡಾವಣೆಯಾಗಿದೆ ಎಂಬುದು ವಿಶೇಷ.

ಇಸ್ರೋದ ನೂತನ ಅಧ್ಯಕ್ಷ ವಿ. ನಾರಾಯಣನ್ ಅವರ ನಾಯಕತ್ವದಲ್ಲಿ ನಡೆದ ಮೊದಲ ಕಾರ್ಯಾಚರಣೆ ಇದಾಗಿದ್ದು, ಹೊಸ ವರ್ಷದಲ್ಲಿ ಇಸ್ರೋ ನಡೆಸಿದ ಮೊದಲ ಬಾಹ್ಯಾಕಾಶ ಕಾರ್ಯಾಚರಣೆ ಕೂಡ ಆಗಿದೆ.



# ರಾಹುಲ್ ಗಾಂಧಿಗೆ ಕೇಜ್ರಿವಾಲ್ ತಿರುಗೇಟು

**ನವದೆಹಲಿ:** ಪ್ರಧಾನಿ ಮೋದಿ ಮತ್ತು ಅರವಿಂದ್ ಕೇಜ್ರಿವಾಲ್‌ರಂತಹ ನಾಯಕರು ಬಡವರಿಗೆ ಬಾಗಿಲು ಮುಚ್ಚಿ ಅವರಿಗೆ ಅವಕಾಶಗಳು ಸಿಗದಂತೆ ಮಾಡಿದ್ದಾರೆ ಎಂದು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಹೇಳಿದ್ದರು. ದೆಹಲಿಯ ಪತ್ಪರ್ ಗಂಜ್‌ನಲ್ಲಿ ನಡೆದ ಚುನಾವಣಾ ರ್ಯಾಲಿಯಲ್ಲಿ ಅರವಿಂದ್ ಕೇಜ್ರಿವಾಲ್ ವಿರುದ್ಧ ವಾಗ್ದಾಳಿ ನಡೆಸಿದ್ದ ರಾಹುಲ್ ಗಾಂಧಿ ಕೇಜ್ರಿವಾಲ್ ಚುನಾವಣೆಗೂ ಮುನ್ನ ಸಣ್ಣ ಕಾರಿನಲ್ಲಿ ಬರುತ್ತಿದ್ದರು. ನಂತರ ''ಶೀಶ್ ಮಹಲ್‌ನಲ್ಲಿ ವಾಸಿಸುತ್ತಿದ್ದರು ಎಂದು ಟೀಕಿಸಿದ್ದರು. ಇದಕ್ಕೆ ಅರವಿಂದ್ ಕೇಜ್ರಿವಾಲ್ ತಿರುಗೇಟು ನೀಡಿದ್ದಾರೆ.

ದೆಹಲಿ ವಿಧಾನಸಭಾ ಚುನಾವಣಾ ಪ್ರಚಾರದ ಸಮಯದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ವಿರುದ್ಧ ವಾಗ್ದಾಳಿ ನಡೆಸಿರುವ ದೆಹಲಿಯ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್, ನ್ಯಾಷನಲ್ ಹೆರಾಲ್ಡ್ ಪ್ರಕರಣದ ಕತೆಯೇನು? ರಾಬರ್ಟ್ ವಾದ್ರಾಗೆ ಬಿಜೆಪಿಯಿಂದ ಹೇಗೆ ಕ್ಲೀನ್ ಚಿಟ್ ಸಿಕ್ಕಿತು? ಎಂದು ರಾಹುಲ್ ಗಾಂಧಿಯನ್ನು ಪ್ರಶ್ನಿಸಿದ್ದಾರೆ. ವಿಶೇಷವೆಂದರೆ, ಆಮ್ ಆದ್ಮಿ ಪಕ್ಷ (ಎಎಪಿ) ಮತ್ತು ಕಾಂಗ್ರೆಸ್ ಎರಡೂ ಪಕ್ಷಗಳು ಇಂಡಿಯಾ ಬ್ಲಾಕ್‌ನ ಭಾಗವಾಗಿವೆ. ಆದರೂ ದೆಹಲಿ ಚುನಾವಣೆಯಲ್ಲಿ ಆಪ್ ಮತ್ತು ಕಾಂಗ್ರೆಸ್ ಸ್ವತಂತ್ರವಾಗಿ ಸ್ಪರ್ಧಿಸಲು ನಿರ್ಧರಿಸಿವೆ.



# 'ಬೇಗ ಸುನೀತಾರನ್ನು ಕರೆದು ತಾ'..: ಡೊನಾಲ್ಡ್ ಟ್ರಂಪ್

**ವಾಷಿಂಗ್ಟನ್:** ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ(ಐಎಸ್‌ಎಸ್)ದಲ್ಲಿ ಸಿಲುಕಿರುವ ಭಾರತೀಯ ಮೂಲದ ಅಮೆರಿಕನ್ ಗಗನಯಾತ್ರಿ ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರನ್ನು ಸುರಕ್ಷಿತವಾಗಿ ಭೂಮಿಗೆ ಮರಳಿ ಕರೆತರುವಂತೆ, ಅಮೆರಿಕದ ನೂತನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸ್ಪೇಸ್ ಎಕ್ಸ್ ಮಾಲೀಕ ಎಲಾನ್ ಮಸ್ಕ್ ಅವರಿಗೆ ಸೂಚನೆ ನೀಡಿದ್ದಾರೆ.

ಈ ಕುರಿತು ತಮ್ಮ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಟ್ವೀಟ್ ಮೂಲಕ ಖುದ್ದು ಮಾಹಿತಿ ಹಂಚಿಕೊಂಡಿರುವ ಎಲಾನ್ ಮಸ್ಕ್, ಬಾಹ್ಯಾಕಾಶ ನಿಲ್ದಾಣದಲ್ಲಿ ಸಿಲುಕಿರುವ ಗಗನಯಾತ್ರಿಗಳಾದ ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರನ್ನು ಸುರಕ್ಷಿತವಾಗಿ ಭೂಮಿಗೆ ಮರಳಿ ಕರೆತರಲು ಅಣಿಯಾಗುವಂತೆ ಡೊನಾಲ್ಡ್ ಟ್ರಂಪ್ ಸೂಚನೆ ನೀಡಿದ್ದಾರೆ.. ಎಂದು ಸ್ಪಷ್ಟಪಡಿಸಿದ್ದಾರೆ. ಅಮೆರಿಕದ ಅಧ್ಯಕ್ಷರ ಆದೇಶದಂತೆ ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರ ಸುರಕ್ಷಿತ ಮರಳುವಿಕೆಯನ್ನು ಖಾತರಿಪಡಿಸಲು, ಸ್ಪೇಸ್ ಎಕ್ಸ್ ಕಾರ್ಯಾಚರಣೆ ಆರಂಭಿಸಲಿದೆ. ನಾವು ಅವರನ್ನು ಮರಳಿ ಮನೆಗೆ ಕರೆತರುತ್ತೇವೆ.. ಎಂದು ಎಲಾನ್ ಮಸ್ಕ್ ಟ್ವೀಟ್‌ನಲ್ಲಿ ಭರವಸೆ ನೀಡಿದ್ದಾರೆ. ಇದೇ ವೇಳೆ ಬಾಹ್ಯಾಕಾಶ ನಿಲ್ದಾಣದಲ್ಲಿ ತೊಂದರೆಗೆ ಸಿಲುಕಿರುವ ಇಬ್ಬರು ಗಗನಯಾತ್ರಿಗಳ ಸುರಕ್ಷತೆ ಬಗ್ಗೆ, ಹಿಂದಿನ ಅಧ್ಯಕ್ಷ ಜೋ ಬೈಡನ್ ಆಡಳಿತ ನಿರ್ಲಕ್ಷ್ಯ ತೋರಿರುವುದು ಭಯಾನಕ..: ಎಂದು ಎಲಾನ್ ಮಸ್ಕ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಗಗನಯಾತ್ರಿಗಳ ಸುರಕ್ಷತೆಗಾಗಿ ಈ ಹಿಂದೆಯೇ ಸ್ಪೇಸ್ ಎಕ್ಸ್‌ನ್ನು ಸಂಪರ್ಕಿಸಿದ್ದ ನಾಸಾ, ಜೋ ಬೈಡನ್ ಆಡಳಿತದ ನಿರ್ಲಕ್ಷ್ಯದ ಪರಿಣಾಮವಾಗಿ ನಮ್ಮೊಂದಿಗೆ ಕಾರ್ಯಾಚರಣೆ ನಡೆಸಲು ಹಿಂದೇಟು ಹಾಕಿತು.. ಎಂದು ಎಲಾನ್ ಮಸ್ಕ್ ಗಂಭೀರ ಆರೋಪ ಮಾಡಿದ್ದಾರೆ.



### ಟ್ರಂಪ್ ಪ್ರತಿಕ್ರಿಯೆ

ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ತಿಂಗಳುಗಟ್ಟಲೆ ಸಿಲುಕಿರುವ ಇಬ್ಬರು ಅಮೆರಿಕನ್ ಗಗನಯಾತ್ರಿಗಳನ್ನು ಸ್ವದೇಶಕ್ಕೆ ಕರೆತರುವ ಕಾರ್ಯಾಚರಣೆಯನ್ನು, ಸ್ಪೇಸ್ ಎಕ್ಸ್ ಶೀಘ್ರದಲ್ಲೇ ಪ್ರಾರಂಭಿಸಲಿದೆ ಎಂದು ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಆದರೆ ಈ ಕಾರ್ಯಚರಣೆ ಯಾವಾಗ ನಡೆಯಲಿದೆ ಎಂಬುದರ ಬಗ್ಗೆ ಡೊನಾಲ್ಡ್ ಟ್ರಂಪ್ ಮತ್ತು ಎಲಾನ್ ಮಸ್ಕ್ ಇಬ್ಬರೂ ಇದುವರೆಗೂ ಯಾವುದೇ ಮಾಹಿತಿಯನ್ನು ನೀಡಿಲ್ಲ.

# ಏಕ ಚೀನಾ ನೀತಿಗೆ ಧ್ವನಿಗೂಡಿಸಿದ ಅಧ್ಯಕ್ಷ ದಿಸನಾಯಕೆ

**ಕೊಲಂಬೋ:** ಶ್ರೀಲಂಕಾ ಸರ್ಕಾರದ ಚೀನಾ ಪರ ನಿಲುವು ಅದರ ವಿದೇಶಾಂಗ ನೀತಿಯ ಸ್ಥಿರತೆಯ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಪ್ರಧಾನಿ ಹರಿಣಿ ಅಮರಸೂರ್ಯ ಅವರು ಸರ್ಕಾರದ ವಿದೇಶಾಂಗ ನೀತಿಯಲ್ಲಿನ ಅಸಮಂಜತೆಯನ್ನು ಒಪ್ಪಿಕೊಂಡಿದ್ದಾರೆ. ನಮಗೆ ಸ್ಥಿರವಾದ ವಿದೇಶಾಂಗ ನೀತಿ ಇಲ್ಲ ಎಂಬುದು ಮತ್ತೆ ಮತ್ತೆ ಸಾಬೀತಾಗುತ್ತಿದೆ.. ಎಂಬ ಹರಿಣಿ ಅಮರಸೂರ್ಯ ಅವರ ಹೇಳಿಕೆ ಇದೀಗ ಜಾಗತಿಕವಾಗಿ ಗಮನ ಸೆಳೆದಿದೆ. ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ ಸರ್ಕಾರವು ಯಾವುದೇ ರೀತಿಯ ಸ್ಥಿರವಾದ ನೀತಿಯನ್ನು ಅನುಸರಿಸುತ್ತಿಲ್ಲ. ಈ ವಿಚಾರವಾಗಿ ಏಕಪಕ್ಷೀಯ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಸಮಂಜಸವಲ್ಲ. ಈ ಕುರಿತು ನಾವು ಗಂಭೀರವಾಗಿ ಚಿಂತಿಸಬೇಕಿದೆ.. ಎಂದು ಶ್ರೀಲಂಕಾ ಪ್ರಧಾನಿ ಹರಿಣಿ ಅಮರಸೂರ್ಯ ಹೇಳಿದ್ದಾರೆ.

ಶ್ರೀಲಂಕಾದ ವಿದೇಶಾಂಗ ನೀತಿಯಲ್ಲಿನ ಅಸಮಂಜಸತೆಯನ್ನು ಪ್ರಧಾನಿ ಹರಿಣಿ ನಿರೇಕಾ ಅಮರಸೂರ್ಯ ಅವರು ಬಹಿರಂಗವಾಗಿ ಒಪ್ಪಿಕೊಂಡಿದ್ದಾರೆ. ಮಂತ್ರಿಗಳು ಮತ್ತು ಸರ್ಕಾರದ ಏಕಪಕ್ಷೀಯ ನಿರ್ಧಾರಗಳಿಂದಾಗಿ ಸ್ಥಿರವಾದ ನೀತಿಯ ಕೊರತೆಯಿದೆ ಎಂದು ಅವರು ಹೇಳಿದ್ದಾರೆ. ನಮಗೆ ಸ್ಥಿರವಾದ ವಿದೇಶಾಂಗ ನೀತಿ ಇಲ್ಲ ಎಂದು ತೋರುತ್ತದೆ. ಎಂದು ಹರಿಣಿ ಅಮರಸೂರ್ಯ ಹೇಳಿದ್ದಾರೆ.



ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಮತ್ತು ಶ್ರೀಲಂಕಾದ ಅಧ್ಯಕ್ಷ ಅನುರ ಕುಮಾರ ದಿಸ್ಸನಾಯಕೆ ನಡುವಿನ ಜಂಟಿ ಹೇಳಿಕೆಯು ಈ ಕಳವಳಗಳನ್ನು ಮತ್ತಷ್ಟು ಹೆಚ್ಚಿಸಿದೆ. ಶ್ರೀಲಂಕಾ ಚೀನಾ ಸರ್ಕಾರದ ರಾಷ್ಟ್ರೀಯ ಏಕೀಕರಣದ ಎಲ್ಲಾ ಪ್ರಯತ್ನಗಳನ್ನು ಬಲವಾಗಿ ಬೆಂಬಲಿಸುತ್ತದೆ ಮತ್ತು ಯಾವುದೇ ರೂಪದ 'ತೈವಾನ್ ಸ್ವಾತಂತ್ರ್ಯ'ವನ್ನು ವಿರೋಧಿಸುತ್ತದೆ.. ಎಂದು ಜಂಟಿ ಹೇಳಿಕೆ ತಿಳಿಸಿದೆ. ಈ ಹೇಳಿಕೆಯು ತೈವಾನ್‌ಗಿಂತ ಹೆಚ್ಚಾಗಿ ಟಿಬೆಟ್ ಮತ್ತು ಕ್ಸಿನ್ ಜಿಯಾಂಗ್‌ನ್ನು ಸಹ ಒಳಗೊಂಡಿದೆ. ಒಂದು ಚೀನಾ ನೀತಿಯ ವ್ಯಾಪ್ತಿಯನ್ನು ಶ್ರೀಲಂಕಾ ಇದೇ ಮೊದಲ ಬಾರಿಗೆ ವಿಸ್ತರಿಸಿದ್ದು, ಈ ಬದಲಾವಣೆಯು ತೈವಾನ್ ಸಮಸ್ಯೆಯನ್ನು ಟಿಬೆಟ್‌ನೊಂದಿಗೆ ಸಮೀಕರಿಸುತ್ತದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಟಿಬೆಟ್, ಕ್ಸಿನ್‌ಜಿಯಾಂಗ್ ಭಾರತ-ಚೀನಾ ಸಂಬಂಧಗಳಲ್ಲಿ ಬಿಕ್ಕಟ್ಟಿನ ಕೇಂದ್ರಗಳಾಗಿವೆ. 2020 ರಲ್ಲಿ ಗಾಲ್ವಾನ್ ಕಣಿವೆಯ ಘರ್ಷಣೆ ಮತ್ತು 2022 ರಲ್ಲಿ ಟ್ವಾಂಗ್ ಘರ್ಷಣೆ ಸೇರಿದಂತೆ ಮಿಲಿಟರಿ ಮುಖಾಮುಖಿಗಳಿಗೆ ಕಾರಣವಾಗಿವೆ. ಕ್ಸಿನ್‌ಜಿಯಾಂಗ್ ಪ್ರದೇಶವು ಚೀನಾ-ಪಾಕಿಸ್ತಾನ ಆರ್ಥಿಕ ಕಾರಿಡಾರ್‌ಗೆ ಸಾಮೀಪ್ಯದಿಂದಾಗಿ ಕಾರ್ಯತಂತ್ರದ ಪ್ರಾಮುಖ್ಯತೆಯನ್ನು ಹೊಂದಿದೆ. ಕ್ಸಿನ್‌ಜಿಯಾಂಗ್‌ನಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯ ಆರೋಪಗಳು ಅಂತಾರಾಷ್ಟ್ರೀಯ ಟೀಕೆಗೆ ಕಾರಣವಾಗಿವೆ. ಅಧ್ಯಕ್ಷ ದಿಸ್ಸನಾಯಕೆ ಅವರು ಯಾವುದೇ ಶಕ್ತಿ ಬಣಗಳೊಂದಿಗೆ ಹೊಂದಿಕೊಳ್ಳುವುದಿಲ್ಲ ಎಂದು ಘೋಷಿಸಿದ್ದರು. ಆದರೆ ಈಗ ಅವರು ಚೀನಾಗೆ ಬೆಂಬಲ ನೀಡಿರುವುದು ನೀತಿಯ ಅಸಮಂಜತೆಯ ಆರೋಪಕ್ಕೆ ಕಾರಣವಾಗಿದೆ. ಬಹುಧ್ರುವ ವ್ಯವಸ್ಥೆಯಲ್ಲಿ ಅನೇಕ ಶಕ್ತಿ ಶಿಬಿರಗಳಿದ್ದು, ನಾವು ಆ ಭೂ-ರಾಜಕೀಯ ಹೋರಾಟದ ಭಾಗವಾಗುವುದಿಲ್ಲ, ಅಥವಾ ನಾವು ಯಾವುದೇ ಪಕ್ಷದೊಂದಿಗೆ ಹೊಂದಿಕೊಳ್ಳುವುದಿಲ್ಲ.. ದಿಸನಾಯಕೆ ಅವರು ತಮ್ಮ ಗೆಲುವಿನ ನಂತರ ಹೇಳಿದ್ದರು. ಆದರೆ ಪ್ರಸ್ತುತ ಪರಿಸ್ಥಿತಿ ಅವರ ಧೋರಣೆ ಬದಲಾಗಿರುವುದಕ್ಕೆ ಸಾಕ್ಷಿ ಒಗಿಸಿದೆ.

### ನಮ್ಮನ್ನು ತಡೆಯೋರು ಯಾರು?

**ಹೊಸ ವರ್ಷದ ಭಾಷಣದಲ್ಲಿ ತೈವಾನ್ ಕಬಳಿಸಿಯೇ ಸಿದ್ಧ ಎಂದ ಚೀನಾ ಅಧ್ಯಕ್ಷ ಶ್ರೀಲಂಕಾ ತನ್ನ ಭೂಪ್ರದೇಶವನ್ನು ಯಾವುದೇ ಚೀನಾ ವಿರೋಧಿ, ಪ್ರತ್ಯೇಕತಾವಾದಿ ಚಟುವಟಿಕೆಗಳಿಗೆ ಬಳಸಲು ಎಂದಿಗೂ ಅನುಮತಿಸುವುದಿಲ್ಲ ಮತ್ತು ಟಿಬೆಟ್ ಮತ್ತು ಕ್ಸಿನ್‌ಜಿಯಾಂಗ್‌ಗೆ ಸಂಬಂಧಿಸಿದ ವಿಷಯಗಳಲ್ಲಿ ಚೀನಾವನ್ನು ದೃಢವಾಗಿ ಬೆಂಬಲಿಸುತ್ತದೆ. ಎಂದು ಹೇಳಿಕೆ ಸ್ಪಷ್ಟಪಡಿಸಿದೆ.**


# ಮೋದಿಯನ್ನು ಘಜನಿ ಮೊಹಮ್ಮದ್‌ಗೆ ಹೋಲಿಸಿದ ರೇವಂತ್ ರೆಡ್ಡಿ

## ನೀವು ನಮಗೆ ದೊಡ್ಡಣ್ಣ ಇದ್ದಂತೆ, ನಿಮ್ಮ ಸಹಕಾರವಿದ್ದರೆ ರಾಜ್ಯವು ಅಭಿವೃದ್ಧಿ, ಮಧ್ಯ ಪ್ರದೇಶದಲ್ಲಿ ಜೈಬಾಪು, ಜೈಭೀಮ್, ಜೈ ಸಂವಿಧಾನ ಸಭೆ

**ಹೊಸದಿಲ್ಲಿ :** ನಮಗೆ ದೊಡ್ಡಣ್ಣ ಇದ್ದಂತೆ, ನಿಮ್ಮ ಸಹಕಾರ ವಿದ್ದರೆ ರಾಜ್ಯವು ಅಭಿವೃದ್ಧಿಗೊಳ್ಳುತ್ತದೆ ಎಂದು ಈ ಹಿಂದೆ ವೇದಿಕೆಯಲ್ಲಿ ಹೇಳಿದ್ದ ತೆಲಂಗಾಣದ ಮುಖ್ಯಮಂತ್ರಿ ರೇವಂತ್ ರೆಡ್ಡಿ, ಈಗ, ಅದೇ ಪ್ರಧಾನಿ ಮೋದಿಯವರನ್ನು, ಟರ್ಕಿಯ ಆಕ್ರಮಣಕಾರ ಘಜನಿ ಮೊಹಮ್ಮದ್ ಗೆ ಹೋಲಿಸಿದ್ದಾರೆ.

ಮಧ್ಯ ಪ್ರದೇಶದಲ್ಲಿ ಜೈಬಾಪು, ಜೈಭೀಮ್, ಜೈ ಸಂವಿಧಾನ ಸಭೆಯಲ್ಲಿ ಮಾತನಾಡುತ್ತಿದ್ದ ರೇವಂತ್ ರೆಡ್ಡಿ, ಪ್ರಧಾನಿ ಮೋದಿಯವರು ಸಂವಿಧಾನ'ವನ್ನು ಬದಲಾಯಿಸಲು ಹೊರಟಿದ್ದಾರೆ, ಉದ್ಯೋಗದ ಮೀಸಲಾತಿಯನ್ನು ರದ್ದು ಮಾಡಲು ಹೊರಟಿದ್ದಾರೆ. ಚರಿತ್ರೆಯಲ್ಲಿ ಘಜನಿ ಮೊಹಮ್ಮದ್ ದೇಶವನ್ನು ಲೂಟಿ ಮಾಡಿದ್ದನ್ನು ನಾವು ಓದಿದ್ದೇವೆ ಎಂದು ತೆಲಂಗಾಣ ಸಿಎಂ ಹೇಳಿದ್ದಾರೆ.

ಗಂಗಾಸ್ನಾನ ಮತ್ತು ಬಡತನ ನಿರ್ಮೂಲನೆ : ದೆಹಲಿ ಚುನಾವಣೆಯ ವೇಳೆ ಬರೋ ಓಟಿಗೂ ಕಲ್ಲು ಹಾಕಿದ್ರಾ, ಮಲ್ಲಿಕಾರ್ಜುನ ಖರ್ಗೆ?



**ನಕಲಿ ಗಾಂಧಿ ಪಕ್ಷದ ಗುಲಾಮ ಎಂದ ಬಿಜೆಪಿ**

ಭಾರತ ದೇಶವನ್ನು ಪದೇಪದೇ ಲೂಟಿ ಮಾಡಿ ನಮ್ಮ ಸಂಪತ್ತನ್ನು ಘಜನಿ ಮೊಹಮ್ಮದ್ ಲೂಟಿ ಮಾಡಿದ. ಅದೇ ರೀತಿ, ಪ್ರಧಾನಿ ಮೋದಿಯವರು ಸಂವಿಧಾನದಲ್ಲಿ ಬದಲಾವಣೆ ತರಲು, ಮೀಸಲಾತಿಯನ್ನು ರದ್ದು ಮಾಡಲು ಹೊರಟಿದ್ದಾರೆ ಎಂದು ರೇವಂತ್ ರೆಡ್ಡಿ, ಮೋದಿಯವರನ್ನು, ಘಜನಿಗೆ ಹೋಲಿಸಿದ್ದಾರೆ.

ಅತ್ಯಂತ ಹೆಚ್ಚು ಪ್ರಧಾನ ಮಂತ್ರಿಗಳನ್ನು ಹೊಂದಿದ ಕಾಂಗ್ರೆಸ್ ಪಕ್ಷ ಪ್ರಧಾನಿ ಸ್ಥಾನದ ಬಗ್ಗೆ ಅವರ ಮುಖ್ಯಮಂತ್ರಿಯು ಅವಹೇಳನಕಾರಿ ಮಾತನಾಡಿರುವದಕ್ಕೆ ಕಾಂಗ್ರೆಸ್ ನ ರಾಷ್ಟ್ರೀಯ ನಾಯಕತ್ವ ದೇಶದ ಕ್ಷಮೆ ಕೋರಬೇಕು ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಒತ್ತಾಯಿಸಿದ್ದಾರೆ.

ಬಿಜೆಪಿಯಿಂದ ತಮ್ಮ ಹೇಳಿಕೆಗೆ ವ್ಯಾಪಕ ಟೀಕೆ ವ್ಯಕ್ತವಾದ ಬೆನ್ನಲ್ಲೇ ಟ್ವೀಟ್ ಮಾಡಿದ ರೇವಂತ್ ರೆಡ್ಡಿ, ದೇಶದಲ್ಲಿ ಈಗ ಎರಡು ಶಕ್ತಿಗಳಿವೆ, ಒಂದು ಸಂವಿಧಾನವನ್ನು ನಾಶ ಮಾಡಲು ಹೊರಟವರದ್ದು. ಇನ್ನೊಂದು, ದೇಶದ ಸಂವಿಧಾನವನ್ನು ಉಳಿಸಲು ತಮ್ಮ ಪ್ರಾಣವನ್ನೇ ಪಣಕ್ಕಿಡಲು ಸಿದ್ದರಿರುವವರು. ಕಾಂಗ್ರೆಸ್ ಪಾರ್ಟಿಯು ಹೇಗೆ ಸ್ವಾತಂತ್ರ್ಯಕ್ಕಾಗಿ ಹೋರಾಡಿತೋ, ಸಂವಿಧಾನ ಉಳಿಸಲು ಹಾಗೇ ಹೋರಾಡಲಿದೆ ಎಂದು ರೆಡ್ಡಿ ಎಕ್ಸ್ ಮಾಡಿದ್ದಾರೆ.

ಪ್ರಧಾನಿಯವರನ್ನು ದಾಳಿಕೋರ ಮೊಹಮ್ಮದ್ ಘಜನಿಗೆ ಹೋಲಿಸಿದ ತೆಲಂಗಾಣ ಮುಖ್ಯಮಂತ್ರಿ ರೇವಂತ ರೆಡ್ಡಿಯವರ ಹೇಳಿಕೆ ಖಂಡನೀಯ ಮತ್ತು ನಾಚಿಕೆಗೇಡಿನ ಹೇಳಿಕೆ. ಮೋದಿ ಭಾರತ ಕಂಡ ಅತ್ಯಂತ ಜನಪ್ರಿಯ ಮತ್ತು ಜನಪರ ಪ್ರಧಾನಿ, ಇಂದು ವಿಶ್ವವೇ ಪ್ರಧಾನಿಯವರ ಕಾರ್ಯಕ್ಷಮತೆಯನ್ನು ಕಂಡು ಹೊಗಳುತ್ತಿರುವಾಗ ನಕಲಿ ಗಾಂಧಿ ಪಕ್ಷದ ಗುಲಾಮರಂತೆ ರೆಡ್ಡಿ ವರ್ತಿಸುತ್ತಿದ್ದಾರೆ ಎಂದು ಪ್ರಲ್ಹಾದ ಜೋಶಿ, ಎಕ್ಸ್ ಮೂಲಕ ಆಕ್ರೋಶ ಹೊರಹಾಕಿದ್ದಾರೆ.

ದೇಶದಲ್ಲಿ ತುರ್ತು ಪರಿಸ್ಥಿತಿ ಹೇರುವ ಮೂಲಕ, ಸಂವಿಧಾನದ ಆಶಯಕ್ಕೆ ಧಕ್ಕೆ ತಂದವರು ಕಾಂಗ್ರೆಸ್, ಇದು ಆಲಿಬಾಬಾ 420 ಮತ್ತು ತಂಡ. ದೇಶವನ್ನು ಲೂಟಿ ಮಾಡಿದ್ದು ಕಾಂಗ್ರೆಸ್ಸಿನ ಹಾಲ್ಮಾರ್ಕ್ ಸಂಸ್ಕೃತಿ ಎಂದು ಬಿಜೆಪಿ ನಾಯಕ ರಾಮಚಂದ್ರ ರಾವ್ ಲೇವಡಿ ಮಾಡಿದ್ದಾರೆ.

**ರೇವಂತ್ ರೆಡ್ಡಿಯವರ ಹೇಳಿಕೆಯನ್ನು ನಾನು ತೀವ್ರವಾಗಿ ಖಂಡಿಸುವೆ, ಇದು ಪ್ರಧಾನಿ ಹುದ್ದೆಗೆ ಮತ್ತು ಮೋದಿಯವರಿಗೆ ಮಾಡುವ ಅವಮಾನ. ಕೋಟ್ಯಾಂತರ ಭಾರತೀಯರು ಮತ್ತು ಬುಡಕಟ್ಟು ಜನಾಂಗದವರನ್ನು, ರೆಡ್ಡಿ ತಮ್ಮ ಹೇಳಿಕೆಯ ಮೂಲಕ ಅವಮಾನಿಸಿದ್ದಾರೆ ಎಂದು ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಬೇಸರ ವ್ಯಕ್ತ ಪಡಿಸಿದ್ದಾರೆ.**

- ಮೋದಿಯನ್ನು ಘಜನಿ ಮೊಹಮ್ಮದ್ ಗೆ ಹೋಲಿಸಿದ ತೆಲಂಗಾಣದ ಸಿಎಂ ರೇವಂತ್ ರೆಡ್ಡಿ
- ನಕಲಿ ಗಾಂಧಿ ಪಕ್ಷದ ಗುಲಾಮರಂತೆ ರೆಡ್ಡಿ ವರ್ತಿಸುತ್ತಿದ್ದಾರೆ ಎಂದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ
- ಆಲಿಬಾಬಾ 420 ಮತ್ತು ತಂಡ. ದೇಶವನ್ನು ಲೂಟಿ ಮಾಡಿದ್ದು ಕಾಂಗ್ರೆಸ್ಸಿನ ಹಾಲ್ಮಾರ್ಕ್ ಎಂದ ಬಿಜೆಪಿ

## ಮಿನಿ ನ್ಯೂಸ್

### ಸಂಕಷ್ಟದಲ್ಲಿ ಸೂಪರ್ ಪವರ್ ನೇಷನ್ ಅಮೆರಿಕ, ಕಾರಣ ವಿಚಿತ್ರ

**ಅಮೆರಿಕ :** ವಿಶ್ವದ ದೊಡ್ಡಣ್ಣ ಹಾಗೂ ಸೂಪರ್ ಪವರ್ ನೇಷನ್ ಎಂದು ಕರೆದುಕೊಳ್ಳುವ ಅಮೆರಿಕ ಈಗ ನಿಧಾನವಾಗಿ ಆರ್ಥಿಕ ಸಂಕಷ್ಟ ಎದುರಿಸುತ್ತಿದೆ. ಹೌದು ಬೇರೆ ಬೇರೆ ದೇಶಗಳ ಯುದ್ಧದಲ್ಲಿ ಮೂಗು ತೂರಿಸುವ, ಎಲ್ಲದಕ್ಕೂ ಮುಂದಿರುವ ಹಾಗೂ ವಿಶ್ವದಲ್ಲೇ ಅತ್ಯಂತ ಬಲಿಷ್ಠ ರಾಷ್ಟ್ರ ಎಂದು ಹೇಳಿಕೊಳ್ಳುವ ಅಮೆರಿಕದ ದುಡ್ಡು ಸಣ್ಣಗೆ ಕರಗುತ್ತಿದೆ. ಅಮೆರಿಕ ಆರ್ಥಿಕವಾಗಿ ಸಂಕಷ್ಟವನ್ನು ಅನುಭವಿಸುತ್ತಿದೆ. ಹೌದು ಇದು ಅಚ್ಚರಿ ಏನಿಸಿದರೂ ನಿಜ. ಅಮೆರಿಕದ ಬಳಿ ಈಗ ದುಡ್ಡಿಲ್ಲ ಇದೇ ಕಾರಣಕ್ಕೆ ಅಮೆರಿಕ ಹಲವು ಯೋಜನೆಗಳಿಗೆ ಬ್ರೇಕ್ ಹಾಕುತ್ತಿದೆ. ಅಲ್ಲದೆ ವಿಶ್ವದ ವಿವಿಧ ರಾಷ್ಟ್ರಗಳಿಗೆ ನೀಡುತ್ತಿದ್ದ ದುಡ್ಡಿಗೂ ಬ್ರೇಕ್ ಹಾಕಲಾಗಿದೆ. ಜನ ಇಲ್ಲಿ ಸಾಲ ಮಾಡಿಕೊಳ್ಳುತ್ತಿದ್ದಾರೆ. ಏನಿದು ವಿಶ್ವದ ದೊಡ್ಡಣ್ಣನ ಸಾಲದ ಸ್ಟೋರಿ ಎನ್ನುವ ವಿವರ ಇಲ್ಲಿದೆ.

### ಯಮುನಾ ನದಿ ಕುರಿತ ಕೇಜ್ರಿವಾಲ್ ಆರೋಪಕ್ಕೆ ಪ್ರಧಾನಿ ಮೋದಿ ಆಕ್ರೋಶ

**ನವದೆಹಲಿ :** ದೆಹಲಿಯಲ್ಲಿ ಚುನಾವಣಾ ಅಖಾಡ ರಂಗೇರಿದೆ. ದೆಹಲಿಯ ಉಸ್ಮಾನ್‌ಪುರ ಪ್ರದೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಬೃಹತ್ ಚುನಾವಣಾ ಪ್ರಚಾರ ಯ್ಯಾಲಿ ನಡೆಸಿದರು. ವೇಳೆ ತಮ್ಮ ಭಾಷಣದ ಸಮಯದಲ್ಲಿ ಹರಿಯಾಣದ ಯಮುನಾ ನದಿಗೆ ವಿಷಪ್ರಾಶನ ಮಾಡುತ್ತಿದೆ ಎಂಬ ಆರೋಪಗಳ ಬಗ್ಗೆ ಅರವಿಂದ್ ಕೇಜ್ರಿವಾಲ್ ಅವರನ್ನು ಮೋದಿ ತರಾಟೆಗೆ ತೆಗೆದುಕೊಂಡರು. ಹರಿಯಾಣದ ಬಿಜೆಪಿ ಸರ್ಕಾರ ದೆಹಲಿಗೆ ಬಿಡುತ್ತಿರುವ ಯಮನಾ ನದಿಯ ನೀರಿನಲ್ಲಿ ವಿಷ ಬೆರೆಸುತ್ತಿದೆ. ಈ ಮೂಲಕ ನರಮೇಧಕ್ಕೆ ಸಂಚು ಮಾಡಿದೆ ಎಂದು ಕೇಜ್ರಿವಾಲ್ ಗಂಭೀರ ಆರೋಪ ಮಾಡಿದ್ದರು. ಇದನ್ನು ತಳ್ಳಿಹಾಕಿರುವ ಪ್ರಧಾನಿ ನರೇಂದ್ರ ಮೋದಿ, ನಾವು ಕೂಡ ಯಮುನಾ ನದಿ ನೀರನ್ನೇ ಕುಡಿದಿದ್ದೇವೆ. ಕೇಜ್ರಿವಾಲ್ ಆರೋಪದಲ್ಲಿ ಹುರುಳಿಲ್ಲ ಎಂದಿದ್ದಾರೆ. ದೆಹಲಿಯ ಘೋಂಡಾದ ಯಮುನಾ ಖಾದರ್‌ನಲ್ಲಿ ಚುನಾವಣಾ ಯ್ಯಾಲಿಯಲ್ಲಿ ಮಾಜಿ ಸಿಎಂ ಕೇಜ್ರಿವಾಲ್ ಆರೋಪಕ್ಕೆ ಪ್ರಧಾನಿ ಮೋದಿ ತಿರುಗೇಟು ನೀಡಿದ್ದಾರೆ. ದೆಹಲಿಯಲ್ಲಿ ಈ ಬಾರಿ ಅಭಿವೃದ್ಧಿಯ ಕಮಲ ಅರಳಲಿದೆ. ಹರಿಯಾಣ ರಾಜ್ಯದ ಜನರು ಅಪಾರ ದೇಶಭಕ್ತಿ ಹೊಂದಿದ್ದಾರೆ. ದೆಹಲಿ ಜನರಿಗೆ ಅಭಿವೃದ್ಧಿ ಮಾಡುವ ಸರ್ಕಾರ ಬೇಕಿದೆ. ದೆಹಲಿಯ ಜನರಂತೆಯೇ ನಾನು ಕೂಡ ಯಮುನಾ ನದಿ ನೀರನ್ನೇ ಕುಡಿದಿದ್ದೇನೆ. ಈ ಬಾರಿ ಎಎಪಿ ಹಡಗು ಯಮುನಾ ನದಿಯಲ್ಲಿ ಮುಳುಗುತ್ತದೆ ಎಂದು ಕೇಜ್ರಿವಾಲ್ ಅವರನ್ನು ಪ್ರಧಾನಿ ಮೋದಿ ಟೀಕಿಸಿದರು.

### 300 ಯೂನಿಟ್ ಉಚಿತ ವಿದ್ಯುತ್; ಕಾಂಗ್ರೆಸ್ ಭರವಸೆ


**ನವದೆಹಲಿ:** ದೆಹಲಿ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದೆ. ತಮ್ಮ ಚುನಾವಣಾ ಭರವಸೆಗಳಲ್ಲಿ ಕಾಂಗ್ರೆಸ್ ಮಹಿಳೆಯರಿಗೆ ತಿಂಗಳಿಗೆ 2,500 ರೂ. ಸರ್ಕಾರಿ ಉದ್ಯೋಗಗಳಲ್ಲಿ ಶೇ. 33ರಷ್ಟು ಮೀಸಲಾತಿ ನೀಡುವುದಾಗಿ ಹೇಳಿದೆ. ಹಾಗೇ 300 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ನೀಡುವುದಾಗಿ ಭರವಸೆ ನೀಡಿದೆ. ದೆಹಲಿಯ ಜನರಿಗೆ 25 ಲಕ್ಷ ರೂ.ಗಳವರೆಗೆ ಉಚಿತ ಆರೋಗ್ಯ ಚಿಕಿತ್ಸೆಯನ್ನು ನೀಡುವುದಾಗಿಯೂ ಕಾಂಗ್ರೆಸ್ ಪಕ್ಷ ಭರವಸೆ ನೀಡಿದೆ. ಯುವ ಮತದಾರರನ್ನು ಆಕರ್ಷಿಸುವ ಮೂಲಕ ಕಾಂಗ್ರೆಸ್ ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿ ಒಂದು ವರ್ಷದ ಅಪ್ರೆಂಟಿಸ್‌ಶಿಪ್ ನೀಡುವುದಾಗಿ ಪ್ರತಿಜ್ಞೆ ಮಾಡಿದೆ. ಅಪ್ರೆಂಟಿಸ್‌ಶಿಪ್ ಸಮಯದಲ್ಲಿ ಯುವ ವೃತ್ತಿಪರರಿಗೆ ತಿಂಗಳಿಗೆ 8.500 ರೂ. ಸ್ಟೈಫಂಡ್ ಸಿಗುತ್ತದೆ. ಕಾಂಗ್ರೆಸ್ ಪಕ್ಷವು ದೆಹಲಿಯಲ್ಲಿ ಅಧಿಕಾರಕ್ಕೆ ಬಂದರೆ ದೆಹಲಿ ನಿವಾಸಿಗಳಿಗೆ ರೂ. 25 ಲಕ್ಷದವರೆಗೆ ಉಚಿತ ಚಿಕಿತ್ಸೆಯನ್ನು ನೀಡುವುದಾಗಿ ಭರವಸೆ ನೀಡಿದೆ.

### ಶರಿಯಾ ಕಾನೂನಿನ ವಿರುದ್ಧ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ ಮುಸ್ಲಿಂ ಮಹಿಳೆ

**ನವದೆಹಲಿ:** ಮೋದಿ ನೇತೃತ್ವದ ಸರ್ಕಾರದ ಏಕರೂಪ ನಾಗರಿಕ ಸಂಹಿತೆಯ ಬಗ್ಗೆ ಚರ್ಚೆಗಳು ನಡೆಯುತ್ತಿರುವ ಬೆನ್ನಲ್ಲೇ ಕೇರಳದ ಮಹಿಳೆಯೊಬ್ಬರು ತನಗೆ ಇಸ್ಲಾಂ ಧರ್ಮದ ಶರಿಯತ್ ಕಾನೂನಿನ ಬದಲು ಭಾರತೀಯ ಉತ್ತರಾಧಿಕಾರ ಕಾನೂನಿನಡಿ ತನ್ನ ಆಸ್ತಿಯನ್ನು ಮಗಳ ಹೆಸರಿಗೆ ಬರೆಯಲು ಅವಕಾಶ ನೀಡಬೇಕೆಂದು ಸುಪ್ರೀಂ ಕೋರ್ಟ್? ಮೆಟ್ಟಿಲೇರಿದ್ದಾಳೆ. ತಾನು ಇಸ್ಲಾಂ ಧರ್ಮದಲ್ಲಿ ಹುಟ್ಟಿದ್ದರೂ ಇಸ್ಲಾಂ ಧರ್ಮವನ್ನು ಪಾಲಿಸುತ್ತಿಲ್ಲ. ನಾನು ನಾಸ್ತಿಕಳಾಗಿದ್ದೇನೆ. ನಮಗೆ ಶರಿಯತ್ ಕಾನೂನನ್ನು ಅನಸರಿಸಲು ಇಷ್ಟವಿಲ್ಲ. ಶರಿಯಾ ಕಾನೂನಿನ ಬದಲು ತನಗೆ ಭಾರತೀಯ ಜಾತ್ಯತೀಯ ಉತ್ತರಾಧಿಕಾರ ಕಾನೂನನ್ನು ಅನುಸರಿಸಲು ಅವಕಾಶ ನೀಡಬೇಕು ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಈ ಕುರಿತು 4 ವಾರಗಳೊಳಗೆ ಅಭಿಪ್ರಾಯ ತಿಳಿಸಲು ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ. ಹಾಗೇ, ಶರಿಯಾ ಕಾನೂನು ಅನುಸರಿಸುವುದು ಅವರವರ ಆಯ್ಕೆಯೇ? ಎಂದು ಕೋರ್ಟ್ ಪ್ರಶ್ನಿಸಿದೆ.

### ನಾಲ್ವರು ಇಸ್ರೇಲಿ ಮಹಿಳಾ ಸೈನಿಕರ ಬಿಡುಗಡೆ

**ನವದೆಹಲಿ;** ಇಸ್ರೇಲ್ ಮತ್ತು ಹಮಾಸ್ ನಡುವೆ ಒಪ್ಪಂದವಾದ ಎರಡನೇ ಕೈದಿಗಳ ವಿನಿಮಯದ ಭಾಗವಾಗಿ ಹಮಾಸ್ ಇಂದು ಗಾಜಾದಲ್ಲಿ ಬಂಧಿತರಾಗಿರುವ ನಾಲ್ವರು ಇಸ್ರೇಲಿ ಸೈನಿಕರನ್ನು ಬಿಡುಗಡೆ ಮಾಡಿದೆ. ಇತ್ತೀಚಿನ ಬೆಳವಣಿಗೆಯು ಇಸ್ರೇಲ್ ಜೈಲುಗಳಲ್ಲಿ ಬಂಧಿಸಲ್ಪಟ್ಟಿರುವ 200 ಪ್ಯಾಲೆಸ್ತೀನಿಯನ್ನರನ್ನು ಬಿಡುಗಡೆ ಮಾಡಲು ಇಸ್ರೇಲ್‌ಗೆ ದಾರಿ ಮಾಡಿಕೊಡುತ್ತದೆ. ಶುಕ್ರವಾರ ಇಸ್ರೇಲಿ ಒತ್ತೆಯಾಳುಗಳ ಹೆಸರುಗಳನ್ನು ಬಹಿರಂಗಪಡಿಸಿದ ನಂತರ ಹಮಾಸ್ ಕದನ ವಿರಾಮ ಒಪ್ಪಂದದ ಭಾಗವಾಗಿ ಗಾಜಾದಲ್ಲಿ ಬಂಧಿಸಲ್ಪಟ್ಟಿರುವ ನಾಲ್ವರು ಇಸ್ರೇಲಿ ಸೈನಿಕರನ್ನು ಬಿಡುಗಡೆ ಮಾಡಿದೆ. ಇಸ್ರೇಲ್ ಜೈಲಿನಲ್ಲಿ ಬಂಧಿಸಲ್ಪಟ್ಟಿರುವ ಡಜನ್?ಗಟ್ಟಲೆ ಪ್ಯಾಲೆಸ್ತೀನಿಯನ್ನರ ಬಿಡುಗಡೆಗೆ ಬದಲಾಗಿ ಒತ್ತೆಯಾಳುಗಳನ್ನು ಬಿಡುಗಡೆ ಮಾಡಲಾಗಿದೆ. ಇಸ್ರೇಲ್ ಮತ್ತು ಹಮಾಸ್ ನಡುವಿನ ನಿರೀಕ್ಷಿತ ವಿನಿಮಯಕ್ಕೆ ಮುಂಚಿತವಾಗಿ ಟೆಲ್ ಅವಿವ್ ಗಾಜಾ ನಗರದಲ್ಲಿ ಜನರು ಮೊದಲೇ ಸೇರಲು ಪ್ರಾರಂಭಿಸಿದ್ದರು. ಅವರು ತಮ್ಮವರನ್ನು ನೋಡಲು ಕಾತುರರಾಗಿ, ಭಾವುಕರಾಗಿದ್ದರು.



## ಮಕ್ಕಳಿಗಾಗಿ ದಿಟ್ಟ ನಿರ್ಧಾರ ಕೈಗೊಂಡ ಕರೀನಾ ದಂಪತಿ

ಬಾಲಿವುಡ್ ನಟ ಸೈಫ್ ಅಲಿ ಖಾನ್ ಮೇಲೆ ಜ.16ರಂದು ಮಾರಣಾಂತಿಕ ದಾಳಿ ನಡೆದಿತ್ತು. ಈ ಹಿನ್ನೆಲೆ ಇದೀಗ ಕರೀನಾ ಕಪೂರ್ ದಂಪತಿ ದಿಟ್ಟ ನಿರ್ಧಾರವೊಂದನ್ನು ಕೈಗೊಂಡಿದ್ದಾರೆ. ಮಕ್ಕಳ ಫೋಟೋ ಕ್ಲಿಕ್ಕಿಸದಂತೆ ಪಾಪರಾಜಿಗಳಿಗೆ ಮನವಿ ಮಾಡಿದ್ದಾರೆ. ನಿನ್ನೆ (ಜ.28) ಸುದ್ದಿಗೋಷ್ಠಿಯಲ್ಲಿ ಸೈಫ್ ಹಾಗೂ ಕರೀನಾ ಮಾತನಾಡಿ, ಮಕ್ಕಳಾದ ಜೆಹ್ ಹಾಗೂ ತೈಮೂರ್ ಫೋಟೋ ಮಾತ್ರವಲ್ಲ, ಜೊತೆಗೆ ಕುಟುಂಬಸ್ಥರ ಫೋಟೋಗಳನ್ನು ಕ್ಲಿಕಿಸಬೇಡಿ ಎಂದು ಪಾಪರಾಜಿಗಳಿಗೆ ಹೇಳಿದ್ದಾರೆ. ಇನ್ನೂ ಕುಟುಂಬಕ್ಕೆ ಹೆಚ್ಚಿನ ಭದ್ರತೆ ಹಿನ್ನೆಲೆ ಈ ದಿಟ್ಟ ನಿರ್ಧಾರವನ್ನು ಸೈಫ್ ದಂಪತಿ ಕೈಗೊಂಡಿದ್ದಾರೆ. ಇದೀಗ ಚಿಕಿತ್ಸೆಯ ಬಳಿಕ ಸೈಫ್ ಅಲಿ ಖಾನ್ ಅವರು ಚೇತರಿಸಿಕೊಂಡಿದ್ದಾರೆ. ಚಾಕು ಇರಿತದ ಪ್ರಕರಣ ನಂತರ ನಟನ ಮನೆಗೆ ಹೆಚ್ಚಿನ ಭದ್ರತೆ ನೀಡಲಾಗಿದೆ.




## ಶೂಟಿಂಗ್ ಮುಗಿಸಿದ ದುಷ್ಯಂತ್

**ಆಶಿಕಾ ನಟನೆಯ ಗತವೈಭವ ಸಿನಿಮಾ**

ಸ್ಯಾಂಡಲ್‌ವುಡ್ ಬೆಳ್ಳಿಪರದೆಯಲ್ಲಿ ಗತವೈಭವಕಥೆಯನ್ನು ಹರವಿಡೋದಿಕ್ಕೆ ಟ್ಯಾಲೆಂಡ್ ಡೈರೆಕ್ಟರ್ ಸಿಂಪಲ್ ಸುನಿ ರೆಡಿಯಾಗಿದ್ದಾರೆ. ಸುನಿ ಭತ್ತಳಿಕೆಯಿಂದ ಬರುತ್ತಿರುವ ಬಹುನಿರೀಕ್ಷಿತ ಚಿತ್ರ 'ಗತವೈಭವ' ಚಿತ್ರೀಕರಣ ಮುಕ್ತಾಯಗೊಂಡಿದೆ. ಪೋರ್ಚುಗಲ್‌ನಲ್ಲಿ ಹಾಗೂ ಮುಂತಾದೆಡೆ ಯಶಸ್ವಿಯಾಗಿ 100 ಕಾಲ್‌ಶೀಟ್‌ಗಳಲ್ಲಿ ಶೂಟಿಂಗ್ ಮುಗಿಸಲಾಗಿದೆ.

ದುಷ್ಯಂತ್ ಹಾಗೂ ಆಶಿಕಾ ರಂಗನಾಥ್ ಚಿತ್ರೀಕರಣ ಅನುಭವವನ್ನು ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದು, ಇದೇ ವರ್ಷದ ಮೊದಲಾರ್ಧದಲ್ಲಿ 'ಗತವೈಭವ' ಸಿನಿಮಾವನ್ನು ತೆರೆಗೆ ಬರಲಿದೆ ಎಂದು ಮಾಹಿತಿ ನೀಡಿದ್ದಾರೆ. ಸಿಂಪಲ್ ಸುನಿ ಎಲ್ಲಾ ಪ್ರಕಾರದ ಸಿನಿಮಾಗೂ ಕೈ ಹಾಕಿದ್ದಾರೆ. ಕಾಮಿಡಿ, ಸಿರೀಯಸ್, ಫ್ಯಾಂಟಸಿ, ಹಾರರ್ ಹೀಗೆ ಭಿನ್ನ-ವಿಭಿನ್ನ ಕಥೆಯನ್ನು ಹೊತ್ತುತಂದಿದ್ದಾರೆ. ಲವ್‌ಸ್ಟೋರಿಯನ್ನು ಸೈಂಟಿಫಿಕ್ ಥ್ರಿಲ್ಲರ್ ಮಾದರಿಯ ಗತವೈಭವ ಚಿತ್ರದ ಮೂಲಕ ಯುವ ಪ್ರತಿಭೆ ದುಷ್ಯಂತ್ ನಾಯಕನಾಗಿ ಚಿತ್ರರಂಗಕ್ಕೆ ಮೊದಲ ಹೆಜ್ಜೆ ಇಡುತ್ತಿದ್ದಾರೆ. ನಾಯಕಿಯಾಗಿ ಆಶಿಕಾ ರಂಗನಾಥ್ ನಟಿಸಿದ್ದಾರೆ. ಸಿಂಪಲ್ ಸುನಿ ಈ ಸಿನಿಮಾಗೆ ಕೇವಲ ನಿರ್ದೇಶಕ ಅಷ್ಟೇ ಅಲ್ಲ. ಅವರು ನಿರ್ಮಾಪಕ ಕೂಡ ಹೌದು. 'ಗತವೈಭವ' ಸಿನಿಮಾಕ್ಕೆ ಕಥೆ-ಚಿತ್ರಕಥೆ ಮತ್ತು ಸಂಭಾಷಣೆ ಬರೆದಿದ್ದು, ಸುನಿ ಸಿನಿಮಾಸ್ ಸಂಸ್ಥೆಯಡಿ ದೀಪಿಕ್ ರವರ ಮಾತಾ ಮೂವಿ ಮೇಕರ್ಸ್ ಹಾಗೂ ಸುನಿ ಚಿತ್ರ ನಿರ್ಮಾಣ ಮಾಡ್ತಿದ್ದಾರೆ. ವಿಲಿಯಂ ಡೇವಿಡ್ ಕ್ಯಾಮೆರಾ ವರ್ಕ್, ಜೂಡಾ ಸ್ಯಾಂಡಿ ಸಂಗೀತ ಈ ಚಿತ್ರಕ್ಕಿದೆ. ಶೂಟಿಂಗ್ ಎಲ್ಲೆಲ್ಲಿ ನಡೆದಿದೆ: ಗತವೈಭವ ಚಿತ್ರದ ಸಂಪೂರ್ಣ ಚಿತ್ರೀಕರಣ ಪೂರ್ಣಗೊಂಡಿದೆ. ಕೂರ್ಗ್, ಮಂಗಳೂರು, ಪೋರ್ಚುಗಲ್‌ನಲ್ಲಿ ಸಿನಿಮಾದ ದೃಶ್ಯಗಳನ್ನು ಸೆರೆಹಿಡಿಯಲಾಗಿದೆ. ಬರೋಬ್ಬರಿ 100 ಕಾಲ್‌ಶೀಟ್‌ಗಳಲ್ಲಿ ಶೂಟಿಂಗ್ ಮುಕ್ತಾಯಗೊಂಡಿದ್ದು, ಸದ್ಯ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಭರದಿಂದ ಸಾಗುತ್ತಿವೆ.

## ನಾನೊಬ್ಬರಿಗೆ ಪಾರ್ಟ್ನರ್ ಆಗಿದ್ದೇನೆ



**ರಿಲೇಷನ್ ಶಿಪ್ ಬಗ್ಗೆ ಮಾತನಾಡಿದ ರಶ್ಮಿಕಾ**

ಕೊಡಗಿನ ಬೆಡಗಿ ರಶ್ಮಿಕಾ ಮಂದಣ್ಣ ಅವರು ಸದ್ಯ 'ಛಾವಾ' ಸಿನಿಮಾದ ಪ್ರಚಾರ ಕಾರ್ಯದಲ್ಲಿ ಬ್ಯುಸಿಯಾಗಿದ್ದಾರೆ. ಇತ್ತೀಚಿನ ಸಂದರ್ಶನವೊಂದರಲ್ಲಿ ನಟಿ ತಾವು ರಿಲೇಷನ್‌ಶಿಪ್‌ನಲ್ಲಿ ಸುಳಿವು ನೀಡಿದ್ದಾರೆ.

ನಟಿ ಕೊಟ್ಟಿರುವ ಹಿಂಟ್ ಬಗ್ಗೆ ಸೋಶಿಯಲ್ ಮೀಡಿಯಾದಲ್ಲಿ ಚರ್ಚೆ ಶುರುವಾಗಿದೆ. ರಶ್ಮಿಕಾ ಮಂದಣ್ಣ ಸಂದರ್ಶನವೊಂದರಲ್ಲಿ ಮಾತನಾಡಿ, ನನಗೆ ನನ್ನ ಮನೆಯೇ ಖುಷಿಯ ಸ್ಥಳ.

ಯಶಸ್ಸು ಇಂದು ಬಂದು ಮುಂದೊಂದು ದಿನ ಹೋಗಬಹುದು. ಅದು ಎಂದಿಗೂ ಶಾಶ್ವತವಲ್ಲ. ಎಷ್ಟೇ ಸಿಕ್ಕರೂ ಕೂಡ ನಾನು ನಟಿ ಮಾತ್ರವಲ್ಲದೇ ಮಗಳು, ಸಹೋದರಿ, ಓರ್ವ ಪಾರ್ಟ್ನರ್ ಕೂಡ ಹೌದು ಎಂದು ಹೇಳಿದ್ದಾರೆ.

ಎಲ್ಲೂ ಕೂಡ ಸಂಗಾತಿ ಯಾರು ಎಂದು ಹೆಸರನ್ನು ಅವರು ರಿವೀಲ್ ಮಾಡಿಲ್ಲ. ಪಾರ್ಟ್ನರ್ ಎಂದು ಪದ ಬಳಸಿದ ರಶ್ಮಿಕಾ, ತಾವು ರಿಲೇಷನ್‌ಶಿಪ್‌ನಲ್ಲಿರೋದಾಗಿ ಅಧಿಕೃತಪಡಿಸಿದರೇ ಎಂಬ ಅನುಮಾನ ಅಭಿಮಾನಿಗಳಲ್ಲಿ ಮೂಡಿದೆ. ಇನ್ನೂ ಇನ್ನೂ ಸಾಕಷ್ಟು ವರ್ಷಗಳಿಂದ ರಶ್ಮಿಕಾ ಹೆಸರು ವಿಜಯ್ ದೇವರಕೊಂಡ ಜೊತೆ ತಳುಕು ಹಾಕಿಕೊಂಡಿದೆ. ಆದರೆ ಇದುವರೆಗೂ ಇಬ್ಬರೂ ರಿಲೇಷನ್‌ಶಿಪ್ ಇದ್ದಾರಾ ಇಲ್ವಾ ಎಂಬುದರ ಬಗ್ಗೆ ಕ್ಲ್ಯಾರಿಟಿ ನೀಡಿಲ್ಲ. ಮುಂದಿನ ದಿನಗಳಲ್ಲಿ ಗುಡ್ ನ್ಯೂಸ್ ಸಿಗುತ್ತಾ ಎಂದು ಕಾದುನೋಡಬೇಕಿದೆ. 'ಅನಿಮಲ್' ಹಾಗೂ 'ಪುಷ್ಪ 2' ಸಿನಿಮಾದ ಸಕ್ಸಸ್ ನಂತರ 'ಛಾವಾ' ಚಿತ್ರದ ಬಿಡುಗಡೆಗಾಗಿ ಅವರು ಎದುರು ನೋಡುತ್ತಿದ್ದಾರೆ. ಮೊದಲ ಬಾರಿಗೆ ಐತಿಹಾಸಿಕ ಚಿತ್ರದಲ್ಲಿ ನಟಿ ಕಾಣಿಸಿಕೊಂಡಿದ್ದಾರೆ. ಮಹಾರಾಣಿಯ ಪಾತ್ರಕ್ಕೆ ನಟಿ ಜೀವತುಂಬಿದ್ದಾರೆ. ಛಾವಾ ಇದೇ ಫೆ.14ರಂದು ರಿಲೀಸ್ ಆಗಲಿದೆ.






## ಲವ್ಲಿ ಸ್ಟಾರ್ ಪ್ರೇಮ್‌ಗೆ ಶರಣ್ಯಾ ಶೆಟ್ಟಿ ನಾಯಕಿ

'ಕೃಷ್ಣಂ ಪ್ರಣಯ ಸಖಿ' ಸಿನಿಮಾದ ಸಕ್ಸಸ್ ಬಳಿಕ ಕನ್ನಡದ ಮತ್ತೊಂದು ಬಿಗ್ ಪ್ರಾಜೆಕ್ಟ್‌ಗೆ ಕುಡ್ಲದ ಬೆಡಗಿ ಶರಣ್ಯಾ ಶೆಟ್ಟಿ ಆಯ್ಕೆಯಾಗಿದ್ದಾರೆ. ಲವ್ಲಿ ಸ್ಟಾರ್ ಪ್ರೇಮ್‌ಗೆ ಹೊಸ ಸಿನಿಮಾಗೆ ಶರಣ್ಯಾ ಹೀರೋಯಿನ್ ಆಗಿದ್ದಾರೆ. ನೆನಪಿರಲಿ ಪ್ರೇಮ್ ನಟಿಸುತ್ತಿರುವ ಹೊಸ ಚಿತ್ರಕ್ಕೆ ಶರಣ್ಯಾ ಸೆಲೆಕ್ಟ್ ಆಗಿದ್ದು, ಅವರು ಪೊಲೀಸ್ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಪವರ್‌ಫುಲ್ ಪಾತ್ರದಲ್ಲಿ ನಟಿ ಕಾಣಿಸಿಕೊಳ್ತಿದ್ದಾರೆ. ಈ ಚಿತ್ರವನ್ನು ತೇಜಲ್ ಎನ್ನುವವರು ನಿರ್ದೇಶನ ಮಾಡಿದ್ದಾರೆ. ಇನ್ನೂ ಈ ಸಿನಿಮಾದ ಜೊತೆಗೆ ತೆಲುಗಿನಲ್ಲಿ ಚಿತ್ರವೊಂದಕ್ಕೆ ಶರಣ್ಯಾ ಆಯ್ಕೆಯಾಗಿದ್ದಾರೆ. ಇಬ್ಬರೂ ಸ್ಟಾರ್ ನಟರಿರುವ ಸಿನಿಮಾ ಅವರು ನಾಯಕಿಯಾಗಿದ್ದು, ಈ ಚಿತ್ರದ ಕುರಿತು ಮತ್ತಷ್ಟು ವಿವರ ಇನ್ನೂ ರಿವೀಲ್ ಆಗಬೇಕಿದೆ.

ಇನ್ನೂ 'ಗಟ್ಟಿಮೇಳ' ಸೀರಿಯಲ್ ಮೂಲಕ ಕಿರುತೆರೆಯಲ್ಲಿ ಹೆಸರು ಮಾಡಿದ್ದ ಚೆಲುವೆ ಆ ನಂತರ 1980, ನಗುವಿನ ಹೂಗಳೇ, ಫಾರೆಸ್ಟ್ ಸಿನಿಮಾಗಳಲ್ಲಿ ನಟಿಸಿದ್ದರು. ಆದರೆ 'ಕೃಷ್ಣಂ ಪ್ರಣಯ ಸಖಿ' ಚಿತ್ರದಲ್ಲಿ ಗೋಲ್ಡನ್ ಸ್ಟಾರ್ ಗಣೇಶ್‌ಗೆ ಜೊತೆಯಾಗಿ ನಟಿಸಿ ಸೈ ಎನಿಸಿಕೊಂಡರು. ಈ ಚಿತ್ರ ಅವರಿಗೆ ಬಿಗ್ ಬ್ರೇಕ್ ಕೊಟ್ಟಿದೆ.



## ಅಮೂಲ್ಯ ಅತ್ತಿಗೆ ಸಖತ್ ಸ್ವೀಟ್

'ಬಿಗ್ ಬಾಸ್ ಕನ್ನಡ 11'ರ ಸ್ಪರ್ಧಿ ಭವ್ಯಾ ಗೌಡ ಅವರು ಬಿಗ್ ಬಾಸ್ ಆಟ ಮುಗಿದ್ಮೇಲೆ ಮದುವೆ, ವೃತ್ತಿ ಜೀವನದ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಮಾತನಾಡಿದ್ದಾರೆ. ಇನ್ನೂ 'ಚೆಲುವಿನ ಚಿತ್ತಾರ' ಖ್ಯಾತಿಯ ನಟಿ ಅಮೂಲ್ಯ ಜೊತೆಗಿನ ಬಾಂಧವ್ಯದ ಬಗ್ಗೆ ಭವ್ಯಾ ಮಾತನಾಡಿದ್ದಾರೆ. ಅಮೂಲ್ಯ ಅತ್ತಿಗೆ ಸಖತ್ ಸ್ವೀಟ್ ಎಂದಿದ್ದಾರೆ. ಬಿಗ್ ಬಾಸ್‌ಗೆ ಹೋಗುವಾಗ ಜಗದೀಶ್ ಅಣ್ಣ ಮತ್ತು ಅಮೂಲ್ಯ ಅತ್ತಿಗೆ ಆಲ್ ದಿ ಬೆಸ್ಟ್ ಹೇಳಿದ್ರು. ನಾನ್ ಬಿಗ್ ಬಾಸ್‌ಗೆ ಹೋದ್ಮೇಲೆಯೂ ಅಮೂಲ್ಯ ಅತ್ತಿಗೆ ತುಂಬಾ ಸಪೋರ್ಟ್ ಮಾಡಿದ್ದಾರೆ. 2 ದಿನದಿಂದ ಅಂದುಕೊಳ್ಳುತ್ತೇಲೆ ಇದ್ದೇನೆ. ಅವರ ಮನೆಗೆ ಅಮೂಲ್ಯ ಅತ್ತಿಗೆ ಹಾಗೂ ಅಣ್ಣನ್ನು ಭೇಟಿಯಾಗಬೇಕು ಅಂತ. ಸದ್ಯದಲ್ಲೇ ಅವರನ್ನು ಭೇಟಿಯಾಗುತ್ತೇನೆ ಎಂದಿದ್ದಾರೆ. ಇನ್ನೂ ಅಮೂಲ್ಯ ಅತ್ತಿಗೆ ಯಾವತ್ತೂ ಆ್ಯಕ್ಟಿಂಗ್ ಹಾಗೇ ಮಾಡು ಹೀಗೆ ಎಂದು ಸಜೇಷನ್ ಕೊಟ್ಟಿಲ್ಲ. ಆದರೆ ನೀನು ಏನು ಮಾಡುತ್ತಿದ್ದಿಯೋ ಅದು ನಿನಿಗೆ ಗೊತ್ತಿರಬೇಕು. ಕೆಲಸದಲ್ಲಿ 100% ಕೊಡು ಒಂದಿಷ್ಟು ಸಲಹೆ ಕೊಟ್ಟಿದ್ದಾರೆ. ಅಮೂಲ್ಯ ಅತ್ತಿಗೆ ಸಖತ್ ಸ್ವೀಟ್, ಅದು ಎಲ್ಲರಿಗೂ ಗೊತ್ತು. ಅವರು ಸಖತ್ ಹಂಬಲ್, ಯಾರೇ ಮನೆಗೆ ಬಂದ್ರೂ ಖುಷಿಯಿಂದ ಮಾತನಾಡಿಸುತ್ತಾರೆ. ಜಗದೀಶ್ ಅಣ್ಣ ಹೇಳ್ತಾರೆ, ನಿಮಗೆ ಏನು ಹೇಳೋದು. ನಿಮ್ಮ ಮನೆಗೆ ನೀವೇ 4 ಜನ ಗಂಡು ಮಕ್ಕಳು ಅಂತ. ನೀವು ಬೆಳೆಯುತ್ತಿರುವ ರೀತಿ ಖುಷಿಯಿದೆ ಎಂದು ಸಾಕಷ್ಟು ಬಾರಿ ಹೇಳಿದ್ದಾರೆ. ನಮ್ಮ ಒಳ್ಳೆಯದನ್ನೇ ಅವರು ಬಯಸುತ್ತಾರೆ ಎಂದು ಭವ್ಯಾ ಹೇಳಿದ್ದಾರೆ. ಇನ್ನೂ ಭವ್ಯಾಗೆ ಸಂಬಂಧದಲ್ಲಿ ಜಗದೀಶ್ ಅವರು ಅಣ್ಣ ಆಗಬೇಕು, ದೊಡ್ಡಪ್ಪನ ಮಗ. ಅಮೂಲ್ಯ ಅವರು ಅತ್ತಿಗೆ ಆಗುತ್ತಾರೆ.



## ಭರ್ಜರಿ ದಾಖಲೆ ಬರೆದ ಸ್ಟೀವ್ ಸ್ಮಿತ್

ಶ್ರೀಲಂಕಾ ಮತ್ತು ಆಸ್ಟ್ರೇಲಿಯಾ ನಡುವಣ ಮೊದಲ ಟೆಸ್ಟ್ ಪಂದ್ಯವು ಗಾಲೆ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆಯುತ್ತಿದೆ. ಈ ಪಂದ್ಯ ದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡಿರುವ ಆಸ್ಟ್ರೇಲಿಯಾ ಪರ ಆರಂಭಿಕರಾದ ಉಸ್ಮಾನ್ ಖ್ವಾಜಾ (65★) ಹಾಗೂ ಟ್ರಾವಿಸ್ (57) ಅರ್ಧಶತಕ ಬಾರಿಸಿದ್ದಾರೆ. ಇನ್ನು ನಾಲ್ಕನೇ ಕ್ರಮಾಂಕದಲ್ಲಿ ಕಣಕ್ಕಿಳಿದ ಸ್ಟೀವ್ ಸ್ಮಿತ್ ಟೆಸ್ಟ್‌ನಲ್ಲಿ ವಿಶೇಷ ದಾಖಲೆ ಬರೆದಿದ್ದಾರೆ. ಟೆಸ್ಟ್ ಕ್ರಿಕೆಟ್‌ನಲ್ಲಿ ಸ್ಟೀವ್ ಸ್ಮಿತ್ ಭರ್ಜರಿ ದಾಖಲೆ ನಿರ್ಮಿಸಿದ್ದಾರೆ. ಗಾಲೆ ಇಂಟರ್‌ನ್ಯಾಷನಲ್ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆಯುತ್ತಿರುವ ಶ್ರೀಲಂಕಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ 1 ರನ್‌ಗಳಿಸುವ ಮೂಲಕ ಸ್ಟೀವ್ ಸ್ಮಿತ್ ಟೆಸ್ಟ್‌ನಲ್ಲಿ 10000 ರನ್ ಪೂರೈಸಿದ್ದಾರೆ.

ಇದರೊಂದಿಗೆ ಈ ಸಾಧನೆ ಮಾಡಿದ ಆಸ್ಟ್ರೇಲಿಯಾದ 3ನೇ ಬ್ಯಾಟರ್ ಎನಿಸಿಕೊಂಡಿದ್ದಾರೆ. ಇದಕ್ಕೂ ಮುನ್ನ ಆಸ್ಟ್ರೇಲಿಯಾದ ಮಾಜಿ ಆಟಗಾರರಾದ ರಿಕಿ ಪಾಂಟಿಂಗ್ (13378) ಹಾಗೂ ಅಲನ್ ಬಾರ್ಡರ್ (11174) ಈ ದಾಖಲೆ ಬರೆದಿದ್ದರು. ಇದೀಗ ಈ ಸಾಧಕ ಪಟ್ಟಿಗೆ ಸ್ಟೀವ್ ಸ್ಮಿತ್ ಕೂಡ ಎಂಟ್ರಿಯಾಗಿದ್ದಾರೆ. ಅಷ್ಟೇ ಅಲ್ಲದೆ ಟೆಸ್ಟ್ ಇತಿಹಾಸದಲ್ಲಿ 10 ಸಾವಿರ ರನ್‌ಕಲೆಹಾಕಿದ ವಿಶ್ವದ 15ನೇ ಬ್ಯಾಟರ್ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ. ಇನ್ನು ಈ ಸಾಧನೆಯೊಂದಿಗೆ ಟೆಸ್ಟ್ ಕ್ರಿಕೆಟ್‌ನಲ್ಲಿ ಅತೀ ವೇಗವಾಗಿ 10 ಸಾವಿರ ರನ್ ಕಲೆಹಾಕಿದ ಬ್ಯಾಟರ್‌ಗಳ ಪಟ್ಟಿಯಲ್ಲಿ ಸ್ಟೀವ್ ಸ್ಮಿತ್ 5ನೇ ಸ್ಥಾನಕ್ಕೇರಿದ್ದಾರೆ. ಇದಕ್ಕೂ ಮುನ್ನ ಐದನೇ ಸ್ಥಾನದಲ್ಲಿ ಟೀಮ್ ಇಂಡಿಯಾದ ರಾಹುಲ್ ದ್ರಾವಿಡ್ ಇದ್ದರು. ದ್ರಾವಿಡ್ 206 ಇನಿಂಗ್ಸ್‌ಗಳ ಮೂಲಕ 10 ಸಾವಿರ ರನ್ ಪೂರೈಸಿದ್ದರು. ಇದೀಗ ಸ್ಟೀವ್ ಸ್ಮಿತ್ 205 ಇನಿಂಗ್ಸ್‌ಗಳ ಮೂಲಕ 10 ಸಾವಿರ ರನ್ ಕಲೆಹಾಕಿದ್ದಾರೆ. ಈ ಮೂಲಕ ಟೆಸ್ಟ್‌ನಲ್ಲಿ ಅತೀ ವೇಗವಾಗಿ 10 ಸಾವಿರ ರನ್‌ಗಳ ಮೈಲುಗಲ್ಲು ಮುಟ್ಟಿದ ವಿಶ್ವದ 5ನೇ ಬ್ಯಾಟರ್ ಹಾಗೂ ಆಸ್ಟ್ರೇಲಿಯಾದ 2ನೇ ದಾಂಡಿಗ ಎನಿಸಿಕೊಂಡಿದ್ದಾರೆ. ಇನ್ನು ಟೆಸ್ಟ್ ಇತಿಹಾಸದಲ್ಲಿ ಅತೀ ವೇಗವಾಗಿ 10 ರನ್ ಕಲೆಹಾಕಿದ ವಿಶ್ವ ದಾಖಲೆ ವೆಸ್ಟ್ ಇಂಡೀಸ್‌ನ ಬ್ರಿಯಾನ್ ಲಾರಾ, ಭಾರತದ ಸಚಿನ್ ತೆಂಡೂಲ್ಕರ್ ಹಾಗೂ ಶ್ರೀಲಂಕಾದ ಕುಮಾರ ಸಂಗಾಕ್ಕರ ಹೆಸರಿನಲ್ಲಿದೆ. ಈ ಮೂವರು ದಿಗ್ಗಜರು ಕೇವಲ 195 ಇನಿಂಗ್ಸ್‌ಗಳ ಮೂಲಕ 10000 ರನ್ ಪೂರೈಸಿದ್ದರು.

## ಧೋನಿ ಭಾರತವನ್ನು ಉದ್ದೇಶಪೂರ್ವಕವಾಗಿ ಸೋಲಿಸಿದ್ರಾ



2019ರ ಏಕದಿನ ವಿಶ್ವಕಪ್ ಗೆಲ್ಲುವ ನೆಚ್ಚಿನ ತಂಡವಾಗಿ ಗುರುತಿಸಿಕೊಂಡಿದ್ದ ಟೀಮ್ ಇಂಡಿಯಾ ಸೆಮಿಫೈನಲ್‌ನಲ್ಲಿ ಎಡವಿತು. ಫೈನಲ್ ಗೇರಲು ನಿರ್ಣಾಯಕವಾಗಿದ್ದ ಈ ಮ್ಯಾಚ್‌ನಲ್ಲಿ ಟೀಮ್ ಇಂಡಿಯಾ ಪರ ಮಹೇಂದ್ರ ಸಿಂಗ್ ಧೋನಿ ನಿಧಾನಗತಿಯ ಬ್ಯಾಟಿಂಗ್ ಪ್ರದರ್ಶಿಸಿದ್ದರು. ಈ ಬ್ಯಾಟಿಂಗ್ ಪರಿಣಾಮ ಭಾರತ ತಂಡವು 18 ರನ್‌ಗಳಿಂದ ಸೋಲಬೇಕಾಯಿತು ಎಂದು ವಾದಿಸುವವರಿದ್ದಾರೆ. 2019ರ ಏಕದಿನ ವಿಶ್ವಕಪ್‌ನ ಸೆಮಿಫೈನಲ್ ಪಂದ್ಯ. ಮ್ಯಾಂಚೆಸ್ಟರ್‌ನ ಓಲ್ಡ್ ಟ್ರಾಫೋರ್ಡ್ ಸ್ಟೇಡಿಯಂನಲ್ಲಿ



ಭಾರತ ಮತ್ತು ನ್ಯೂಝಿಲೆಂಡ್ ತಂಡಗಳು ಮುಖಾಮುಖಿಯಾಗಿದ್ದವು. ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ನ್ಯೂಝಿಲೆಂಡ್ ತಂಡದ ಪರ ನಾಯಕ ಕೇನ್ ವಿಲಿಯಮ್ಸನ್ (67) ಹಾಗೂ ರಾಸ್ ಟೇಲರ್ (74) ಅರ್ಧಶತಕ ಬಾರಿಸಿದರು. ಈ ಹಾಫ್ ಸೆಂಚುರಿಗಳ ನೆರವಿನಿಂದ ನ್ಯೂಝಿಲೆಂಡ್ ತಂಡ 50 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 239 ರನ್ ಕಲೆಹಾಕಿತು. 240 ರನ್‌ಗಳ ಗುರಿ ಪಡೆದ ಟೀಮ್ ಇಂಡಿಯಾ ಉತ್ತಮ ಆರಂಭ ಪಡೆದಿರಲಿಲ್ಲ. ಆರಂಭಿಕರಾದ ರೋಹಿತ್ ಶರ್ಮಾ ಹಾಗೂ ಕೆಎಲ್ ರಾಹುಲ್ 1 ರನ್ ಗಳಿಸಿ ಔಟಾದರೆ, ಮೂರನೇ ಕ್ರಮಾಂಕದಲ್ಲಿ ಕಣಕ್ಕಿಳಿದ ವಿರಾಟ್ ಕೊಹ್ಲಿ 1 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. ಇನ್ನು ದಿನೇಶ್ ಕಾರ್ತಿಕ್ (6), ರಿಷಭ್ ಪಂತ್ (32) ಹಾಗೂ ಹಾರ್ದಿಕ್ ಪಾಂಡ್ಯ 32 ರನ್ ಬಾರಿಸಿ ಔಟಾದರು. ಈ ಹಂತದಲ್ಲಿ 7ನೇ ಕ್ರಮಾಂಕದಲ್ಲಿ ಕಣಕ್ಕಿಳಿದ ಮಹೇಂದ್ರ ಸಿಂಗ್ ಧೋನಿ ನಿಧಾನಗತಿಯ ಇನಿಂಗ್ಸ್ ಆಡಿದ್ದರು. ಒಂದೆಡೆ ರವೀಂದ್ರ ಜಡೇಜಾ ಬಿರುಸಿನ ಬ್ಯಾಟಿಂಗ್ ಪ್ರದರ್ಶಿಸಿದ್ದರೆ, ಇತ್ತ ಧೋನಿ 72 ಎಸೆತಗಳಲ್ಲಿ 1 ಫೋರ್ ಹಾಗೂ 1 ಸಿಕ್ಸ್‌ಗಳೊಂದಿಗೆ 50 ರನ್‌ಗಳಿಸಿ ರನೌಟ್ ಆದರು. ಇದೇ ವೇಳೆ ರವೀಂದ್ರ ಜಡೇಜಾ 59 ಎಸೆತಗಳಲ್ಲಿ 77 ರನ್ ಚಚ್ಚಿದ್ದರು. ನಿರ್ಣಾಯಕ ಹಂತದಲ್ಲಿ ಧೋನಿ ನಿಧಾನಗತಿಯ ಬ್ಯಾಟಿಂಗ್ ಪ್ರದರ್ಶಿಸಿದ ಧೋನಿ ಆ ಬಳಿಕ ಭಾರೀ ಟೀಕೆಗೆ ಒಳಗಾದರು. ಅದರಲ್ಲೂ ಕೊನೆಯ ಓವರ್‌ಗಳ ವೇಳೆ ಧೋನಿ ರಕ್ಷಣಾತ್ಮಕ ಆಟಕ್ಕೆ ಒತ್ತು ನೀಡಿದ್ದು ಹಲವು ಅನುಮಾನಗಳಿಗೆ ಎಡೆಮಾಡಿ ಕೊಟ್ಟಿತ್ತು. ಅಲ್ಲದೆ ಈ ಪಂದ್ಯದಲ್ಲಿ ಧೋನಿ ರನೌಟ್ ಆಗುವ ಮೂಲಕ ಕೊನೆಯ ಕ್ಷಣದಲ್ಲಿ ವಿಕೆಟ್ ಕೈಚೆಲ್ಲಿದರು. ಪರಿಣಾಮ ಟೀಮ್ ಇಂಡಿಯಾ ಈ ಪಂದ್ಯದಲ್ಲಿ 18 ರನ್‌ಗಳ ಸೋಲನುಭವಿಸಿತು. ಈ ಸೋಲಿಗೆ ಪ್ರಮುಖ ಕಾರಣ ಮಹೇಂದ್ರ ಸಿಂಗ್ ಧೋನಿ ಅವರ ನಿಧಾನಗತಿಯ ಇನಿಂಗ್ಸ್ ಎಂದು ವಾದಿಸುವವರು ಇದ್ದಾರೆ. ಅಲ್ಲದೆ 2019ರ ಸೆಮಿಫೈನಲ್‌ನಲ್ಲಿ ಭಾರತವನ್ನು ಧೋನಿ ಉದ್ದೇಶಪೂರ್ವಕವಾಗಿ ಸೋಲಿಸಿದ್ದರು ಎಂಬ ಆರೋಪ ಹೊರಿಸುವವರು ಸೋಷಿಯಲ್ ಮೀಡಿಯಾದಲ್ಲಿ ಕಾಣ ಸಿಗುತ್ತಾರೆ. ಈ ಆರೋಪಗಳ ಬಗ್ಗೆ ಭಾರತದ ಹಿರಿಯ ಅಂಪೈರ್‌ಗಳಲ್ಲಿ ಒಬ್ಬರಾಗಿರುವ ಅನಿಲ್ ಚೌಧರಿ ಅವರನ್ನು ಕೇಳಲಾಗಿದೆ. ಪೋಡ್‌ಕಾಸ್ಟ್ ಸಂದರ್ಶನವೊಂದರಲ್ಲಿ ಕಾಣಿಸಿಕೊಂಡ ಅನಿಲ್ ಚೌಧರಿಗೆ, ಅಂದು ಧೋನಿಯ ನಿಧಾನಗತಿಯ ಬ್ಯಾಟಿಂಗ್‌ನಿಂದಾಗಿ ಭಾರತ ತಂಡ ಸೋಲನುಭವಿಸಿತೇ ಧೋನಿ ಉದ್ದೇಶಕಪೂರ್ವಕವಾಗಿಯೇ ಸ್ಲೋ ಇನಿಂಗ್ಸ್ ಆಡಿದ್ರಾ ಎಂದು ಪ್ರಶ್ನಿಸಲಾಯಿತು.

## ಆರ್‌ಸಿಬಿ ಸೇರಿದ ಬಳಿಕ ಸಪ್ಪೆಯಾದ ಸಾಲ್ಟ್



ಐಪಿಎಲ್ 2024 ರಲ್ಲಿ ಫಿಲ್ ಸಾಲ್ಟ್ ಕೊಲ್ಕತ್ತಾ ನೈಟ್ ರೈಡರ್ಸ್ ಪರ ಕಣಕ್ಕಿಳಿದಿದ್ದರು. ಕೆಕೆಆರ್ ಪರ 12 ಪಂದ್ಯಗಳಲ್ಲಿ ಫಿಲ್ ಸಾಲ್ಟ್ ಇನಿಂಗ್ಸ್ ಆರಂಭಿಸಿದ್ದ ಸಾಲ್ಟ್ 4 ಅರ್ಧಶತಕಗಳೊಂದಿಗೆ ಒಟ್ಟು 435 ರನ್ ಬಾರಿಸಿ ಅಬ್ಬರಿಸಿದ್ದರು. ಈ ಟೂರ್ನಿಯ ಬೆನ್ನಲ್ಲೇ ಇಂಗ್ಲೆಂಡ್ ಪರ ಕೂಡ ಆರಂಭಿಕನಾಗಿ ಸಿಡಿಲಬ್ಬರದ ಮುಂದುವರೆಸಿದ್ದರು. ಈ ಭರ್ಜರಿ ಪ್ರದರ್ಶನವನ್ನು ಗಮನಿಸಿದ ಆರ್‌ಸಿಬಿ ಸಾಲ್ಟ್ ಅವರನ್ನು ಈ ಬಾರಿ ಆರಂಭಿಕನಾಗಿ ಆಯ್ಕೆ ಮಾಡಿಕೊಂಡಿದೆ. ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-18ರ ಮೆಗಾ ಹರಾಜಿನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿ ಬರೋಬ್ಬರಿ 11 ಕೋಟಿ ರೂ. ನೀಡಿ ಇಂಗ್ಲೆಂಡ್ ದಾಂಡಿಗ ಫಿಲ್ ಸಾಲ್ಟ್ ಅವರನ್ನು ಖರೀದಿಸಿತು. ಈ ಖರೀದಿಗೆ ಮುಖ್ಯ ಕಾರಣ ಸಾಲ್ಟ್ ಅವರ ಸಿಡಿಲಬ್ಬರದ ಬ್ಯಾಟಿಂಗ್. ಆದರೆ ಆರ್‌ಸಿಬಿ ಸೇರಿದ ಬಳಿಕ ಸಾಲ್ಟ್ ಅವರ ಸಿಡಿಲಬ್ಬರದ ಮಾಯವಾಗಿದೆ. ಹೌದು, ಮೆಗಾ ಹರಾಜಿಗೂ ಮುನ್ನ ಫಿಲ್ ಸಾಲ್ಟ್ ಭರ್ಜರಿ ಫಾರ್ಮ್‌ನಲ್ಲಿದ್ದರು. ಆರ್‌ಸಿಬಿ ಸೇರುವ ಮುನ್ನ ಆಡಿದ 4 ಪಂದ್ಯಗಳಲ್ಲಿ 103, 41, 33 ಹಾಗೂ 58 ರನ್‌ಗಳ ಸ್ಫೋಟಕ ಇನಿಂಗ್ಸ್ ಆಡಿ ಅಬ್ಬರಿಸಿದ್ದರು. ಈ ಸಿಡಿಲಬ್ಬರದ ಬ್ಯಾಟಿಂಗ್ ಈ ಪೈಪೋಟಿಯೊಂದಿಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿ ಬರೋಬ್ಬರಿ 11 ಕೋಟಿ ರೂ. ನೀಡಿ ಸಾಲ್ಟ್ ಅವರನ್ನು ಖರೀದಿಸಿದೆ.

ಆದರೆ ಆರ್‌ಸಿಬಿ ತಂಡಕ್ಕೆ ಎಂಟ್ರಿ ಕೊಟ್ಟ ಬೆನ್ನಲ್ಲೇ ಫಿಲ್ ಸಾಲ್ಟ್ ಅವರ ಬ್ಯಾಟ್ ಸೈಲೆಂಟ್ ಆಗಿದೆ. ಕೊನೆಯ ಮೂರು ಪಂದ್ಯಗಳಲ್ಲೂ ಒಂದಂಕಿ ರನ್‌ಗಳಿಸುವಷ್ಟರಲ್ಲಿ ಪೆವಿಲಿಯನ್ ಸೇರಿದ್ದಾರೆ.ಫಿ ಫಿಲ್ ಸಾಲ್ಟ್ ಆರ್‌ಸಿಬಿ ತಂಡಕ್ಕೆ ಸೇರ್ಪಡೆಯಾದ ಬಳಿಕ ಟೀಮ್ ಇಂಡಿಯಾ ವಿರುದ್ಧ ಮೂರು ಪಂದ್ಯಗಳನ್ನಾಡಿದ್ದಾರೆ. ಮೊದಲ ಮ್ಯಾಚ್‌ನಲ್ಲಿ ಶೂನ್ಯಕ್ಕೆ ಔಟಾಗಿದ್ದ ಸಾಲ್ಟ್, ದ್ವಿತೀಯ ಪಂದ್ಯದಲ್ಲಿ 4 ರನ್‌ಗಳಿಸಿ ವಿಕೆಟ್ ಒಪ್ಪಿಸಿದ್ದರು.

## 10 ವರ್ಷಗಳ ಬಳಿಕ ಗೆಳೆಯನ ಭೇಟಿಯಾದ ವಿರಾಟ್



**ನಾಲ್ಕು ಐಸಿಸಿ ಪ್ರಶಸ್ತಿ**

ಜನವರಿ 30 ರಂದು ಪ್ರಾರಂಭವಾಗಲಿರುವ ರೈಲ್ವೇಸ್ ವಿರುದ್ಧದ ರಣಜಿ ಟ್ರೋಫಿ ಪಂದ್ಯಕ್ಕಾಗಿ ದೆಹಲಿ ತಂಡವನ್ನು ಪ್ರಕಟಿಸಲಾಗಿದೆ. 20 ಸದಸ್ಯರ ಈ ತಂಡದಲ್ಲಿ ಸ್ಟಾರ್ ಆಟಗಾರ ವಿರಾಟ್ ಕೊಹ್ಲಿ ಕೂಡ ಕಾಣಿಸಿಕೊಂಡಿದ್ದಾರೆ. ಇದರೊಂದಿಗೆ 12 ವರ್ಷಗಳ ಬಳಿಕ ಕಿಂಗ್ ಕೊಹ್ಲಿ ರಣಜಿ ಟೂರ್ನಿಯಲ್ಲಿ ಕಣಕ್ಕಿಳಿಯುತ್ತಿರುವುದು ಖಚಿತವಾಗಿದೆ. ಬಾಲ್ಯದಲ್ಲಿ ಜೊತೆಯಾಗಿ ಆಡಿ ಬೆಳೆದವರು ಜೊತೆ ಜೊತೆಯಾಗಿ ಕೀಟಲೆ ಮಾಡಿದವರು ಜೊತೆಯಾಗಿಯೇ ದೊಡ್ಡ ಕನಸು ಕಂಡವರು ಆದರೆ ಬೆಳೀತಾ ಬೆಳೀತಾ ದೂರವಾದರು. ಹೀಗೆ ದೂರವಾದವರು ಮಂಗಳವಾರ ಭೇಟಿಯಾಗಿದ್ದಾರೆ. ಅದು ಸಹ ಬರೋಬ್ಬರಿ 10 ವರ್ಷಗಳ ಬಳಿಕ. ಹೌದು, ವಿರಾಟ್ ಕೊಹ್ಲಿ ತಮ್ಮ ಬಾಲ್ಯದ ಗೆಳೆಯ ಶಾವೇಝ್ ಖಾನ್ ಅವರನ್ನು ಹತ್ತು ವರ್ಷಗಳ ಬಳಿಕ ಭೇಟಿಯಾಗಿದ್ದಾರೆ. ಇಂತಹದೊಂದು ಅವಿಸ್ಮರಣೀಯ ಕ್ಷಣಗಳಿಗೆ ಸಾಕ್ಷಿಯಾಗಿದ್ದು ದೆಹಲಿಯ ಡಿಡಿಸಿಎ ಕ್ರಿಕೆಟ್ ಸ್ಟೇಡಿಯಂ. ರಣಜಿ ಟೂರ್ನಿ ಪಂದ್ಯದ ಅಭ್ಯಾಸಕ್ಕಾಗಿ ವಿರಾಟ್ ಕೊಹ್ಲಿ ದೆಹಲಿಯ ಡಿಡಿಸಿ ಕ್ರಿಕೆಟ್ ಮೈದಾನಕ್ಕೆ ಆಗಮಿಸಿದ್ದರು. ಇದೇ ವೇಳೆ ಕೊಹ್ಲಿಯ ಚೈಲ್ಡ್‌ವುಡ್ ಫ್ರೆಂಡ್ ಶಾವೇಝ್ ಖಾನ್ ತಮ್ಮ ಮಗನೊಂದಿಗೆ ಮೈದಾನಕ್ಕೆ ಆಗಮಿಸಿದ್ದಾರೆ. ಅಲ್ಲದೆ ನೇರವಾಗಿ ವಿರಾಟ್ ಕೊಹ್ಲಿ ಬಳಿ ತೆರಳಿ ಸಪ್ರೈಸ್ ನೀಡಿದ್ದಾರೆ. ಈ ವೇಳೆ ಇಬ್ಬರು ಸಂತೋಷದಿಂದ ಆಲಿಂಗನ ಮಾಡುತ್ತಿರುವ ಫೋಟೋಗಳು ಇದೀಗ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಅಲ್ಲದೆ ಶಾವೇಝ್ ತನ್ನ ಮಗನನ್ನು ಕೊಹ್ಲಿಗೆ ಪರಿಚಯಿಸಿದ್ದಾರೆ. ವಿಶೇಷ ಎಂದರೆ 9 ವರ್ಷದ ಮಗನಿಗೂ ತಂದೆಯ ಫ್ರೆಂಡ್ ಅಂದರೆ ಪಂಚಪ್ರಾಣ. ಅದರಲ್ಲೂ ಶಾವೇಝ್ ಖಾನ್ ಅವರ ಪುತ್ರ ಕೂಡ ಕೊಹ್ಲಿಯಂತೆ ಕ್ರಿಕೆಟಿಗನಾಗಬೇಕೆಂದು ಕನಸು ಕಟ್ಟಿಕೊಂಡಿದ್ದಾರೆ. ಅಲ್ಲದೆ ಟೀಮ್ ಇಂಡಿಯಾ ಪರ ಆಡಬೇಕೆಂಬ ಮನದಾಸೆಯನ್ನು ಸಹ ಕೊಹ್ಲಿಗೆ ತಿಳಿಸಿದ್ದಾರೆ. ಇದಕ್ಕಾಗಿ ನಾನೇನು ಮಾಡಬೇಕೆಂದು ಪುಟ್ಟ ಬಾಲಕ ಕೊಹ್ಲಿ ಜೊತೆ ಕೇಳಿದ್ದರು. ಈ ಪ್ರಶ್ನೆಗೆ ವಿರಾಟ್ ಕೊಹ್ಲಿ ನೀಡಿದ ಉತ್ತರಪರಿಶ್ರಮ ಮತ್ತು ಕಠಿಣ ಪರಿಶ್ರಮ. ನೀನೀಗ ಒಂದು ಗಂಟೆ ಪ್ರಾಕ್ಟೀಸ್ ಮಾಡುತ್ತಿದ್ದರೆ, ಇನ್ಮುಂದೆ 2 ಗಂಟೆಗಳ ಕಾಲ ಪ್ರಾಕ್ಟೀಸ್ ಮಾಡು. ಸಕ್ಸಸ್ ಆಗಲು ಇದೊಂದೇ ದಾರಿ. ಈಗ ನೀ 50 ರನ್‌ಗಳಿಸುತ್ತಿದ್ದರೆ, 100 ರನ್‌ಗಳಿಸಲು ಪ್ರಯತ್ನಿಸು. ಈಗೇನು ಮಾಡುತ್ತಿದ್ದೀಯಾ ಅದನ್ನು ದ್ವಿಗುಣಗೊಳಿಸು. ಹೀಗೆ ಕಠಿಣ ಪರಿಶ್ರಮ ಪಡುತ್ತಾ ಆಟವನ್ನು ಆಸ್ವಾದಿಸು. ಹೀಗೆ ಮಾಡಿದರೆ ಮುಂದೊಂದು ದಿನ ಯಶಸ್ಸು ಸಿಗುತ್ತದೆ ಎಂದು ಶಾವೇಝ್ ಖಾನ್ ಪುತ್ರನಿಗೆ ವಿರಾಟ್ ಕೊಹ್ಲಿ ಕಿವಿಮಾತು ಹೇಳಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966